ಶಾಲೀವಾಹನ 1930 ಸರ್ವಧಾರಿ ಸಂವತ್ಸರ
ಮಾರ್ಗಶಿರ, ಪುಷ್ಯ, ಮಾಘ.
ಡಿಸೆಂಬರ್ 2008 : ಜನವರಿ ; ಫೆಬ್ರವರಿ-2009
ಬೆಲೆ : ರೂ. 30




ಆಯುರ್ವೇದದ ವೈದ್ಯಕೀಯ ತ್ರೈಮಾಸಿಕೆ

**ಅನುಷ್ಠಾನ-1**
**ವಿಶೇಷ**
ಪ್ರಾರಂಭಿಕ ಕೊಡುಗೆ

# ಅಗ್ನಿವೇಶ

*With Best Compliments From :*

# Amrita Drugs' Unique Approach to Life Style Management



## AMRITA KAYA KALPA RASAYAN

Protects, Prevents, Reinforces
the body in all Seasons,
from all Foods and against Pathogens

Your body deserves much more respect
than just antibiotics, analgesics,
anti-inflammatories and anti-allergics

Resort to Amrita Kaya Kalpa Rasayan for
Immunomodulation,
Anti-oxidants and Adaptogens.




## A sound mind in a sound body is a state of perfect health




## MANASA MITRA VATAKAM

The most effective of classical ayurvedic
formulations to tackle
"Anxiety & Depression",
the root cause of
Psycho Somatic disorders

***Indicated in :***
Poor Memory, Lack of concentration,
Anxiety, Depression, Premenstrual tensions,
Post Menopausal syndromes &
all types of skin diseases

AMRITA® DRUGS
A GMP Certified Company

**Factory :** Almasguda Village, Hyderabad - 500 058.
**Admn. Office :** Plot No. 33, Gayatri Nagar (Old), Karmanghat,
Hyderabad - 500 079. Phone : Office : 08415-244046, 244096,
Cell : 98493 43273 E-mail : amrita_drugs@yahoo.com
Website : www.amritadrugs.com

# ಅಗ್ನಿವೇಶ

ಪ್ರಧಾನ ಸಂಪಾದಕರು
ವೈದ್ಯ ವಾಸುಕಿಶಯನ ಜಿ.ವಿ.
94488 91405

ಉಪ ಸಂಪಾದಕರು
ವೈದ್ಯ ರಾಘವೇಂದ್ರ ಎನ್.
94481 82037

ಸಹ ಸಂಪಾದಕರು
ವೈದ್ಯ ಪ್ರಕಾಶ್. ಎಂ.ಬಿ.
94498 50502

ಸಂಪಾದಕ ಮಂಡಳಿ
**ವೈದ್ಯೆ ಶೃತಿ 98869 03290**
**ವೈದ್ಯ ವೆಂಕಟೇಶ್.ಹೆಚ್.ಎಸ್. 94480 91313**
**ವೈದ್ಯ ಜೀವೇಶ್ 94486 88756**

ಸಲಹಾ ಮಂಡಳಿ
**ವೈದ್ಯ ಅನಂತರಾಮನ್.ಎನ್. 99456 05337**
**ವೈದ್ಯ ಪದ್ಮನಾಭರಾವ್.ವಿ.ಆರ್. 98863 82141**
**ವೈದ್ಯೆ ಶುಭಂಕರಿ.ಪಿ.ರಾವ್ 080-26578620**
**ವೈದ್ಯೆ ವಸುಂಧರಾ ಭೂಪತಿ 94488 52420**

ಪ್ರಸಾರಾಂಗ ವ್ಯವಸ್ಥಾಪಕರು
**ಶ್ರೀ ನಾರಾಯಣ್ - 94482 84604**

**ಅನುಷ್ಠಾನ-1**
ಆಯುರ್ವೇದ ವೈದ್ಯಕೀಯ ತ್ರೈಮಾಸಿಕ
ಶಾಲೀವಾಹನ 1930 ಸರ್ವಧಾರಿ ಸಂವತ್ಸರ
ಮಾರ್ಗಶಿರ, ಪುಷ್ಯ, ಮಾಘ.
ಡಿಸೆಂಬರ್ 2008 : ಜನವರಿ ; ಫೆಬ್ರವರಿ-2009

**ಪ್ರಕಾಶಕರು**
**ಸಾಹಿತ್ಯ ಸಿಂಧು ಪ್ರಕಾಶನ**
ಕೇಶವಶಿಲ್ಪ, ಕೆಂಪೇಗೌಡನಗರ, ಬೆಂಗಳೂರು-560 019.
E-mail - vlmashayan@yahoo.com
agniveshaayurveda@yahoo.in




## ಅಗ್ನಿವೇಶನ

# ಅಂತರಂಗ....


- ಅಗ್ನಿವೇಶ ಉವಾಚ 5
- ಆಯುರ್ವೇದದ ದೃಷ್ಟಿಯಲ್ಲಿ – ವಿಚರ್ಚಿಕಾ, ಕಿಲಾಸ, ಶ್ವಿತ್ರ 6
- ತಮಕ ಶ್ವಾಸ 10
- ಪದಾಯು ಬಂಧ 14
- 'ಗಲಗಂಡ' – ಚಿಕಿತ್ಸೆ ಸುಲಭ ಸಾಧ್ಯ 15
- ಸೊಂಟದ ನೋವು ಸಾವಧಾನದಿಂದ ಸಮಾಧಾನ 20
- ಕಾಮಲಾ?! – ಹೆಪಟೈಟಿಸ್ – ಬಿ?! 24
- ರಸ ಪ್ರಶ್ನೆ 27
- ಗಜ್ಜುಗದ ಮರ ಲತಾಕರಂಜ 28
- ಆಧುನಿಕ ಸಮಾಜದಲ್ಲಿ ರಸಾಯನ ಚಿಕಿತ್ಸೆಯ ಮಹತ್ವ 29
- ಅಭ್ರಕಃ 34
- Marma Vijnana 38
- Modern Correlates Of Physics With The Concept Of Pancakosha. 41
- "Chickun – Gunya" - Nothing Mystery In It, 45
- ವಾಸಾ 49

# AGNIVESHA AYURVEDA ANUSHTANA

**(AN ACTIVITY OF RASHTROTTHANA AROGYASEVA KENDRA)**
Keshava Shilpa, Kempegowda Nagar, Bangalore - 560 019.
Tele : 26612730, 26676558, 26601586
E-mail : parishat@blr.vsnl.net.in

Agnivesha Ayurveda Anushtana is an activity of Rashtrotthana Parishat which is engaged in the Jana Shikshana, Janajagruti - Janaseva. Agnivesha Ayurveda Anushtana is dedicated to **Ayurveda Shikshana, Ayurveda Jagriti and Ayurveda Seva** with the following aims and objects.

Agnivesha Aryuveda Anushtana is running the following activities.

1. To promote such programmes which encourage Ayurvedic Medical Graduates to adopt Ayurvedic treatment only in their medical projfession.
2. To arrange periodical lectures by expert Doctors for the practicing Ayurvedic Medical Practitioners.
3. To organize clinical workshops for the Ayurvedic Doctors.
4. To Organise programmes that promote awareness about Ayurveda among the general Public.
5. To arrange lectures from expert Ayurveda Doctors in Schools and Colleges as well as Public Organization
6. To organize cultural programmes (entertainment together with awareness of Ayurveda) to propagate Ayurveda.
7. To organize free Ayurvedic Medical camps and distribute herbs to the public.
8. To bring out Ayurvedic publications that will help the public as well as the practitioners.
9. To Organize conferences of Ayurvedic Doctors and to identify and honour the Doctors who have delivered special service in the field of Ayurveda.
10. To identify the problems that come in the way of development of Ayurveda and to find solutions to them.

By becoming a member, one can participate in the programmes arranged by the Anushtana.

| | | |
|---|---|---|
| Membership Fee (Annual) : | Medical students | Rs. 100/- |
| | Doctors | Rs. 250/- |
| | Others | Rs. 500/- |




ಸದಸ್ಯರಿಂದ ವೈದ್ಯ ಶ್ರೀ ರಾಮುರವರ ಸನ್ಮಾನ

## 2007 ರಲ್ಲಿ ನಡೆದ ಧನ್ವಂತರಿ ಜಯಂತಿ



ವೈದ್ಯ ಸಮೂಹ



ಧನ್ವಂತರಿ ಹೋಮ



ಉಚಿತ ಚಿಕಿತ್ಸಾ ಶಿಬಿರ

## ಸಂಪಾದಕೀಯ...

# ಅಗ್ನಿವೇಶ ಉವಾಚ

ಸ್ವಾಗತಂ ವಃ ಸರ್ವ ಏವ ಅಮೀಮಾಂಸ್ಯ ಧನ್ವಂತ್ರ್ಯಾವತಾರಃ ।
ಆಯುರ್ವೇದ ಅಧ್ಯಾಪಶ್ಚ ಭವಂತೋಽವತ್ಸಾಃ ।
ಇತಿ ಭಗವಾನ್ ಅಗ್ನಿವೇಶ ಉವಾಚ ॥

ಆತ್ಮೀಯ ಆಯುರ್ವೇದ ಬಂಧುಗಳೇ,

"ನಾವೆಲ್ಲ ಉತ್ತಮ ಪುರುಷರು, ಧನ್ವಂತರಿಯ ಅವತಾರಗಳು" ಹೀಗೆ ಸಂಭೋದಿಸಿ ಭಗವಾನ್ ಅಗ್ನಿವೇಶರು ನಮ್ಮೆಲ್ಲರನ್ನೂ ಆಯುರ್ವೇದ ವಿದ್ಯೆಯನ್ನು ಪಡೆಯಲು ಸ್ವಾಗತಿಸುತ್ತಿದ್ದಾರೆ. ಮಹರ್ಷಿ ಅಗ್ನಿವೇಶರಿಗೆ ಪ್ರಣಾಮಗಳು.

"ಅಗ್ನಿವೇಶ ಆಯುರ್ವೇದ ಅನುಷ್ಠಾನ"- ಇದು ನಾಡಿನ ಪ್ರಮುಖ ಸಾಮಾಜಿಕ ಸಂಸ್ಥೆಯಾಗಿರುವ ರಾಷ್ಟ್ರೋತ್ಥಾನ ಪರಿಷತ್‌ನ ಒಂದು ಚಟುವಟಿಕೆ. ಪ್ರಾರಂಭವಾಗಿ ಇಂದಿಗೆ ಸುಮಾರು ಹದಿನೈದು ವರ್ಷಗಳಾಗಿವೆ. ಅಂದು ಅನೇಕ ಆಯುರ್ವೇದ ವೈದ್ಯರು ತಮ್ಮ ವಿದ್ಯಾರ್ಥಿದೆಸೆ ಮುಗಿದ ನಂತರ ವೃತ್ತಿಯನ್ನು ನಡೆಸಲು ಸೂಕ್ತ ಮಾರ್ಗದರ್ಶನಕ್ಕಾಗಿ ಪರದಾಡುತ್ತಿದ್ದಾಗ ವೈದ್ಯ ಅನಂತರಾಮನ್ ಹಾಗೂ ವೈದ್ಯ ವಿ.ಆರ್. ಪದ್ಮನಾಭರಾವ್ ಈ ಈರ್ವರೂ ಜತೆಗೂಡಿ ಆಯುರ್ವೇದ ವೈದ್ಯರುಗಳ ಹಾಗೂ ವಿದ್ಯಾರ್ಥಿಗಳಿಗಾಗಿ ಪ್ರಾರಂಭಿಸಿದಂತಹ ವೇದಿಕೆ-"ಅಗ್ನಿವೇಶ ಆಯುರ್ವೇದ ಅನುಷ್ಠಾನ". ಅಂದು ಹಲವು ಹತ್ತು ಮಂದಿ ವೈದ್ಯರು ಸೇರಿ ಪ್ರಾರಂಭಿಸಿದ ಈ ವೇದಿಕೆ ಇಂದು ಹಲವು ನೂರು ಮಂದಿ ಸದಸ್ಯರನ್ನು ಹೊಂದಿದೆ. ಈ ವೇದಿಕೆಯ ಹೆಸರನ್ನು ಸೂಕ್ಷ್ಮವಾಗಿ ಗಮನಿಸಿದರೆ ಒಂದು ಅರ್ಥ ಹೊಳೆಯುತ್ತದೆ. ಅಲ್ಲಿ "ಅನುಷ್ಠಾನ" ಎಂದಿದೆ, ಪ್ರತಿಷ್ಠಾನ" ಎಂದಿಲ್ಲ. ಅಂದರೆ ಆಯುರ್ವೇದವನ್ನು 'ವೃತ್ತಿಯಲ್ಲಿ' ಹಾಗೂ 'ಸಾರ್ವಜನಿಕರಲ್ಲಿ' ಯಶಸ್ವಿಯಾಗಿ ಪ್ರಾಯೋಗಿಕ ವಾಗಿ ಜಾರಿಗೆ ತರುವುದು. ಕಳೆದ ಹದಿನೈದು ವರ್ಷಗಳಿಂದ "ಅಗ್ನಿವೇಶ ಆಯುರ್ವೇದ ಅನುಷ್ಠಾನ" ಇದನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದೆ. ವೃತ್ತಿಪರ ವೈದ್ಯರಿಗಾಗಿ ಪ್ರತಿ ತಿಂಗಳು ಅನುಭವಿ ವೈದ್ಯರಿಂದ ಉಪನ್ಯಾಸಗಳನ್ನು ಏರ್ಪಡಿಸಿ, ವೃತ್ತಿಗೆ ಅನುಕೂಲವಾಗುವಂತಹ ಮಾರ್ಗದರ್ಶನಗಳನ್ನೂ, ವೈದ್ಯರಲ್ಲಿರುವ ಕ್ರತುಶಕ್ತಿಯನ್ನು ಹೊರತೆಗೆಯುವಂತಹ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಇದರ ಉಪಯೋಗ-ಲಾಭ ಪಡೆದವರಲ್ಲಿ ನಾನು ಒಬ್ಬ ಎಂದು ಹೇಳಲು ಹೆಮ್ಮೆಯಾಗುತ್ತದೆ.

ಹಾಗೆಯೇ ಸಾರ್ವಜನಿಕರಲ್ಲಿ ಸಹ ಆಯುರ್ವೇದವನ್ನು ಪ್ರಚುರಪಡಿಸಿ, ಸೂಕ್ತ ತಿಳುವಳಿಕೆ ಹಾಗೂ ಆಯುರ್ವೇದದ ಬಗ್ಗೆ ಅವರಲ್ಲಿ ಒಲವು ಮೂಡಿಸಿ ತನ್ಮೂಲಕ ಆಯುರ್ವೇದಕ್ಕೆ ಹಿಂದಿದ್ದ ವೈಭವವನ್ನು ಗಳಿಸಿ ಕೊಡುವಂತಹ ಕಾರ್ಯಕ್ರಮಗಳನ್ನೂ ಸಹ ಯಶಸ್ವಿಯಾಗಿ ನಡೆಸಿದೆ, ಈಗಲೂ ನಡೆಸುತ್ತಿದೆ.

ಆಯುರ್ವೇದದ ಅನುಷ್ಠಾನದ ಮುಂದಿನ ಹೆಜ್ಜೆಯಾಗಿ ನಡೆಸಿರುವ ಪ್ರಯತ್ನವೇ ಈಗ ನಿಮ್ಮ ಕೈನಲ್ಲಿರುವ "ಅಗ್ನಿವೇಶ" ಪತ್ರಿಕೆ. ಇದು ಮೊದಲ ಸಂಚಿಕೆ. ತ್ರೈಮಾಸಿಕವಾಗಿ ಇನ್ನು ಮುಂದೆ ನಿರಂತರವಾಗಿ ಬರಲಿದೆ. ಇದು ಸಂಪೂರ್ಣವಾಗಿ ಆಯುರ್ವೇದ ವೈದ್ಯರು ಹಾಗೂ ವಿದ್ಯಾರ್ಥಿಗಳಿಗಾಗಿ ಮೀಸಲಾದ ಪತ್ರಿಕೆ. ಈಗಾಗಲೇ ಹೇಳಿದಂತೆ ಪ್ರತಿಯೊಬ್ಬ ಆಯುರ್ವೇದ ವಿದ್ಯಾರ್ಥಿ ಮತ್ತು ವೈದ್ಯರಲ್ಲಿ ಇರುವಂತಹ ಕ್ರತುಶಕ್ತಿಯನ್ನು ಬಡಿದೆಬ್ಬಿಸುವಂತಹ; ವೃತ್ತಿಗೆ ಅವಶ್ಯಕವಾದ ಮಾರ್ಗದರ್ಶನ ನೀಡುವಂತಹ, ಬುದ್ಧಿಗೆ ಗ್ರಾಸ ನೀಡುವಂತಹ ಲೇಖನಗಳು ಅನುಭವಿ ವೈದ್ಯರ ಲೇಖನಿಯಿಂದ ಮೂಡಿಬರಲಿದೆ. ಆಯುರ್ವೇದ ವೈದ್ಯರ ಮನದಲ್ಲಿ ಮೂಡಿ ಬರುವಂತಹ ದ್ವಂದ್ವಗಳನ್ನು ನಿವಾರಿಸುವಂತಹ ಲೇಖನಗಳು ಸಹ ಬರಲಿದೆ. ದ್ವಂದ್ವಗಳ ಮೂಲ-

1. ಆಯುರ್ವೇದ ವೃತ್ತಿಯಲ್ಲಿನ ಅನುಭವದ ಕೊರತೆ.
2. ಪಾಶ್ಚಿಮಾತ್ಯ ವೈದ್ಯ ಪದ್ಧತಿ-

ಇಂದು ಜನಪ್ರಿಯ ವೈದ್ಯ ಪದ್ಧತಿ. ಆಯುರ್ವೇದಕ್ಕೆ ಇಂದು "ಪರ್ಯಾಯ ವೈದ್ಯ ಪದ್ಧತಿ" ಎಂಬ ಹಣೆಪಟ್ಟಿ ಬಂದಿದೆ. ತನ್ನ ಸ್ವಂತ ನೆಲದಲ್ಲೇ ಅತಂತ್ರವಾಗಿದೆ. ಆಯುರ್ವೇದ ವೈದ್ಯ ಸಹ ಅನಿವಾರ್ಯವಾಗಿ ಪಾಶ್ಚಿಮಾತ್ಯ ವೈದ್ಯಪದ್ಧತಿಯ ಕಬಂಧ ಬಾಹುಗಳಲ್ಲಿ ಬಂಧಿತನಾಗಿದ್ದಾನೆ. ಇದು "ಅನಿವಾರ್ಯ ಪೀಡೆ" ಎಂದರೂ ಸರಿ. ಹೆಜ್ಜೆಹೆಜ್ಜೆಗೂ ಇದನ್ನು ಆಯುರ್ವೇದ ವೈದ್ಯ ಎದುರಿಸಲೇಬೇಕು. ರೋಗಿಗಳೂ ಸಹ ಪಾಶ್ಚಿಮಾತ್ಯ ವೈದ್ಯ ಪದ್ಧತಿಯ ಕನ್ನಡಕವನ್ನು ಧರಿಸಿ ಆಯುರ್ವೇದ ಶಾಸ್ತ್ರದ ತುಲನೆಗೆ ಮುಂದಾಗುತ್ತಾರೆ. ಇಂತಹ ಸಂದರ್ಭಗಳಲ್ಲಿ ಆಯುರ್ವೇದ ವೈದ್ಯರಿಗೆ ಇರುಸುಮುರುಸಾಗಿ, ಮಾನಸಿಕ ಹಿಂಸೆಗೂ ಒಳಗಾಗುವುದುಂಟು. ಇಂತಹ ಅತಂತ್ರಮಯ, ಅಯೋಮಯ ಪರಿಸ್ಥಿತಿಯನ್ನು ಎದುರಿಸುವಂತಹ ಚೈತನ್ಯವನ್ನು "ಅಗ್ನಿವೇಶ" ನೀಡಲಿದೆ.

ಆತ್ಮೀಯ ಆಯುರ್ವೇದ ಬಂಧುಗಳೇ - ನಮ್ಮ ಈ ಪ್ರಯತ್ನಕ್ಕೆ ನೀವೂ ಸಹ ಕೈಜೋಡಿಸಿ. ನಮ್ಮ ಧ್ವನಿಯ ಜೊತೆಗೆ ನಿಮ್ಮ ಧ್ವನಿಯನ್ನು ಮಾರ್ದನಿಸಿ. ಸಹಸ್ರಾರು ಕೈಗಳು, ಸಹಸ್ರಾರು ಧ್ವನಿಗಳೂ ಒಟ್ಟುಗೂಡಿದರೆ ಆಯುರ್ವೇದ ತನ್ನ ಗತವೈಭವವನ್ನು ಮರಳಿ ಪಡೆಯುವುದರಲ್ಲಿ ಸಂಶಯವೇ ಇಲ್ಲ.

ಮಿತ್ರರೇ, ಈಗ ನಿಮ್ಮ ಕೈಯಲ್ಲಿರುವುದು ಪ್ರಥಮ ಸಂಚಿಕೆ. ಮೂಡಿಬಂದಿರುವ ಲೇಖನಗಳು ಹೇಗಿವೆ? ನೀಡಿರುವ ಮಾಹಿತಿಗಳು ಸಾಕಷ್ಟಿದೆಯೇ? ಉಪಯುಕ್ತವಾಗಿವೆಯೇ? ಲೋಪಗಳಿವೆಯೇ? ಎಲ್ಲವನ್ನೂ ಮುಕ್ತವಾಗಿ ಚರ್ಚಿಸಿ, ಸಂಚಿಕೆಯು ಮತ್ತಷ್ಟು ಉತ್ತಮ ವಾಗಿ ಮೂಡಿಬರಲು ಸಲಹೆಗಳೂ ಬರಲಿ.

ಮುಂದಿನ ಸಂಚಿಕೆಯಲ್ಲಿ ಮತ್ತಷ್ಟು ಸಂವಾದ ನಡೆಸೋಣ.

ವಂದನೆಗಳು,

ವೈದ್ಯ ವಾಸುಕಿಶಯನ ಜಿ.ವಿ.
ಪ್ರಧಾನ ಸಂಪಾದಕ

# ಆಯುರ್ವೇದದ ದೃಷ್ಟಿಯಲ್ಲಿ – ವಿಚರ್ಚಿಕಾ, ಕಿಲಾಸ, ಶ್ವಿತ್ರ

"ಕುಷ್ಠ" ಎಂಬ ಪದ ಆಯುರ್ವೇದದಲ್ಲಿ ಬಹಳ ವಿಸ್ತೃತ ಅರ್ಥ ಹೊಂದಿದೆ. ಇದರ ವೈಶಾಲ್ಯತುಂಬಾ ಹೆಚ್ಚು. ಏಕೆಂದರೆ ತ್ವಚೆಯಲ್ಲಿ ಉಂಟಾಗುವ ಎಲ್ಲಾ ರೋಗಗಳನ್ನು ಈ ಒಂದು ಪದದಿಂದಲೇ ಗುರುತಿಸುತ್ತಾರೆ. ಕಾರಣ "ಕುಷ್ಠ" ಎಂಬ ಪದದ ಅರ್ಥ ಅಷ್ಟು ವಿಶಿಷ್ಟ.

**"ಕುಷ್ಣತಿ ವಪುಃ ಇತಿ ಕುಷ್ಠಮ್"॥**

ಯಾವುದು ಶರೀರವನ್ನು ವಿಕೃತಗೊಳಿಸುವುದೋ ಅಥವಾ ಶರೀರವನ್ನು ವಿಕೃತವಾಗಿ ಕಾಣುವಂತೆ ಮಾಡುತ್ತದೆಯೋ ಅದನ್ನು ಕುಷ್ಠ ಎಂದು ಪರಿಗಣಿಸಬಹುದು. ಇದರಲ್ಲಿರುವ ವೈವಿಧ್ಯ ಅಪಾರ. ನಮ್ಮಲ್ಲಿ ಹೇಳಲಾದ 18 ವಿಧ ಕುಷ್ಠಗಳಲ್ಲಿ 7 ಮಹಾಕುಷ್ಠ 11 ಕ್ಷುದ್ರಕುಷ್ಠ.

ಆಯುರ್ವೇದ ವೈದ್ಯರಲ್ಲಿ ಬರುವ ರೋಗಿಗಳಲ್ಲಿ ಚರ್ಮದ ತೊಂದರೆ ಇರುವ ರೋಗಿಗಳು ಅಪಾರ, ಇಂದಿನ ಕಾಲದಲ್ಲಿ ವಿಚರ್ಚಿಕಾ, ಕಿಲಾಸ, ಕಿಟಿಭ ಈ ವಿಧವಾದ ಕುಷ್ಠಗಳು ಅತ್ಯಂತ ಸಾಮಾನ್ಯವಾಗಿ ಕಂಡುಬರುವ ಕುಷ್ಠ ಪ್ರಭೇಧಗಳು, ಇವುಗಳ ಮೇಲೆ ಒಂದು ನೋಟ ಹರಿಸೋಣ.

1. "ಎಕ್ಸಿಮಾ"ಎಂದು ಜನ ಸಾಮಾನ್ಯರಲ್ಲಿ ಪ್ರಸಿದ್ಧವಾಗಿರುವ ರೋಗವನ್ನು ಆಯುರ್ವೇದದ ಮೂಲಗ್ರಂಥವು "ವಿಚರ್ಚಿಕಾ" ಎಂಬ ಹೆಸರಿನಿಂದ ಗುರುತಿಸಿದೆ. ಈ ರೋಗದ ಹೆಸರಿನ ಅರ್ಥವು ಹೀಗಿದೆ.

"ವಿಶೇಷೇಣ ಚರ್ಯತೆ ವಿದಾರ್ಯತೆ ಪಾಣಿಪಾದ ತ್ವಕ್ ಅನಯಾ ಇತಿ" ಈ ವಿಧದ ಕುಷ್ಠದ ವೈಶಿಷ್ಟ್ಯವೆಂದರೆ-ಕೈ ಮತ್ತು ಕಾಲು ಕಾಲಿನ ಭಾಗದ ಚರ್ಮವು ಸೀಳಿಕೊಂಡು ಅತೀವವಾದ ನವೆಯು ಇರುತ್ತದೆ. "ವಿಚರ್ಚಿಕಾ"ಎಂಬ ಶಬ್ದವು ಸಂಸ್ಕೃತ ಭಾಷೆಯಲ್ಲಿ ಸ್ತ್ರೀಲಿಂಗದ ಪದವಾಗಿದೆ. ಮತ್ತೊಂದು ಕಾಕತಾಳೀಯವಾದ ವೈಶಿಷ್ಟ್ಯವೆಂದರೆ ವಿಚರ್ಚಿಕಾ ರೋಗವು ಸ್ತ್ರೀಯರಲ್ಲೇ ಹೆಚ್ಚಾಗಿ ಕಂಡುಬರುತ್ತದೆ.

ನಮ್ಮ ಗ್ರಂಥಗಳಲ್ಲಿ ವಿಚರ್ಚಿಕಾ ರೋಗವನ್ನು ಕ್ಷುದ್ರಕುಷ್ಠಗಳಲ್ಲಿ ಸೇರಿಸಿದ್ದಾರೆ. ಅಂದರೆ ವೈದ್ಯರು ರೋಗಿಯ ದೋಷ ಸ್ಥಿತಿಯನ್ನು ಚೆನ್ನಾಗಿ ತಿಳಿದುಕೊಂಡು ಸೂಕ್ತವಾದ ಔಷಧಿ ಚಿಕಿತ್ಸೆ ಮತ್ತು ಇದರ ಜೊತೆಗೆ ಅನುಗುಣವಾದ ಆಹಾರದ ಪಥ್ಯಾಪಥ್ಯ ತಿಳಿಸಿದರೆ ಸುಲಭವಾಗಿ ಗುಣಪಡಿಸಬಹುದು. ಮಾಹಾಕುಷ್ಠಗಳಂತೆ ವಿಚರ್ಚಿಕಾ ರೋಗವು ಚಿಕಿತ್ಸೆಗೆ ಕಷ್ಟಸಾಧ್ಯವಾದ ರೋಗವಲ್ಲ.

ವಿಚರ್ಚಿಕಾ ಕಫ ದೋಷ ಪ್ರಧಾನವಾದ ಚರ್ಮವ್ಯಾಧಿ ಸುಶ್ರುತಚಾರ್ಯರ ಪ್ರಕಾರ ವಿಚರ್ಚಿಕಾ ತ್ವಚೆಯ ಐದನೆಯ "ವೇದಿನಿ" ಪದರದಲ್ಲಿ/ಪದರದವರೆಗೂ (1. ಅನುಭಾಸಿನೀ, 2. ರೋಹಿಣೀ 3. ಶ್ವೇತಾ 4.ತಾಮ್ರಾ) ಕಂಡುಬರುವಂತಹದ್ದಾದರೆ, ಚರಕಾಚಾರ್ಯರು ಇದು ನಾಲ್ಕನೇಯ ಪದರದಲ್ಲಿ ಕಾಣುವಂತಹ ದ್ದೆಂದು ಹೇಳುತ್ತಾರೆ.

ವಿಚರ್ಚಿಕಾ ಸಂಭವಿಸಲು ಮುಖ್ಯ ಕಾರಣ ಸಾಮಾನ್ಯ ಕುಷ್ಠದಂತೆ ಎಂದು ತಿಳಿಯಬಹುದು.

"ವಿತಾದಯಃ ತ್ರಯೋ ದುಷ್ಟಾಃ ತ್ವಗ್ರಕ್ತ ಮಾಂಸಾಂಬುಚ ।
ದೂಷಯಂತಿ ಸ ಕುಷ್ಠಾನಾಂ ಸಪ್ತಕೋ ದ್ರವ್ಯಸಂಗ್ರಹಃ ॥"

ವಿರುದ್ಧಾಹಾರಾದಿಗಳ ಸೇವನೆಯಿಂದ, ಪ್ರಜ್ಞಾಪರಾಧ ಅಥವಾ ಪಾಪಕರ್ಮ ಮಾಡುವುದರ ಫಲವಾಗಿ ದೇಹದಲ್ಲಿನ ತ್ರಿದೋಷಗಳು ಕುಪಿತಗೊಂಡು ತ್ವಚೆಯಲ್ಲಿರುವ ಜಲೀಯಾಂಶ (ನೀರಿನಾಂಶ)ವನ್ನು ದೂಷಿತಗೊಳಿಸಿ ರಕ್ತ, ಮಾಂಸ, ಮೇದ ಹಾಗೂ ಸಮಸ್ತ ಶರೀರವನ್ನು ಕಲುಷಿತಗೊಳಿಸುವುದರ ಮೂಲಕ ಹಲವಾರು ಚರ್ಮವ್ಯಾಧಿಗಳು ಸಂಭವಿಸುವುದಕ್ಕೆ ಕಾರಣವಾಗುತ್ತದೆ.

ದೂಷಿತಗೊಂಡಂತಹ ಈ ದೋಷಾದಿಗಳು ಕೈ ಕಾಲುಗಳು ಮೇಲಿರುವ ತ್ವಚೆ ಹಾಗೂ ಮಾಂಸದ ನಡುವಿನಲ್ಲಿ ಸಂಚಿತಗೊಂಡು ನಾನಾ ವಿಧದ ಸ್ರಾವವುಳ್ಳ ಒರಟು ಸ್ಪರ್ಶ ಹೊಂದಿರುವ ಉರಿ, ನವೆ ಹೆಚ್ಚಾಗಿರುವಂತಹ ಬೂದು ಬಣ್ಣದ ಗುಳ್ಳೆಗಳು ಏಳುತ್ತದೆ. ಇವುಗಳ ಬಣ್ಣ ವಾತದೋಷದಿಂದಲೂ, ನವೆ ಕಫದೋಷದಿಂದಲೂ, ಉರಿ, ಸ್ರಾವಗಳು ಪಿತದೋಷದಿಂದಲೂ ಸಂಭವಿಸುತವೆ.

**ದೋಷಾಃ ಪ್ರದೂಷ್ಯ ತ್ವಕ್ ರಕ್ತ ಮಾಂಸಂ ಪಾಣಿಪಾದ ಸಮಾಶ್ರಿತಾಃ ।
ಪಿಡಕಾಂ ಕನಯಂತ್ಯಾಶು ದಾಹಕಂಡೂ ಸಮನ್ವಿತಾಮ್।
ದಾಲ್ಯತೆ ತ್ವಕ್ ಖರಾ ರೂಕ್ಷಾ ಪಾರ್ಣ್ಯೋಃ ಜ್ಞೇಯಾ ವಿಚರ್ಚಿಕಾ ॥"**

ಈಗಾಗಲೇ ತಿಳಿಸಿರುವಂತೆ ಇದರ ಚಿಕಿತ್ಸೆ ಅತ್ಯಂತ ಕಷ್ಟಾವಾದು ದ್ದಲ್ಲ. ಮೊದಲಿಗೆ ಸಾಮಾನ್ಯ ಕುಷ್ಠ ಚಿಕಿತ್ಸೆಯ ಬಗ್ಗೆ ಗಮನ ಹರಿಸೋಣ. ಸಾಮಾನ್ಯವಾಗಿ ಯಾವುದೇ ಕುಷ್ಠ ರೋಗಿಯ ಚಿಕಿತ್ಸೆಯನ್ನು ಬಾಹ್ಯ (ಸ್ಥಾನಿಕ) ಹಾಗೂ ಆಭ್ಯಂತರ ಚಿಕಿತ್ಸೆಗಳಾಗಿ ವಿಂಗಡಿಸಬಹುದು.

"ವಾತೋತ್ತರೇಷು ಸರ್ಪಿಃ, ವಮನಂ ಶ್ಲೇಷ್ಮೋತ್ತರೇಷು ಕುಷ್ಠೇಷು ।
ಪಿತ್ತೋತ್ತರೇಷು ಮೋಕ್ಷೋ ರಕ್ತಸ್ಯ ವಿರೇಚನಂ ಚಾಗ್ರೆ ॥"

ವಾತಪ್ರಧಾನ ಕುಷ್ಠದಲ್ಲಿ ಸ್ನೇಹಪಾನ-ವಿಶೇಷವಾಗಿ ಘೃತಪಾನ ಪಿತ್ತಪ್ರಧಾನಕುಷ್ಠದಲ್ಲಿ ವಿರೇಚನ ಹಾಗೂ ರಕ್ತಮೋಕ್ಷಣ, ಕಫ ಪ್ರಧಾನ ಕುಷ್ಠದಲ್ಲಿ ವಮನವನ್ನು ನಿರ್ದೇಶಿಸಲಾಗಿದೆ. ಎಲ್ಲಾ ಚರ್ಮವ್ಯಾಧಿ ಗಳಲ್ಲಿಯೂ ತ್ರಿಫಲಾ, ಖದಿರಚೂರ್ಣಗಳು ಅತ್ಯಂತ ಉಪಯುಕ್ತ. ಮಾರುಕಟ್ಟೆಯಲ್ಲಿ ಲಭ್ಯವಿರುವ ತ್ರಿಫಲಾಚೂರ್ಣ ಹಾಗೂ

ಖದಿರಚೂರ್ಣಗಳ ಸಮ ಪ್ರಮಾಣದ ಮಿಶ್ರಣವನ್ನು ನೀರಿನಲ್ಲಿ ಕಲೆಸಿ, ಸ್ನಾನದ ಕೊನೆಯಲ್ಲಿ ಮೈ ಒದ್ದೆಯಿರುವಾಗ ತೊಂದರೆಯಿರುವ ಚರ್ಮದ ಭಾಗಗಳಿಗೆ ತಿಕ್ಕಿ ಸ್ವಲ್ಪ ಸಮಯದ ನಂತರ ತೊಳೆಯಬೇಕು. ಇದನ್ನು ಉದ್ವರ್ತನ ಚಿಕಿತ್ಸೆ ಎನ್ನುತ್ತಾರೆ.

"ಉದ್ವರ್ತನಂ ಕಫಹರಂ ಮೇದಸಃ ಪ್ರವಿಲಾಯನಮ್।
ಸ್ಥಿರೀಕರಣಮಂಗಾನಾಂ ತ್ವಕ್ ಪ್ರಸಾದಕರಂ ಪರಮ್॥"

ಚರ್ಮದಲ್ಲಿ ಆಶ್ರಿತವಾಗಿರುವ ಕಫವನ್ನು ನಿವಾರಣೆ ಮಾಡುವುದರೊಂದಿಗೆ ಕಿತ್ತುಹೋದ ಚರ್ಮವನ್ನು ಸರಿಪಡಿಸುತ್ತದೆ. (ತ್ವಕ್ ಪ್ರಸಾದಕರ) ವಿಚರ್ಚಿಕಾ ಚಿಕಿತ್ಸೆಯಲ್ಲಿ ವಿಶೇಷವಾದ ಆಭ್ಯಂತರ ಔಷಧವೆಂದರೆ–

1. ಹರಿದ್ರಾಖಾಂಡ (ಲಭ್ಯವಿದೆ)– ½ ಚಮಚಚೂರ್ಣವನ್ನು ತೆಗೆದುಕೊಂಡು ಬಿಸಿನೀರಿನೊಡನೆ ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಹಾಗೂ ರಾತ್ರಿ ಮಲಗುವಾಗ (ಮೊದಲ ಹಾಗೂ ಐದನೇ ಔಷಧಕಾಲ–ಈ ಔಷಧ ಸೇವನಕಾಲದಲ್ಲಿ ಲೇಖನ ಔಷಧಿಗಳನ್ನು ಬಳಸಬೇಕು) ಸೇವಿಸಬೇಕು. ವಿಚರ್ಚಿಕಾ ರೋಗವು ತೀವ್ರವಾಗಿದ್ದಾಗ ಮೇಲಿನ ಔಷಧವನ್ನು ಪದೇ ಪದೇ ಅಂದರೆ ಗಂಟೆಗೊಮ್ಮೆಯೂ ಕೊಡಬಹುದು (ಮುಹುರ್ಮುಹು).
2. ತಾಲಕೇಶ್ವರ ರಸ (ಲಭ್ಯವಿದೆ)– ಒಂದು ಮಾತ್ರೆಯನ್ನು ಜೇನುತುಪ್ಪದೊಂದಿಗೆ (ಲೇಖನಗುಣ ಹೊಂದಿರುವ) ದಿನಕ್ಕೆ ಮೂರು ಬಾರಿ ಕೊಡಬೇಕು. [ವಿಶೇಷ ಸೂಚನೆ: ತಾರಕೇಶ್ವರ ರಸ–ಪಮೇಹದಲ್ಲಿ, ತಾಲಕೇಶ್ವರರಸವನ್ನು– ಕುಷ್ಠದಲ್ಲಿ ನಿರ್ದೇಶಿಸಲಾಗಿದೆ]

ಸ್ಥಾನಿಕ ಚಿಕಿತ್ಸೆಯಾಗಿ:–

1. ಸ್ನುಹೀ ಕ್ಷೀರವನ್ನು ಗೃಹಧೂಮ ಹಾಗೂ ಸೈಂಧವಲವಣದೊಂದಿಗೆ ತೈಲದಲ್ಲಿ ಬೆರೆಸಿ ಲೇಪ ಮಾಡಬಹುದು.
2. ದೂರ್ವಾದಿ ತೈಲ [ಎಳ್ಳೆಣ್ಣೆಯನ್ನು ಪ್ರಧಾನವಾಗಿ ಹೊಂದಿರುವ ದೂರ್ವಾದಿತೈಲ ಹಾಗೂ ಕೊಬ್ಬರಿ ಎಣ್ಣೆಯನ್ನು ಹೊಂದಿರುವ ದೂರ್ವಾದಿ ಕೇರಮ್‌ಗಳು ಲಭ್ಯವಿದೆ] ಕಚ್ಚು, ಪಾಮಾ, ವಿಚರ್ಚಿಕಗಳಲ್ಲಿ ಇದರಿಂದ ನಿತ್ಯ ಅಭ್ಯಂಗ ಮಾಡಬಹುದು.

ಇದರೊಂದಿಗೆ ಸರ್ವಕುಷ್ಠ, ವಿಸರ್ಪ, ವಿಚರ್ಚಿಕಾಗಳಲ್ಲಿ ಬಳಸಬಹುದಾದ "ಆರಗ್ವದಿನಿ ಕ್ವಾಥ" ಶೀಘ್ರವಾಗಿ ಪರಿಣಾಮ ಬೀರುತ್ತದೆ. ಈ ಆರಗ್ವಧಾದಿ ಕ್ವಾಥದ ಗುಣಧರ್ಮಗಳನ್ನು ಹೊಂದಿರುವ ಆರಗ್ವಧಾರಿಷ್ಠ (ಲಭ್ಯವಿದೆ) ಕೂಡ ಅತ್ಯಂತ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತದೆ.

3. ಕಿಲಾಸ – VITILIGO ALBIMISM ಎಂದು ಕರೆಯಲ್ಪಡುವ ತೊನ್ನು, ಬಿಳುಪು ಅಥವಾ ಬಿಳಿಮಚ್ಚೆರೋಗವನ್ನು ಮೂಲಗ್ರಂಥಗಳಲ್ಲಿ "ಕಿಲಾಸ" ಎಂದು ಹೆಸರಿಸಲಾಗಿದೆ. ಕಿಲಾಸ ಪದದ ಮೂಲ ಅರ್ಥ "ಕಿಲಂ ವರ್ಣ ಅಸ್ಯೇತಿ ಕ್ಷಿಪತಿ ವಿಕೃತಿಂ ಕರೋತಿ ಇತಿ ಯಾವತ್॥ ರೋಗ ವಿಶೇಷಃ॥ ಯಾವುದು ವರ್ಣವನ್ನು ವಿಕೃತಗೊಳಿಸುತ್ತದೆಯೋ ಅದು ಕಿಲಾಸ. ತ್ವಚೆಯ ಸ್ಕಾಲನೇಯ "ತಾಮ್ರ" ಪದರದಲ್ಲಿ ಕಿಲಾಸ ಉಂಟಾಗುವುದೆಂದು ಸುಶ್ರುತಾಚಾರ್ಯರು ಹೇಳಿದರೆ, ಮೂರನೆಯ ಪದರದಲ್ಲಿ ಕಿಲಾಸ ಕಾಣಿಸಿಕೊಳ್ಳುವುದೆಂಬುದು ಚರಕಾಚಾರ್ಯರ ಅಭಿಪ್ರಾಯ.

ದೂಷಿತಗೊಂಡಂತಹ ವಾತ, ಪಿತ್ತ, ಕಫಗಳು, ರಕ್ತ, ಮಾಂಸ, ಮೇದೋಧಾತುಗಳು– ಇವುಗಳೆಲ್ಲವೂ ಕಿಲಾಸ ಉತ್ಪತ್ತಿ ಮಾಡುವಲ್ಲಿ ಕೈಜೋಡಿಸುವುವು ದಾರುಣ, ಅರುಣ, ಶ್ವಿತ್ರ– ಇವು ಕಿಲಾಸದ ಪ್ರಭೇಧಗಳು ಈ ಕಿಲಾಸದಲ್ಲಿ ವಾತದೋಷವು ಪ್ರಧಾನವಿದ್ದಲ್ಲಿ ಚರ್ಮದ ಮೇಲ್ಪದರ ಅತಿಯಾಗಿ ಒಣಗುವುದು ಹಾಗೂ ಅರುಣ ವರ್ಣಕ್ಕೆ ತಿರುಗುವುದು. ಪಿತ್ತ ಹೆಚ್ಚಿದ್ದಲ್ಲಿ ಉರಿಯುಕ್ತವಾಗಿಯೂ ಕಮಲಪತ್ರದಂತೆ ತಾಮ್ರವರ್ಣ ಹೊಂದಿರುವುದರೊಂದಿಗೆ ಆ ಭಾಗದ ರೋಮನಾಶ ಹೊಂದುವುದು, ಕಫದೋಷ ಪ್ರಧಾನವಿದ್ದಲ್ಲಿ ಬಿಳಿ ಬಣ್ಣವುಳ್ಳದ್ದಾಗಿಯೂ ಹಾಗೂ ಹೆಚ್ಚು ನವೆಯುಳ್ಳದ್ದಾಗಿರುತ್ತದೆ. ವಾತಜ ಕಿಲಾಸವು ರಕ್ತವನ್ನಾಶ್ರಿಯಿಸಿದರೆ, ಪಿತ್ತಜ ಮಾಂಸವನ್ನು ಹಾಗೂ ಕಫಜ ಕಿಲಾಸವು ಮೇದಸ್ಸನ್ನು ಆಶ್ರಯಿಸುವುದು.

ಬೇರೆ ಚರ್ಮ ರೋಗಗಳಂತೆ ಇದರಲ್ಲಿ ಯಾವುದೇ ಸ್ರಾವ, ಕ್ರಿಮಿಗಳ ಉತ್ಪತ್ತಿ ಕಂಡುಬರುವುದಿಲ್ಲ. ಕಿಲಾಸ/ಶ್ವಿತ್ರ ಉತ್ಪತ್ತಿಗೆ ಮುಖ್ಯಕಾರಣಗಳು ಹೀಗಿವೆ. . .

. . . ಕೃತಘ್ನಭಾವೋ ನಿಂದಾಸುರಾಣಂ ಗುರುಘರ್ಷಣಂ ಚ/ ಪಾಪಕ್ರಿಯಾ ಪೂರ್ವಕೃತಂ ಚ ಕರ್ಮ ಹೇತುಃ ಕಿಲಾಸಸ್ಯ ವಿರೋಧಿಚಾನ್ನಮ್॥ ದೈವನಿಂದನೆ, ಗುರುನಿಂದನೆ, ಪಾಪಕರ್ಮ, ವಿರುದ್ಧ ಆಹಾರಾದಿಗಳ ಸೇವನೆ, ಪೂರ್ವಜನ್ಮಕೃತಕರ್ಮ, ಕೃತಘ್ನತಾಭಾವ, ಕಳ್ಳತನ/ಮೋಸ ಮಾಡುವಿಕೆ–ಮೊದಲಾದವುಗಳು ಕಿಲಾಸದ ನಿದಾನಗಳು. ಕಿಲಾಸ ಬೇರೆ ಕುಷ್ಠ ಪ್ರಕಾರಗಳಿಗಿಂತ ವಿಭಿನ್ನವಾದ ಸಾಧ್ಯಾಸಾಧ್ಯತೆಗಳನ್ನು ಹೊಂದಿರುತ್ತದೆ. ಇದರರ್ಥ– ರಕ್ತ, ಮಾಂಸ, ಮೇದೋಧಾತುಗಳನ್ನು ಕ್ರಮವಾಗಿ ಆಶ್ರಯಿಸಿರುವ ಅರುಣ, ತಾಮ್ರ, ಶ್ವೇತ ವರ್ಣಗಳು, ಉತ್ತರೋತ್ತರ ಕಷ್ಟಸಾಧ್ಯವಾಗಿರುತ್ತದೆ. ಅಂದರೆ ಶ್ವೇತ ವರ್ಣ ಹೊಂದಿರುವ ಹಾಗೂ ಮೇದೋಧಾತುವನ್ನು ಆಶ್ರಯಿಸಿರುವ ಕಿಲಾಸವು ಚಿಕಿತ್ಸೆಗೆ ಅತ್ಯಂತ ಕಷ್ಟಕರವಾದುದೆಂದು ತಿಳಿಯಬೇಕು. ಗುದಭಾಗದಲ್ಲಿ, ಜನನಾಂಗಗಳಲ್ಲಿ, ಅಂಗೈ ಅಂಗಾಲುಗಳ ಮೇಲೆ ಕಂಡುಬರುವ, ಹಲವಾರು ವರ್ಷಗಳ ಕೆಳಗೆ ಕಾಣಿಸಿಕೊಂಡಂತಹ, ಬಿಳಿ ಬಣ್ಣಕ್ಕೆ ತಿರುಗಿದ ರೋಮಗಳುಳ್ಳ ಅತಿದೊಡ್ಡದಾದ ಮಚ್ಚೆ, ಎರಡು ಮಚ್ಚೆಗಳ ಕೂಡುವಿಕೆ, ಅಗ್ನಿ ಸಂಪರ್ಕದಿಂದ ಸುಟ್ಟಿರುವುದರಿಂದ ಸಂಭವಿಸಿರುವ ಬಿಳುಪು, ಅಸಾಧ್ಯವಾದ್ದರಿಂದ ಚಿಕಿತ್ಸೆಗೆ ಅನರ್ಹವಾದುದೆಂದು ಪರಿಗಣಿಸಿ ವರ್ಜಿಸಬೇಕು.

ಇದರ ಚಿಕಿತ್ಸೆಯನ್ನು ಗ್ರಂಥಗಳಲ್ಲಿ ಅತ್ಯಂತ ವಿವರವಾಗಿ ತಿಳಿಸಿದ್ದಾರೆ. ಮೊದಲನೆಯದಾಗಿ ಸ್ಥಾನಿಕ ಚಿಕಿತ್ಸೆ

1. ಹರತಾಳ ಒಂದು ಹಾಗೂ ಅದರ ನಾಲ್ಕರಷ್ಟು ಬಾವಂಚಿ ಬೀಜದೊಂದಿಗೆ ಗೋಮೂತ್ರ ಕಲೆಸಿ ಲೇಪವನ್ನು ಹಾಕಬೇಕು.

2. ಮನಃಶಿಲಾ ಪ್ರಯೋಗ–ಮನಃಶಿಲಾ, ವಿಡಂಗ, ಕಾಸೀಸ, ಗೋರೋಚನ, ಕನಕವೃಕ್ಷಗಳನ್ನು ಹೊಂದಿರುವ ಮನಃಶಿಲಾದಿ ಲೇಪವನ್ನು ಸೈಂಧವ ಲವಣದೊಂದಿಗೆ ಬೆಳೆಸಿ ಹಚ್ಚಬೇಕು.

3. ತುಟಿಗಳು ಬಿಳುಪಾಗಿದ್ದಲ್ಲಿ – ಗಂಧಕ, ಕಾಸೀಸ, ಹರತಾಳ, ತ್ರಿಫಲಾಗಳನ್ನು ಹೊಂದಿರುವ ಲೇಪನವನ್ನು ಹಚ್ಚಿದರೆ ಒಂದೇ ದಿನದಲ್ಲಿ ಬಿಳಿ ಮಚ್ಚೆ ಮಾಯವಾಗುವುದೆಂಬ ಪ್ರತೀತಿ ಇದೆ.

4. ಸೋಮರಾಜೀತೈಲ, ಮಹಾಮರಿಚ್ಯಾದಿತೈಲ (ಲಭ್ಯವಿದೆ) ಗಳನ್ನು ಕಿಲಾಸ ಇರುವ ಭಾಗಕ್ಕೆ ಹಚ್ಚಿ ಮೃದುವಾದ ಹೊಸ ಟೂತ್‌ಬ್ರಷ್‌ನಿಂದ ತಿಕ್ಕಬೇಕು.

ಆಭ್ಯಂತರವಾಗಿ

1. ಶ್ವಿತ್ರರೋಗಿಯ ದೇಹವನ್ನು ಸ್ನೇಹನ, ಸ್ವೇದನಗಳಿಗೆ ಒಳಪಡಿಸಿ ಶೋಧನಕ್ಕೆ ಸಜ್ಜುಗೊಳಿಸಿ, ದೋಷಾನುಸಾರ ವಮನ ವಿರೇಚನಗಳನ್ನು ಮಾಡಿಸಿ. ಮಲಪೂ ರಸ (ಕಾಕೋದುಂಬರ) ಪ್ರಯೋಗ ಮಾಡಬೇಕೆಂದು ತಿಳಿಸಲಾಗಿದೆ. ಬೆಲ್ಲದೊಂದಿಗೆ ಬೆರೆಸಿದ ಮಲಪೂ ರಸವನ್ನು ವಿರೇಚನ ದ್ರವ್ಯವಾಗಿ ಬಳಸಬೇಕೆಂಬುದು ಚರಕಾಚಾರ್ಯರ ಅಭಿಪ್ರಾಯ.

2. ಯೋಗ ರತ್ನಾಕರನ ಪ್ರಕಾರ ದೋಷಗಳಿಂದ ವಿಮುಕ್ತನಾದ ಶ್ವಿತ್ರರೋಗಿಗೆ ರಕ್ತಮೋಕ್ಷಣ ಮಾಡಿದ ನಂತರ ಖದಿರಾಂಬು, ಯವಾನ್ನಗಳಿಂದ ತೃಪ್ತಿಗೊಳಿಸಿ ಬೆಲ್ಲದೊಂದಿಗೆ ಮಲಪೂ ರಸವನ್ನು ನೀಡಬೇಕು. ನಂತರ ಯಾವಾಗು ಮಂಡಭೋಜನ ಗಳನ್ನು ಒದಗಿಸಬೇಕು.

3. ತಾರೇಕಾಯಿ (ಹೊರಭಾಗ), ಮಲಪೂ ಕಷಾಯವನ್ನು ಬೆಲ್ಲದೊಂದಿಗೆ ಬಾವಂಚಿ ಬೀಜವನ್ನು ನೀಡಿದಾಗ ಶ್ವಿತ್ರನಾಶ ಹೊಂದುತ್ತದೆಂಬ ನಂಬಿಕೆ ಇದೆ.

4. ಸ್ವಯಂಭುವ ಗುಗ್ಗುಳು, ಮಣಿಭದ್ರಲೇಹ್ಯ (ಲಭ್ಯವಿದೆ)ಗಳನ್ನು ನೀಡಬಹುದು.

ಮಲಪೂ/ಕಾಕೋದುಂಬರ ಕಿಲಾಸದಲ್ಲಿ ಅತ್ಯಂತ ಉಪಯುಕ್ತ ವೆಂಬ ವಿಚಾರ ಸಂಶೋಧನೆಗಳ ಮೂಲಕ ದೃಢಪಡಿಸಲಾಗಿದೆ.

ಅಪಸ್ಮಾರ ಚಿಕಿತ್ಸೆಯಲ್ಲಿ ತಿಳಿಸಿರುವ ಪಂಚಗವ್ಯ ಘೃತ ಬಳಿಕೆಯಿಂದ ಕಿಲಾಸರೋಗಸವು ಶಾಶ್ವತವಾಗಿ ಪರಿಹಾರವಾಗುತ್ತದೆ.

**ಕಿಟಿಭ:**

ಸೋರಿಯಾಸಿಸ್ ಎಂಬ ಹೆಸರಿನಿಂದ ಪ್ರಸಿದ್ಧವಾದ ಈ ಚರ್ಮವ್ಯಾಧಿ ಆಯುರ್ವೇದ ಗ್ರಂಥಗಳಲ್ಲಿ ಕಿಟಿಭ ಎಂದು ಕರೆಯಲ್ಪಡುತ್ತದೆ.

ಕ್ಷುದ್ರಕುಷ್ಠಗಳಲ್ಲಿ ಒಂದಾದ ಕಿಟಿಭ ಸುಶ್ರುತರ ಪ್ರಕಾರ 5ನೇ ಮೇದಿನಿ ಹಾಗೂ ಚರಕರ ಪ್ರಕಾರ 4ನೇ ಪದರದಲ್ಲಿ ಸಂಭವಿಸುತ್ತದೆ.

**ಕೇಶಃ ಕೀಟಃ ಇತಿ ಕಿಟರಿವಭಾತಿ ಕೇಶಕೀಟಃ॥**

ಕೇಶ ಕೀಟದಂತೆ ಕಾಣಿಸುವುದರಿಂದ ಹೇನಿನಂತೆ ಗೋಚರಿಸುವ ಎಂದರ್ಥ.॥

ಇದರ ನಿದಾನ ಸಂಪ್ರಾಪ್ತಿಗಳು ಸಾಮಾನ್ಯ ಕುಷ್ಠದಂತೆ ಎಂದು ತಿಳಿಯಬೇಕು. ಲಕ್ಷಣಗಳು ಹೀಗಿವೆ.

**"ಶ್ಯಾಮಂ ಕಿಣಕರ ಸ್ಪರ್ಶಂ ಪುರುಷಂ ಕಿಟಿಭಂ ಸ್ಮೃತಮ್॥"**

ಚರ್ಮ ಗಾಢವರ್ಣಕ್ಕೆ ತಿರುಗುವಿಕೆ, ಹಂದಿಚರ್ಮದಂತೆ ಅತ್ಯಂತ ಕಠೋರವಾಗಿಯೂ, ತೀವ್ರ ನವೆಯಿಂದಲೂ ಕೂಡಿರುತ್ತದೆ. ಒಮ್ಮೊಮ್ಮೆ ಮಂಡಲಾಕಾರದ ಈ ಗುಳ್ಳೆಗಳಿಂದ ಸ್ರಾವವೂ ಬರುತ್ತದೆ.

**"ಯತ್ ಸ್ರಾವಿ ಘನಂ ಉಗ್ರಕಂಡೂಚ ತಿತ್ ಸ್ನಿಗ್ಧಂ ಕೃಷ್ಣಂ ಕಿಟಿಭಂ ವದಂತಿ॥"**

ಆಭ್ಯಂತರ ಚಿಕಿತ್ಸೆಯಾಗಿ–ದೋಷಾನುಸಾರ ಶೋಧನ, ಕೈಶೋರಗುಗ್ಗುಳು, ಖದಿರಾರಿಷ್ಟ ಮುಂತಾದ ರಕ್ತಶೋಧಕಗಳನ್ನು ಬಳಸಬಹುದು.

**ಸ್ಥಾನಿಕವಾಗಿ:**

1. ಸೀ ಕುಟಜದ ತೈಲವು ಕಿಟಭರೋಗದಲ್ಲಿ ಅತ್ಯುತ್ತಮ ಶಮನಕಾರಿಯೆಂದು ಸಂಶೋಧನೆಗಳಿಂದ ದೃಢಪಟ್ಟಿವೆ. ಇದರ ತೈಲ, ಮುಲಾಮು, ಸೋಪುಗಳು ಲಭ್ಯವಿದೆ.

2. ಒಂದು ಚಮಚದಷ್ಟು ಮೂಲಂಗಿ ಬೀಜದ ಪುಡಿಯನ್ನು ಕಾಲು (1/4) ಲೋಟ ಹುಳಿಬಂದ ಮೊಸರಿನಲ್ಲಿ ರಾತ್ರಿ ನೆನೆಸಿಟ್ಟು ಬೆಳಗ್ಗೆ ಈ ಮಿಶ್ರಣವನ್ನು ಚರ್ಮದ ಮೇಲೆ ತಿಕ್ಕಿ ಸ್ನಾನ ಮಾಡಬೇಕು.

ಈ ಲೇಖನದಲ್ಲಿ ವಿಚರ್ಚಿಕಾ, ಕಿಲಾಸ, ಕಿಟಭ ರೋಗಗಳ ಬಗ್ಗೆ ಮೂಲಗ್ರಂಥಗಳಿಂದ ವಿಷಯಗಳನ್ನು ಸಂಗ್ರಹಿಸಲಾಗಿದೆ. ಇದರ ಜೊತೆಗೆ ನಾನು ಮೇಲಿನ ರೋಗಗಳಿಗೆ ನೀಡುವ ಶಾಸ್ತ್ರಿಯ ಚಿಕಿತ್ಸೆಯನ್ನು ಸಂಕ್ಷಿಪ್ತವಾಗಿ ತಿಳಿಸಿದ್ದೇನೆ. ನಾನು ಪೇಟೆಂಟ್ ಔಷಧಗಳನ್ನು ಬಳಸದಿರುವ ಕಾರಣ ಮೇಲಿನ ವ್ಯಾಧಿಗಳಿಗೆ ಈಗ ಲಭ್ಯವಿರುವ ಪೇಟೆಂಟ್ ಔಷಧಗಳ ಬಗ್ಗೆ ತಿಳಿಸಿಲ್ಲ.

ಈ ಲೇಖನವನ್ನು ಓದಿ ಪ್ರತಿಯೊಬ್ಬ ಆಯುರ್ವೇದ ವೈದ್ಯರೂ ಸ್ಫೂರ್ತಿಯನ್ನು ಪಡೆದು ಮೇಲಿನ ರೋಗಗಳನ್ನು ಚಿಕಿತ್ಸೆ ಮಾಡುವುದರಲ್ಲಿ ಇನ್ನೂ ಹೆಚ್ಚಿನ ಆಳವಾದ ಜ್ಞಾನವನ್ನು ಪಡೆಯಲಿ ಎಂಬುದು ನನ್ನ ಆಶಯ.

ಲೇಖಕರು: ಡಾ॥ ಎಸ್.ಪ್ರತಿಭಾ, ಡಾ॥ ಅಕ್ಷತಾ ಕುಲಕರ್ಣಿ

ನಿರ್ವಹಣೆ: ಡಾ॥ ಎನ್. ಅನಂತರಾಮನ್

ಮೊಬೈಲ್: **9945605337**

With Best Compliments From:

# SHRI DHARMASTHALA MANJUNATHESHSWARA AYURVEDA PHARMACY

**L.N. Nagara, P.O. Kuthpady - 574 118,**

**Udupi district, Karnataka, INDIA.**

**Ph. & Fax: (0820) 2520852**

**E-mail: sdmaph@gmail.com**

*GMP Certified......*

# ತಮಕ ಶ್ವಾಸ

With Best Compliments From:
SHRI DHARMASTHALA
MANJUNATHESHWARA
AYURVEDA PHARMACY
L.N. Nagara, P.O. Kuthpady - 574 118,
Udupi district, Karnataka, INDIA.
Ph. & Fax: (0820) 2570852

"ಕ್ಷಣಂ ಕ್ಷಣಂ ಶ್ವಸನೇನ ವಾಯುನಾಽವಧಮ್ಯತೆ"

– ಚರಕ ಟೀಕಾ.

ಕ್ಷಣ ಕ್ಷಣಕ್ಕೂ ಉಸಿರಾಟದ ಹಪಾಹಪಿಯೇ ಶ್ವಾಸವೆಂಬ ರೋಗ. ಮಹಾ ಶ್ವಾಸ, ಊರ್ಧ್ವ ಶ್ವಾಸ, ಛಿನ್ನ ಶ್ವಾಸ, ತಮಕಶ್ವಾಸ ಮತ್ತು ಕ್ಷುದ್ರಶ್ವಾಸ ಎಂದು ಐದು ಬಗೆ. ಇದರಲ್ಲಿ ಮೊದಲ ಮೂರು ಅಸಾಧ್ಯವಾದರೆ ತಮಕ–ಯಾಪ್ಯ ಹಾಗೂ ಕ್ಷುದ್ರ ಸುಲಭ ಸಾಧ್ಯ.

ಶ್ವಾಸದ ಘೋರತ್ವವನ್ನು ಹೀಗೆ ವಿವರಿಸಿದ್ದಾರೆ –

"ರೋಗಾ ನಾನಾತ್ಮಕಸ್ತೇಷಾಂ
ಯಥಾ ಶ್ವಾಸಶ್ಚ ಹಿಕ್ಕಾಚ ಪ್ರಾಣಾನಾಶು ನಿಕೃಂತತಃ ॥

ಅಂತೇ

ಸಂಜಯತೇ ಹಿಕ್ಕಾ ಶ್ವಾಸೋ ವಾ ತೀವ್ರ ವೇದನಃ ॥"

ಚ.ಚಿ.

ಆಚಾರ್ಯ ಅಗ್ನಿವೇಶರ ಪ್ರಶ್ನೆಗೆ ಬ್ರಹ್ಮರ್ಷಿ ಪುನರ್ವಸು ಆತ್ರೇಯರು ಮೇಲಿನಂತೆ ಉತ್ತರಿಸುತ್ತಾರೆ. ಒಬ್ಬ ಜೀವಿಯನ್ನು ಕೊಲ್ಲುವ ನಾನಾರೋಗಗಳಿದ್ದರೂ ಸಹ "ಶ್ವಾಸ ಮತ್ತು ಹಿಕ್ಕಾ" ಇವು ಘನಘೋರ ರೋಗಗಳು. ಏಕೆಂದರೆ ಈ ಎರಡೂ ಲಕ್ಷಣಗಳು, ಗೋಚರಿಸಿದರೆ ಸಾವು ನಿಶ್ಚಿತ. ತೀವ್ರ ವೇದನಾಮಯ.

ಇದು ಬಹಳಷ್ಟು ನಿಜ. ಸಾವಿನ ಕ್ಷಣದಲ್ಲಿ ಸಾಯುವ ವ್ಯಕ್ತಿ ಬಹಳ ದೀರ್ಘವಾಗಿ ಘುರ್ ಘುರ್ ಎಂದು ಶಬ್ದ ಮಾಡುತ್ತಾ ಉಸಿರನ್ನು ಎಳೆದು ಎಳೆದು ಬಿಡುತ್ತಾ ಹಿಕ್ ಹಿಕ್ ಎಂದು ಶಬ್ದ ಮಾಡುತ್ತಾ ಪ್ರಾಣ ಬಿಡುವುದು ಅಲ್ಲಿ ಉಪಸ್ಥಿತರಿದ್ದವರಿಗೆಲ್ಲಾ ಅನುಭವವಾಗುವಂತಹುದು.

"ಕೃದ್ಧಾ ಹತ ಅತಿ ವಿಷಾವಿವ॥"– ವಿಷದಂತೆ ಶ್ವಾಸವು ಶೀಘ್ರವಾಗಿ ಮರಣವನ್ನುಂಟುಮಾಡುತ್ತದೆ ಎಂದು ವಿವರಿಸಿದ್ದಾರೆ.

ಈ ಶ್ಲೋಕವನ್ನು ಸ್ವಲ್ಪ ವಿವರವಾಗಿ ಅರ್ಥೈಸಿ ವಿಶ್ಲೇಷಿಸುವುದು ಅಗತ್ಯ. ಮರಣದ ಸಮಯದಲ್ಲಿ ಕಾಣಿಸಿಕೊಳ್ಳುವ ಶ್ವಾಸ/ಹಿಕ್ಕಾಗಳು ಮರಣ ಸಮಯ ಸನ್ನಿಹಿತವಾಗಿರುವುದರ ಲಕ್ಷಣವಾಗಿ ಬಂದಿರುತ್ತದಯೇ ಹೊರತು ಒಂದು ಸ್ವತಂತ್ರ ರೋಗವಾಗಿ ಅಲ್ಲ. ಸಾಯುವ ವ್ಯಕ್ತಿಗೆ ಶ್ವಾಸ ರೋಗವೇ ಇರಬಹುದು. ಬೇರಿನ್ನಾವ ರೋಗವೇ ಇರಬಹುದು ಅಥವಾ ಸಹಜ ಸಾವೇ ಇರಬಹುದು. ಅಲ್ಲಿ ಶ್ವಾಸ/ಹಿಕ್ಕಾ ಕಂಡುಬಂದಿರುತ್ತದೆ. ಈ ವರ್ಣನೆಯನ್ನು 'ಉಪಮಾಲಂಕಾರ'ವಾಗಿ ಬಳಸಿದ್ದಾರೆಯೇ ಹೊರತು ಸ್ವತಂತ್ರ ರೋಗದ ವಿವರಣೆಯಾಗಿ ಅಲ್ಲ. ಒಬ್ಬ ವ್ಯಕ್ತಿ ಸಾಯುವುದು ಖಚಿತವೆಂಬ ಸುಳುಹು ಸಿಕ್ಕಾಗ ವೈದ್ಯ ವಿದ್ಯಾರ್ಥಿಗಳು/ವೈದ್ಯರು ಅಲ್ಲಿಯೇ ಉಪಸ್ಥಿತರಾಗಿ ಸಾವಿನ ಸಂದರ್ಭದಲ್ಲಿನ ಲಕ್ಷಣಗಳನ್ನು ಅವಲೋಕಿಸಿ ಅನುಭವ ಪಡೆಯುವುದು ಸೂಕ್ತ.

"ಸ ಸಾಧ್ಯ ಉಕ್ತೋ ಬಲಿನಃ ಸರ್ವೇಚಾವ್ಯಕ್ತ ಲಕ್ಷಣಾಃ"
"ಸಾಧ್ಯೋವಾನ್ನವೋತ್ತಿತಾಹಾ"

ಹೀಗೆ ಅಸಾಧ್ಯ, ಯಾಪ್ಯ ಎಂದು ವಿವರಿಸಿದ್ದರೂ ಸಹ ಎಲ್ಲ ಶ್ವಾಸಗಳೂ ಪ್ರಾರಂಭಾವಸ್ಥೆಯಲ್ಲಿ, ಬಾಲ್ಯಾವಸ್ಥೆಯಲ್ಲಿ ಚಿಕಿತ್ಸೆಗೆ ಸುಲಭ ಸಾಧ್ಯ. ತಮಕ ಶ್ವಾಸದ ವಿಚಾರಕ್ಕೆ ಬಂದಾಗ–ಸೂಕ್ತವಾಗಿ ಪಥ್ಯ, ದಿನಚರ್ಯೆ, ಋತುಚರ್ಯೆ, ವನೌಷಧಗಳು ಹಾಗೂ ರಸೌಷಧಗಳು ಇವುಗಳನ್ನು ಉಪಯೋಗಿಸಿ 20–30 ವರ್ಷಕ್ಕೂ ಹಳೆಯದಾದ ರೋಗಗಳು ವಾಸಿಯಾದ ಉದಾಹರಣೆಗಳು ಬಹಳಷ್ಟು ಉಂಟು. ಇಂತಹ ದೀರ್ಘಕಾಲೀನ ವ್ಯಾಧಿಗಳಿಗೆ ಇರಬೇಕಾದದ್ದು 'ಛಲ'. ರೋಗಿ ಹಾಗೂ ವೈದ್ಯ ಇಬ್ಬರೂ ಛಲವಂತರಾಗಿದ್ದರೆ ಮಾತ್ರ ಇದು ಸಾಧ್ಯ. ಕನಿಷ್ಠ 1 ರಿಂದ 2 ವರ್ಷಗಳ ಚಿಕಿತ್ಸೆಗೆ ರೋಗಿ ಸಿದ್ಧನಿರಬೇಕು. ಕೆಲವೊಮ್ಮೆ ವಾಸಿಯಾಗದಿದ್ದರೂ ರೋಗಿಗಳು ಈಗಾಗಲೇ ಅತಿಯಾಗಿ ಅವಲಂಬಿಸಿರುವ ಇನ್‌ಹೇಲರ್‌ಗಳು, ಸ್ಟಿರಾಯ್ಡ್ ಔಷಧಿಗಳು ಇವುಗಳಿಂದ ಮುಕ್ತಿನೀಡಿ ರೋಗಿಗೆ ಉತ್ತಮ ಆರೋಗ್ಯ ನೀಡುವುದು ಸಾಧ್ಯ.

ಎಲ್ಲ ಶ್ವಾಸ ರೋಗಗಳ ಉದ್ಭವ ಸ್ಥಾನ – ಪಿತ್ತಾಶಯ.

ಕ್ಷುದ್ರ ಶ್ವಾಸದಲ್ಲಿ ಹೇಳಿಕೊಳ್ಳುವಂತಹ ಸ್ರೋತೋದುಷ್ಟಿ ಇರುವುದಿಲ್ಲ. ತಮಕ ಶ್ವಾಸದಲ್ಲಿ 'ಪ್ರಾಣವಹಾ ಸ್ರೋತೋದುಷ್ಟಿ' ಉಂಟಾಗಿರುತ್ತದೆ. ಮಹಾ, ಊರ್ಧ್ವ, ಛಿನ್ನ ಶ್ವಾಸ ಇವುಗಳಲ್ಲಿ ಅನ್ಯ ಸ್ರೋತಸ್‌ಗಳಲ್ಲಿ ದುಷ್ಟಿಯಾಗಿ ಅದರ ಪ್ರಭಾವ ಪ್ರಾಣವಹಾ ಸ್ರೋತಸ್ಸಿನಲ್ಲಿ ವ್ಯಕ್ತವಾಗುತ್ತದೆ. ಉದಾ:– ಹೃದಯ ರೋಗ, ಉದರ, ಪಾಂಡು, ಅರ್ಬುದ, ವೃಕ್ಕ ವೈಫಲ್ಯ ಇತ್ಯಾದಿ.

ಶ್ವಾಸ – ಸಂಪ್ರಾಪ್ತಿ

ಆಮಾಶಯ/ಪಿತ್ತಾಶಯ
↓
ಆಮ
↓
ರಸದುಷ್ಟಿ
↓
ಅನ್ನವಹ–ಉದಕವಹ ಸ್ರೋತೋದುಷ್ಟಿ
↓
ಕಫದುಷ್ಟಿ– {ಕ್ಲೇದಕ, ಅವಲಂಬಕ}
↓
ಸ್ರೋತೋಸಂಗ – ವಾತ+ಕಫ+ ಆಮ
↓
ಪ್ರಾಣವಹಾ ಸ್ರೋತೋದುಷ್ಟಿ ಪ್ರಾಣ – ಉದಾನ – ಅಪಾನ
↓
ಪ್ರಾಣ ವಾಯು ವಿಮಾರ್ಗಗಮನ
↓
ಶ್ವಾಸ ರೋಗ

**ತಮಕ ಶ್ವಾಸ ನಿದಾನ –**

ಆಹಾರಜ ಕಾರಣಗಳು:– ಅಭಿಷ್ಯಂದಿ, ಗುರು, ಕಫಕಾರಕ, ಶೀತಲ ಆಹಾರಗಳ ಸೇವನೆ, ಕಂದ ಮೂಲಗಳ ಸೇವನೆ. ಮೊಸರು, ಕಾಯಿಸದೆ ಇರುವ ಹಾಲು; ಹಾಲು ಇಂಗಿಸಿ ಮಾಡಿದ ಆಹಾರಗಳು.

ನಿಷ್ಪಾವ, (ಹಿಂಡಿ), ಉದ್ದು ಇವುಗಳ ಅತಿ ಸೇವನೆ. ಅತಿ ಉಪವಾಸ, ಜಲವಾಸಿ, ಅನೂಪವಾಸಿ ಪ್ರಾಣಿಗಳ ಮಾಂಸ ಸೇವನೆ. ಫ್ರಿಡ್ಜ್ ಆಹಾರಗಳು, ಹೆಲ್ತ್ ಡ್ರಿಂಕ್ಸ್, ಹೆಲ್ತ್ ಫುಡ್ ಎಂದು ಮಾರಾಟವಾಗುತ್ತಿರುವ ವಿಟಮಿನ್ ಮಿನರಲ್ ಪ್ರೋಟೀನ್ ಭರಿತ ಆಹಾರಗಳು ಮತ್ತು ಪೇಯಗಳು.

ವಿಹಾರಜ ಕಾರಣಗಳು. – ಅವ್ಯಾಯಾಮ, ಅತಿ ವ್ಯಾಯಾಮ, ಶೀತ ಪ್ರದೇಶ ವಾಸ [ಎ.ಸಿ.ರೂಮ್] ದಿವಾ ಸ್ವಪ್ನ, ಅತಿ ಮೈಥುನ,

ಅನ್ಯಾನ್ಯ ಕಾರಣಗಳು:– ಬದ್ಧ ಕೋಷ್ಠ, ಉದ್ಗಾರ, ಅತಿಸಾರ, ವಮನ, ಪೀನಸ, ಕ್ಷಯ, ರಕ್ತಪಿತ್ತ, ಅಲಸಕ, ವಿಸೂಚಿಕ, ಪಾಂಡು ಇವುಗಳ ವ್ಯತಿರಿಕ್ತ ಪರಿಣಾಮವಾಗಿ, ಅತಿಯಾಗಿ ಶೋಧನ ಚಿಕಿತ್ಸೆಗೆ ಒಳಪಟ್ಟಾಗ, ಅಭಿಘಾತದಿಂದ ಶ್ವಾಸ ಉಂಟಾಗುತ್ತದೆ.

ಪುಷ್ಪ ಪರಾಗ, ಧೂಳು, ಹೊಗೆ, ಘಾಟು, ಕೆಟ್ಟ ವಾಸನೆ, ಗೋಡೆಗೆ ಬಳಿಯುವ ಪೇಂಟ್, ಪರ್ ಫ್ಯೂಮ್‌ಗಳು, ಸೊಳ್ಳೆ ನಿವಾರಕ ಲಿಕ್ವಿಡ್,ಮ್ಯಾಟ್, ಬತ್ತಿಗಳು, ಸಾಕು ಪ್ರಾಣಿಗಳು, ಆಧುನಿಕ ವೈದ್ಯ ಪದ್ಧತಿಯ ಕೆಲವು ಔಷಧಗಳು ಇವೆಲ್ಲವೂ ಶ್ವಾಸಕ್ಕೆ ಕಾರಣವಾಗುತ್ತದೆ.

**ತಮಕ ಶ್ವಾಸ – ಲಕ್ಷಣಗಳು.**

1. ಘುರ್ಘುರುಕಂ – ಉರಃ ಮತ್ತು ಕಂಠದಿಂದ ಘುರ್ ಘುರ್ ಕೇಳಿ ಬರುವುದು, ಕೆಲವೊಮ್ಮೆ ಈ ಶಬ್ದ ರೋಗಿ ಬಳಿ ಇದ್ದವರಿಗೂ ಸಹ ಸ್ಪಷ್ಟವಾಗಿ ಕೇಳಿಸತ್ತದೆ.
2. ಅತಿ ಕಷ್ಟಕರ ದೀರ್ಘ ಶ್ವಾಸ.
3. ಕಂಠ ಪ್ರದೇಶದಲ್ಲಿ ಗುಳಿ ಬೀಳುವಿಕೆ. ಅಂಗ ಕಂಪನ, ಕಾಸ, ದೌರ್ಬಲ್ಯ, ಪೀನಸ, ಪ್ರತಿಶ್ಯಾಯ, ಜ್ವರ, ಕೆಲವೊಮ್ಮೆ ಅರೆ ಪ್ರಜ್ಞಾವಸ್ಥೆ
4. ಕಂಠ ಹಾಗೂ ಉರಃ ಪ್ರದೇಶದಿಂದ ಕಫ ವಿಸರ್ಜನೆ ಆಗುವವರೆಗೂ ಮೇಲೆ ಮೇಲೆ ಅತಿಯಾಗಿ ಕೆಮ್ಮು ಬರುವುದು, ಕಫ ವಿಸರ್ಜನೆಯ ನಂತರ ಸ್ವಲ್ಪ ಆರಾಮ. ಪದೇ ಪದೇ ಇದರ ಪುನರಾವರ್ತನೆ.
5. ಕಂಠ ಶೋಷ, ಸ್ವರ ಭಂಗ, ಬಾಯಿ ಒಣಗುವಿಕೆ.
6. ಉದ್ದಂಡಾವಸ್ಥೆಯಲ್ಲಿ ಹಿಂಸೆ, ಆಸೀನರಾದಾಗ ಸ್ವಲ್ಪ ಆರಾಮ.
7. ಶರೀರ ಬಿಲ್ಲಿನಂತೆ ಮುಂದೆ ಬಾಗಿ, ಕಣ್ಣುಗುಡ್ಡೆಗಳು ಹೊರಬಂದಂತಾಗಿ ನಿಸ್ತೇಜ ನೋಟ. ಹಣೆಯ ಮೇಲೆ ಬೆವರು ಸಾಲೆ. ಚಡಪಡಿಕೆ.
8. ಶೀತ ಹವೆ, ಮಂಜು, ಮೋಡ ಮುಸುಕಿದ ವಾತಾವರಣ, ಕಫಕಾರಕ ಆಹಾರ ವಿಹಾರಗಳಿಂದ ಲಕ್ಷಣಗಳು ಉಲ್ಬಣಿಸುತ್ತವೆ.

**ತಮಕ ಭೇದಗಳು :**

ತಮಕ ಶ್ವಾಸದಲ್ಲಿ ಮತ್ತೆ ಎರಡು ಬಗೆಗಳುಂಟು – 1. ಪ್ರಥಮಕ 2. ಸಂತಮಕ

ಶ್ವಾಸದ ಜೊತೆಗೆ ಜ್ವರ ಹಾಗೂ ಇನ್ನಿತರೆ ತೊಂದರೆಗಳಿದ್ದರೆ ಪ್ರಥಮಕ ಎನ್ನುತ್ತಾರೆ.

ದೀರ್ಘವಾದ ಊರ್ಧ್ವಶ್ವಾಸ ಹಾಗೂ ತಮೋಗುಣ ವೃದ್ಧಿಯಾಗಿ ಅರೆ ಪ್ರಜ್ಞಾವಸ್ಥೆ ಅಥವಾ ಪ್ರಜ್ಞಾಹೀನ ಸ್ಥಿತಿ ತಲುಪಿದಾಗ ಸಂತಮಕ ಎನ್ನುತ್ತಾರೆ.

**ತಮಕ ಶ್ವಾಸ–ಚಿಕಿತ್ಸೆ**

ಚಿಕಿತ್ಸೆಯಲ್ಲಿ ಶೋಧನ ಹಾಗೂ ಶಮನ ಎರಡೂ ಚಿಕಿತ್ಸೆಗಳನ್ನು ನಡೆಸಬೇಕು.

**ಶೋಧನ ಚಿಕಿತ್ಸೆ:**

ವಮನ ಹಾಗೂ ವಿರೇಚನ ಎರಡು ರೀತಿಯ ಶೋಧನಗಳೂ ಅವಶ್ಯಕ.

"ತಮಕೇತು ವಿರೇಚನಂ" ಚರಕ

ತಮಕದ ಉದ್ಭವ ಸ್ಥಾನ ಪಿತ್ತಾಶಯವಾದ್ದರಿಂದ ವಿರೇಚನ ಅತ್ಯಂತ ಅಗತ್ಯ.

ಹಾಗೆಂಯೇ "ಕಫ" ಪ್ರಧಾನವಾಗಿ ಪ್ರಾಣವಹಾ ಸ್ರೋತೋದುಷ್ಟಿಯಿರುವುದರಿಂದ ವಮನ ಸಹ ಅಗತ್ಯ.

ಆದ್ದರಿಂದ ಗ್ರಂಥದಲ್ಲಿ ಹೇಳಿರುವ ಹಾಗೆ ರೋಗಿ ಬಲ, ರೋಗಬಲ, ಕಾಲ, ವಯಸ್ಸು ಇವುಗಳನ್ನೆಲ್ಲಾ ಅನುಸರಿಸಿ ವಮನ ವಿರೇಚನಗಳನ್ನು ಚಿಕಿತ್ಸಾ ಅವಧಿಯ ಉದ್ದಕ್ಕೂ ನೀಡುತ್ತಿರಬೇಕು. ವಮನ, ವಿರೇಚನಗಳಿಗೆ ಅನರ್ಹರಾದವರಿಗೆ ಕೇವಲ ಶಮನೌಷಧವನ್ನು ಮಾತ್ರ ಕೊಡಬೇಕಾಗುತ್ತದೆ.

**ಶಮನ ಚಿಕಿತ್ಸೆ:**

ಶ್ವಾಸದಲ್ಲಿನ ನಾನಾ ಅವಸ್ಥೆಗಳನ್ನು ಗಮನಿಸಿ ಶಮನೌಷಧ ಗಳನ್ನು ನೀಡಬೇಕಾಗುತ್ತದೆ. ಮುಖ್ಯವಾಗಿ ದೃಷ್ಟಿಯಲ್ಲಿ ಇರಿಸಬೇಕಾದ ಅಂಶಗಳು –

1. ಕಾಸ ಹರ ಚಿಕಿತ್ಸೆ
2. ಕಫ ವಿಲಿಯನ/ನಿಸ್ಸಾರಕ ಚಿಕಿತ್ಸೆ
3. ವಾತ ಹರ ಚಿಕಿತ್ಸೆ
4. ರಸಾಯನ/ಬೃಂಹಣ ಚಿಕಿತ್ಸೆ
5. ಪ್ರತಿಶ್ಯಾಯ ಚಿಕಿತ್ಸೆ
6. ಜ್ವರ ಚಿಕಿತ್ಸೆ

ಮೇಲಿನ ಎಲ್ಲ ತರಹೆಯ ಚಿಕಿತ್ಸೆಗಳಿಗೆ ಅನುಕೂಲ ವಾಗುವಂತಹ ವನೌಷಧಗಳ ಹಾಗೂ ರಸೌಷಧಗಳ ವಿವರ ಹೀಗಿದೆ.

I. ಚೂರ್ಣಗಳು –

1. ತಾಲೀಸಾದ ಚೂರ್ಣ
2. ಸೀತೋಫಲಾದಿ ಚೂರ್ಣ
3. ಭಾರಂಗೀ ಚೂರ್ಣ
4. ಚೌಷಷ್ಟ ಪಿಪ್ಪಲಿ
5. ಕಂಟಕಾರಿ ಚೂರ್ಣ
6. ಮಧುಯಷ್ಟಿ ಚೂರ್ಣ
7. ತ್ರಿಕಟು ಚೂರ್ಣ
8. ದಶಮೂಲ ಕಟು ತ್ರಯಾದಿ ಕ್ವಾತ ಚೂರ್ಣ

II. ಘೃತಗಳು

1. ಕಂಟಕಾರಿ ಘೃತ
2. ಶತಾವರಿ ಘೃತ
3. ವಾಸಾ ಘೃತ

III. ಆಸವ/ಅರಿಷ್ಟಗಳು :

1. ಕನಕಾಸವ
2. ಪುಷ್ಕರ ಮೂಲಾಸವ
3. ದ್ರಾಕ್ಷಾರಿಷ್ಟ
4. ದಶಮೂಲಾರಿಷ್ಟ
5. ವಾಸಾಕಾಸನ
6. ವಿಡಂಗಾರಿಷ್ಟ
7. ಪಿಪ್ಪಲ್ಯಾಸವ

IV ಭಸ್ಮ/ರಸೌಷಧಗಳು

1. ಅಭ್ರಕ ಭಸ್ಮ
2. ಶೃಂಗ ಭಸ್ಮ
3. ರಸ ಸಿಂಧೂರ
4. ಮಲ್ಲ ಸಿಂಧೂರ
5. ಬೃಹತ್ ಶ್ವಾಸ ಚಿಂತಾಮಣಿ
6. ಶ್ವಾಸ ಕಾಸ ಚಿಂತಾಮಣಿ
7. ಮಹಾಲಕ್ಷ್ಮೀ ವಿಲಾಸ – ಸುವರ್ಣ
8. ಲಕ್ಷ್ಮೀವಿಲಾಸ – ನಾರದೀಯ
9. ತ್ರಿಭುವನ ಕೀರ್ತಿ ರಸ
10. ಶ್ವಾಸ ಕುಠಾರ ರಸ
11. ಶೃಂಗಾರಾಭ್ರ ರಸ
12. ನಾಗಾರ್ಜುನಾಭ್ರ ರಸ

V. ಲೇಹಗಳು –

1. ಕಂಟಕಾರಿ ಲೇಹ
2. ಚ್ಯವನ ಪ್ರಾಶ
3. ಅಗಸ್ತ್ಯ ಹರೀತಕಿ

VI. ಇತರೆ ಉಪಯೋಗಿ ಔಷಧಿಗಳು

1. ಹಿಂಗ್ವಾಷ್ಟಕ ಚೂರ್ಣ
2. ಅವಿಪತ್ತಿಕರ ಚೂರ್ಣ
3. ಕಾಯಕಲ್ಪವಟೀ
4. ಆರೋಗ್ಯ ವರ್ಧಿನಿ ವಟಿ

ಧೂಮಪಾನ:

ಹರಿದ್ರಾ, ಮಣಃಶಿಲಾ ಇವುಗಳನ್ನು ಧೂಮಪಾನವಾಗಿ ಉಪಯೋಗಿಸಬಹುದು. ಶ್ವಾಸಕುಠಾರ ರಸ ಸಹ–ಧೂಮಪಾನ, ನಶ್ಯ ಹಾಗೂ ಮಾತ್ರೆಗಳನ್ನು ಹೊಟ್ಟೆಗೆ ನುಂಗುವುದಕ್ಕೆ ಸಹ ಉಪಯೋಗಿಸಬಹುದು.

**Status Asthama** : ಇದನ್ನು ಸಹ ಸಮರ್ಥವಾಗಿ ನಿಭಾಯಿಸಬಹುದು.

ವಾತಹರ ತೈಲಗಳಲ್ಲಿ ಯಾವುದಾದರೊಂದನ್ನು ಚಿಟಿಕೆ ಉಪ್ಪು ಬೆರೆಸಿ ಬೆಚ್ಚಗೆ ಮಾಡಿ ಬೆನ್ನು, ಪಕ್ಕೆ ಹಾಗೂ ಎದೆ ಭಾಗದಲ್ಲಿ ಕೆಳಗಿನಿಂದ ಮೇಲ್ಮುಖವಾಗಿ ಮರ್ದನಮಾಡಿ ನಂತರ ಸುಖೋಷ್ಣ ವಾಗಿ ಲವಣ/ವಾಲೂಕ ಸ್ವೇದನ ನಡೆಸಬೇಕು. ಸ್ವೇದನವನ್ನು ಹೃದಯಭಾಗ ಬಿಟ್ಟು, ಬೆನ್ನು ಹಾಗೂ ಪಾರ್ಶ್ವಗಳಿಗೆ ಮಾಡಬೇಕು.

ಜೊತೆಗೆ ಮೇಲೆ ಹೇಳಿದ ರಸೌಷಧಗಳಲ್ಲಿ ಸುವರ್ಣ ಯೋಗಗಳು – ಆದರೆ ಉತ್ತಮ ಇವುಗಳನ್ನು ಮುಹುರ್ಮುಹು ಪ್ರಯೋಗ ಮಾಡಬೇಕು. ರಸೌಷಧಗಳನ್ನು ನುಣ್ಣನೆ ಅರೆದು ನಾಲಿಗೆಯ ಕೆಳಗೆ ಇಟ್ಟುಕೊಂಡು ಜೊತೆಗೆ ಆಸವ/ಅರಿಷ್ಟಗಳನ್ನಾಗಲೀ,

ಕ್ವಾಥಗಳನ್ನಾಗಲಿ ಕುಡಿಸಬೇಕು. ಆಸವ/ಅರಿಷ್ಟಗಳನ್ನು ಸುಖೋಷ್ಣ ನೀರಿನಲ್ಲಿ ಬೆರೆಸಿ ಕಾಫಿ ಕುಡಿಯುವಂತೆ ಗುಟುಕು ಗುಟುಕಾಗಿ ಅಲ್ಪ ಪ್ರಮಾಣದಲ್ಲಿ ಸೇವಿಸಿದರೆ ಸಾಕು. ಹಾಗೆಯೇ ಕ್ವಾಥವನ್ನೂ ಸಹ ಸುಖೋಷ್ಣವಾಗಿಯೇ ನೀಡಬೇಕು. ಹೀಗೆ 15–20 ನಿಮಿಷ ಕ್ಕೊಮ್ಮೆಯಂತೆ ಎರಡು ಮೂರು ಬಾರಿ ಔಷಧ ನೀಡುವಷ್ಟರಲ್ಲಿ ರೋಗಿಯ ಸ್ಥಿತಿ ಬಹುತೇಕ ಉತ್ತಮಗೊಂಡಿರುತ್ತದೆ.

Status Asthama ಇದರಲ್ಲಿ ಆಯುರ್ವೇದ ವೈದ್ಯರು ಬಹುಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ "ತಮಕ ಶ್ವಾಸ"ದಲ್ಲಿ ರೋಗಿಯು ವೈದ್ಯರ ಆದೇಶಗಳನ್ನು ಎಚ್ಚರಿಕೆಯಿಂದ ಪಾಲಿಸಿ; ಆಯುರ್ವೇದ ಔಷಧಿಗಳ ಸೇವನೆ ಮಾಡಿದರೆ, ಈ ಸ್ಥಿತಿ ಉದ್ಭವವಾಗುವುದೇ ಇಲ್ಲ. ನನ್ನ ವೃತ್ತಿಯಲ್ಲಿ ನಾನು ಕಂಡಂತೆ ಈ ಸ್ಥಿತಿ ಉದ್ಭವವಾಗುವುದು. ಯಾರು ದೀರ್ಘಕಾಲ steroid, bronchodilator Inhaler, ಇತ್ಯಾದಿ ಔಷಧಗಳನ್ನು ಸೇವಿಸಿ ಅದರ ಮೇಲೆ ಅತಿಯಾಗಿ ಅವಲಂಬಿಸಿರುತ್ತಾರೋ ಅಂತಹವರಲ್ಲಿ. ಪ್ರಾಣವಹಾ ಸ್ರೋತಸ್ಸಿನಲ್ಲಿನ tissueಗಳು, ತನ್ನ Elasticity ಯನ್ನು ಕಳೆದುಕೊಂಡಿರುತ್ತವೆ. ಹೀಗಾಗಿ ಅತಿ ಅಲ್ಪ ಪ್ರಮಾಣದಲ್ಲಿ ದೋಷಗಳು ಉಲ್ಬಣವಾದರೂ ಸಹ ಅಥವಾ ರೋಗಿಗೆ ಧೂಳು, ಘಾಟು ಇಂತಹ ಅಲರ್ಜಿಕಾರಕ ವಸ್ತುಗಳ ಸಂಪರ್ಕ ಬಂದ ಕೂಡಲೇ ಈ ಹಂತ ತಲುಪುತ್ತಾರೆ. Status Asthama- ಇದಕ್ಕೆ "It is a complication arised out of an unscientific management of the disease" ಎಂಬ ವ್ಯಾಖ್ಯಾನವನ್ನು ನಾವು ನೀಡಬಹುದು. ಏಕೆಂದರೆ Steroid/Inhaler/Bronchodilator ಔಷಧಗಳಲ್ಲಿ ರಸಾಯನ, ಬೃಂಹಣ ಇಂತಹ ಅಂಶಗಳು ಯಾವುದೂ ಇಲ್ಲ. ಅವುಗಳಲ್ಲಿ ಇರುವುದು ಕೇವಲ Broncho dilation ಎಂಬ ಅಂಶ ಮಾತ್ರ. ಹೀಗೆ ಪ್ರತಿ ಬಾರಿಯೂ ಸಹ Broncho dilation ಕ್ರಿಯೆ ನಡೆದೂ ನಡೆದೂ ಒಂದು ಹಂತದಲ್ಲಿ ಇನ್ನು ಮುಂದೆ dilate ಆಗಲು ಸಾಧ್ಯವೇ ಇಲ್ಲದಂತಹ ಪರಿಸ್ಥಿತಿಗೆ ತಲುಪಿರುತ್ತದೆ. ಆಯುರ್ವೇದ ಸಿದ್ಧಾಂತದ ಪ್ರಕಾರ ಅತಿ ರೂಕ್ಷತ್ವ, ಖರತ್ವ ಉಂಟಾಗಿರುತ್ತದೆ. ಸಂಕುಚಿತವಾದ ಕಫ ಮಲಗಳು ಹೊರ ಬರಲಾಗದಷ್ಟು ರೂಕ್ಷತ್ವ; ಖರತ್ವ ಇರುತ್ತದೆ. ಇದರಿಂದ Status Asthama ಹಂತ ತಲುಪುತ್ತದೆ. ಇಂತಹ ರೋಗಿಗಳಿಗೆ ಸಹ ಆಯುರ್ವೇದ ಚಿಕಿತ್ಸೆ ನೀಡಿ Status Asthama ಸ್ಥಿತಿಯನ್ನು ತಲುಪದೆ ಇರುವಂತೆ ಮಾಡಲು ಖಂಡಿತಾ ಸಾಧ್ಯ.

**ವೈದ್ಯ ವಾಸುಕಿಶಯನ ಜಿ.ವಿ.**
ಮೊಬೈಲ್: 9448891405

॥ ಹರಿಃ ಓಂ ॥

With Best Compliments From:

**ಉಪಾಧ್ಯ ಮತ್ತು ಕಂಪನಿ**

**Upadhya & Co.**

AYURVEDIC PHARMACEUTICAL DISTRIBUTORS

No. 449/25A, H. Siddaiah Road, Wilson Garden, Bangalore - 27
Tel : 22235533/22241121

# ಪದಾಯು ಬಂಧ



**I ಎಡದಿಂದ ಬಲಕ್ಕೆ**

1. ಗ್ರಾಮವಾಸದಲ್ಲಿ ಆಹಾರದೊಡನೆ ಸರಿಪ್ರಮಾಣದಲ್ಲಿ ಸೇವಿಸುವುದು (3)
3. ಕುಲದಲ್ಲಿ ಬಳಸುವ ಹೂವಿನ ಮರ (3)
5. ಈತ ಗೌಣನಲ್ಲ (4)
7. ಈ ಉಪ್ಪನ್ನು ಬಿಡಲಾಗುವುದಿಲ್ಲ (5)
9. ಕಾಲನಿಗೇ ಈತ ಶತ್ರುವಾದ (4)
12. ಜ್ಞಾನಿಯಾದ ಈತ ಯಾಗವನ್ನು ಮಾಡುವವನು (5)
15. ತಾಳ್ಮೆವಹಿಸದೆ ವಿಧಿಯಿಲ್ಲ (3)
16. ಜನಮನದಲ್ಲಿ ನಿಂತ ಹ್ರಸ್ವ ಪುರುಷ (3)

**II ಮೇಲಿನಿಂದ ಕೆಳಕ್ಕೆ**

1. ಸರಕ್ಕೆ ಸಂದ ಗುಣಗಾನ (4)
2. ತ್ರಿದೋಷಗಳು ಒಟ್ಟುಗೂಡಿ ಪ್ರಪಾತವನ್ನೇ ಉಂಟುಮಾಡಿತು (4)
3. ಬಲವೆಲ್ಲಾ ಬೇರಿನಲ್ಲೇ ಅಡಗಿದೆಯಂತೆ (4)
4. ಇಪ್ಪತ್ತು ಗುಣಗಳಲ್ಲಿ ಇದೇ ಹಗುರ (4)
5. ಮೂರುಗುಣಗಳಿಂದ ಕೂಡಿದ್ದು(4)
6. ಈ ಸ್ತ್ರೀಗೆ ವಂದನೆ ಸಲ್ಲುವುದಾದರೂ ಇದೊಂದು ಬಗೆಯ ವ್ಯಾಪತ್ತು (4)
7. ಪಾಪ, ಬಿಲವೇ ಇದರ ಆಸರೆಯಂತೆ (4)
8. ಕೇಳಿದ್ದನ್ನು ಕೊಡುವ ಗುರು ಈತ (4)
10. ಮಹತ್ತರವಾದ ಉಬ್ಬಸ (4)
11. ಅತ್ರಿಯ ಪುತ್ರನಾದ ಈತ ಅಗ್ನಿವೇಶನ ಗುರು (4)
13. ಮತ್ತೆ ಮತ್ತೆ ಹೊಸತನ ಪಡೆಯುವ ಬಳ್ಳಿ (4)
14. ಚತುರ್ಮುಖ ಬ್ರಹ್ಮನಿಗಿಂತ ಈತನಿಗೆ ಎರಡು ತಲೆ ಜಾಸ್ತಿ (4)

ಉತ್ತರಗಳು – ಮುಂದಿನ ಸಂಚಿಕೆಯಲ್ಲಿ

**ರಸಪ್ರಶ್ನೆ ಮತ್ತು ಪದಬಂಧ**

ಸರಿಯಾದ ಉತ್ತರಗಳನ್ನು ಕಳುಹಿಸಿದವರ ಹೆಸರುಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು

– ಸಂಪಾದಕ

# 'ಗಲಗಂಡ' – ಚಿಕಿತ್ಸೆ ಸುಲಭ ಸಾಧ್ಯ

ಇತ್ತೀಚಿನ ದಿನಗಳಲ್ಲಿ ಅನೇಕ ಆರೋಗ್ಯ ಕೇಂದ್ರಗಳು ತಮ್ಮ ಗಮನವನ್ನು ಥೈರಾಯಿಡ್ ರೋಗದ ಕಡೆ ಹರಿಸಿವೆ. ದೀರ್ಘಕಾಲ, ಕೆಲವೊಮ್ಮೆ ಜೀವನ ಪರ್ಯಂತ ಚಿಕಿತ್ಸೆ ಮುಂದುವರಿಸಬೇಕಾದ ಪರಿಸ್ಥಿತಿಗೆ ನಾವು ಬಂದಿದ್ದೇವೆ. ಅನೇಕ ರೋಗಗಳು ಲಕ್ಷಣರೂಪದಲ್ಲಿ ಪ್ರಕಟವಾದಾಗ ಮೊದಲು ರೋಗವನ್ನು ಗುರುತಿಸಲು ಕಷ್ಟವಾದರೂ, ನಂತರ ಈ ರೋಗದ ಪತ್ತೆ ಸುಲಭ. ಇಂದು ಅನೇಕರು ಈ ರೋಗದಿಂದ ಬಳಲುತ್ತ ಇರುವ ಸಂದರ್ಭದಲ್ಲಿ, ವೈದ್ಯಕೀಯ ಜಗತ್ತು ಇದರ ಚಿಕಿತ್ಸೆಗೆ ತನ್ನೆಲ್ಲಾ ಶಕ್ತಿ, ಬುದ್ಧಿಯನ್ನು ವ್ಯಯಿಸುತ್ತಿದೆ., ಜಗತ್ತಿನ ಯಾವ ವೈದ್ಯ ಶಾಸ್ತ್ರವಾಗಲಿ ಮಾನವ ಜನಾಂಗಕ್ಕೆ ತನ್ನ ಸೇವೆಯನ್ನು ಬಳಸಲು, ಅತ್ಯಾಧುನಿಕ ತಂತ್ರ ಜ್ಞಾನದ ಸಹಾಯವನ್ನು ಪಡೆದರೂ ಕೆಲವೊಮ್ಮೆ ನಿಸ್ಸಹಾಯಕವಾಗಿ ನಿಂತುಬಿಡುತ್ತದೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಯಾವ ಶಾಸ್ತ್ರವಾದರೂ ಸರಿ ಪರಿಹಾರ ಮುಖ್ಯವೆಂಬ ಸಿದ್ಧಾಂತಕ್ಕೆ ಬರುವಂತಾಗುತ್ತದೆ. ನಾಗರೀಕ ಸಮಾಜದ ರೋಗ ಬಂಧುಗಳಾದ ಮಧುಮೇಹ, ರಕ್ತದ ಒತ್ತಡ, ಮಾನಸಿಕ ಒತ್ತಡ, ಬಹು ಮುಖ್ಯವಾಗಿ ಇಂದು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಕಂಡು ಬರುತ್ತಿರುವ ಥೈರಾಯಿಡ್ ವ್ಯತ್ಯಾಸ–ಇವೆಲ್ಲಾ ಯಾರನ್ನು ತಾನೇ ನೆಮ್ಮದಿಯಾಗಿರಲು ಬಿಟ್ಟಿವೆ?. ಇಂತಹ ರೋಗಗಳಿಗೆ ಕಾರಣ ಹುಡುಕುತ್ತಾ ಹೋದ ವೈದ್ಯ ಶಾಸ್ತ್ರ ನಿಂತಿದ್ದು ಒಂದು ಹೊಸಾ ಕವಲಿನ ವಿಭಾಗದಲ್ಲಿ. ಅದೇ ನಿರ್ನಾಳ ಗ್ರಂಥಿ ವಿಕಾರಗಳೆಂಬ ಹೊಸ ವಿಭಾಗ.

**ಆಯುರ್ವೇದ ಒಂದು ಪರಿಪೂರ್ಣ ಶಾಸ್ತ್ರ. ಭಾರತೀಯರ ಅಗಾಧ ಜ್ಞಾನ ಭಂಡಾರ ಎಂದೆಲ್ಲಾ ಅನೇಕ ದೇಶಗಳ ತಜ್ಞವೈದ್ಯರು ಪರಿಗಣಿಸುತ್ತಿರುವಾಗ, ಥೈರಾಯಿಡ್ ರೋಗದ ಬಗ್ಗೆ ಆಯುರ್ವೇದದಲ್ಲಿ ಯಾವ ವಿಚಾರವಿದೆ, ಚಿಕಿತ್ಸೆ ಲಭ್ಯವಿದೆಯೆ? ಎಂದು ಚಿಂತಿಸಲು ಇದು ಸಕಾಲ.**

ಮೊದಲು ಥೈರಾಯಿಡ್–ಎಂಬ ರೋಗದ ಬಗ್ಗೆ ದೊರೆಯಬಹುದಾದ, ಸುಲಭವಾಗಿ ಅರ್ಥವಾಗುವ ಕೆಲವು ವಿಚಾರ ತಿಳಿಯೋಣ, ಮೆದುಳಿನಲ್ಲಿರುವ ಸುಮಾರು ಅವರೆ ಕಾಳು ಗಾತ್ರದ–ಪಿಟ್ಯೂಟರಿ ಗ್ರಂಥಿಯನ್ನು ರಾಜ ಗ್ರಂಥಿ ಎಂದು ಕರೆಯಲು ಕಾರಣ, ಅದು ಉಳಿದ ಎಲ್ಲಾ ಗ್ರಂಥಿಗಳ ಕಾರ್ಯವನ್ನು ನಿಯಂತ್ರಿಸುವುದರಿಂದ. ಈ ಪಿಟ್ಯೂಟರಿ ಸ್ರವಿಸುವ ಒಂದು ಹಾರ್ಮೋನು–ಟಿ.ಎಸ್.ಹೆಚ್ (TSH). ಇದು ಥೈರಾಯಿಡ್ ಗ್ರಂಥಿಯ ಕಾರ್ಯವನ್ನು ನಿಯಂತ್ರಿಸುತ್ತದೆ. ಚಿಟ್ಟೆಯಾಕಾರದ, ಸುಮಾರು 20–25 ಗ್ರಾಂ ತೂಕವಿರುವ, 5–2–2–ಸೆ.ಮೀ. ಅಳತೆಯ ಥೈರಾಯಡ್ ಗ್ರಂಥಿ ಗಂಟಲಿನ ಮುಂಭಾಗದಲ್ಲಿ ಇದ್ದು ಅನೇಕ ಜೈವಿಕ ಕ್ರಿಯೆಗಳು ತಮ್ಮ ಪರಿಧಿಯಲ್ಲಿ ನಡೆಯಲು ಸಹಾಯ ಮಾಡುತ್ತದೆ. ಯಾವುದೇ ಕಾರಣಕ್ಕೆ ಥೈರಾಯಿಡ್ ತನ್ನ ಕಾರ್ಯದಲ್ಲಿ ವ್ಯತ್ಯಾಸ ಮಾಡಿದಾಗ ಅನೇಕ ರೋಗಗಳ ಲಕ್ಷಣಗಳು ಪ್ರಕಟಗೊಳ್ಳುತ್ತವೆ.

ಥೈರಾಯಿಡ್ ತನ್ನ ಕಾರ್ಯದಲ್ಲಿ ವ್ಯತ್ಯಾಸಮಾಡಿಕೊಂಡಾಗ ಮುಖ್ಯವಾಗಿ ಈ ಕೆಳಕಂಡ ಎಲ್ಲಾ ದೇಹದ ವ್ಯೂಹಗಳಲ್ಲಿ ಏರುಪೇರು ಕಂಡುಬರುತ್ತದೆ

1. ರಕ್ತ ಪರಿಚಲನಾವ್ಯೂಹ–ನಿಧಾನಗತಿಯಲ್ಲಿ ಕಂಡು ಬರುವ ಹೃದಯ ಬಡಿತ, ಹೆಚ್ಚಿನ ವಿಕಸನ ಒತ್ತಡ, ಇತ್ಯಾದಿಗಳು.
2. ಕೇಂದ್ರ ನರ ಮಂಡಲ–ಕುಗ್ಗಿದ ಜ್ಞಾಪಕ ಶಕ್ತಿ.ಒಂದು ಬಗೆಯ ಮಾನಸಿಕ ಚಿಂತೆ, ಯಾವ ವಿಚಾರದಲ್ಲೂ ಆಸಕ್ತಿಯಿಲ್ಲದಿರುವುದು, ಇತ್ಯಾದಿ.
3. ಜೀರ್ಣಾಂಗಗಳು–ಮಲ ಬದ್ಧತೆ, ಹಸಿವಿಲ್ಲದಿರುವಿಕೆ., ಕುಗ್ಗಿದ ಕರುಳಿನ ಚಲನೆ, ಇತ್ಯಾದಿ.
4. ಮಾಂಸ ಮತ್ತು ಮೂಳೆಗಳಲ್ಲಿ–ನೋವು, ಗಟ್ಟಿಯಾದಂತ ಭಾವ, ದುರ್ಬಲತೆ.
5. ಮೂತ್ರ ಜನಕಾಂಗಗಳು – ಮೂತ್ರ ಹೋಗದಿರುವಿಕೆ, ಅದರಿಂದ ಉಂಟಾದ ದೇಹದ ಶೋಥ. ಕಡಿಮೆಯಾದ ಮೂತ್ರ ಶೋಧನೆ, ಇತ್ಯಾದಿ.
6. ಜನನಾಂಗಗಳು – ಸ್ತ್ರೀಯರಲ್ಲಿ ಮುಟ್ಟಿನ ದೋಷದಂತಹ ವ್ಯತ್ಯಾಸ, ಫಲವತ್ತತೆ ಕುಗ್ಗುವುದು, ಅಂಡಾಶಯದಿಂದ ತತ್ತಿ ಬಿಡುಗಡೆಯಾಗದಿರುವುದು ಇತ್ಯಾದಿ.
7. ಚರ್ಮ ಒರಟಾಗುವುದು, ಕೂದಲು ಉದುರಿ ಹೋಗುವುದು ಇವೆಲ್ಲಾ ಕಂಡು ಬರುತ್ತವೆ.

ನಮ್ಮ ಮುಂದಿರುವ ಪ್ರಶ್ನೆ, ದೀರ್ಘಕಾಲ, ಅಥವಾ ಜೀವನ ಪರ್ಯಂತ ಚಿಕಿತ್ಸೆಮಾಡಬೇಕಾದ ಈ ಥೈರಾಯಿಡ್ ವ್ಯಾಧಿಯ ಬಗ್ಗೆ ಆಯುರ್ವೇದ ಏನು ಹೇಳುತ್ತದೆ? ಎಂದು ಮೊದಲು ಚರಕ, ಸುಶ್ರುತ, ವಾಗ್ಭಟರ ಸಂಹಿತೆಗಳಲ್ಲಿ ನೋಡೋಣ. "ಗಲಗಂಡ, ಗಂಡಮಾಲಾ, ಅಪಚಿ, ಅರ್ಬುದ" ವೆಂಬ ಒಂದು ಅಧ್ಯಾಯವೇ ಇದೆ. ಅವರ ನಿಖರವಾದ ವಿವರಣೆ ಹಾಗೂ ಸೂಚಿಸಿದ ಚಿಕಿತ್ಸಾ ವಿವರಣೆ ನಿಜವಾಗಿಯೂ ಒಂದು ವೈಜ್ಞಾನಿಕ ದೃಷ್ಟಿಕೋನದಿಂದ ಪರಿಪೂರ್ಣ.

ಯಾವುದೇ ಒಂದು ವಿಚಾರವಾದರೂ, ಕೆಲವು ಪೂರಕ ಸಾಕ್ಷ್ಯವಿದ್ದರೆ ಮಾತ್ರ ಅದು ಒಂದು ಸಿದ್ಧಾಂತವಾಗಬಹುದು. ಆದುದರಿಂದ ನೇರವಾಗಿ ಇಲ್ಲಿ ಆಯಾ ಗ್ರಂಥಗಳಿಂದ ಕೆಲವು ಭಾಗಗಳನ್ನು ಕೊಡುತ್ತಿದ್ದೇನೆ.

ಸುಶ್ರುತ ಸಂಹಿತೆಯಲ್ಲಿ ಈ ಗಲಗಂಡ ನಿದಾನ ಅಥವಾ ಆಗುವ ಕಾರಣವನ್ನು ಹೀಗೆ ವಿವರಿಸಿದ್ದಾರೆ.

"ವಾತಃಕಫಶ್ಚೈವ ಗಲೇಪ್ರವೃದ್ಧೌ ಮನ್ಯೇತುಸಂಸ್ಸೃತ್ಯ ತಥೈವಮೇದ ।ಕುರ್ವಂತಿಗಣ್ಡಂ ಕ್ರಮಶಃಸ್ವಲಿಂಗ್ಯೆಃಸಮನ್ವಿತಂ ತಂಗಲಂಗಂಡ ಮಾಹುಃ ॥ ಸು.282 ॥

ಇಂದಿನ ಥೈರಾಯಿಡನ್ನು ಆಯುರ್ವೇದ "ಗಲಗಂಡ "ವೆಂದು ಕರೆಯುತ್ತದೆ. ಮೂಲ ಸಿದ್ಧಾಂತ ತತ್ವದಲ್ಲಿ ಹೇಳುವುದಾದರೆ ವಾತ, ಕಫ ಮತ್ತು ಮೇದಸ್ಸು ಕುತ್ತಿಗೆಯನ್ನು ಆಶ್ರಯಿಸಿ "ಗಲಗಂಡ" ವ್ಯಾಧಿಯನ್ನುಂಟು ಮಾಡುತ್ತವೆ. ವಾತಾ ಮತ್ತು ಕಫಗಳನ್ನು ನಿಜವಾದ ಅರ್ಥದಲ್ಲಿ ನೋಡಿದರೆ ಅವು ಥೈರಾಯಿಡ್ ಗ್ರಂಥಿಯ ಕಾರ್ಯವನ್ನು , ಮೇದಸ್ಸನ್ನು ರಚನೆಯಲ್ಲಿ ಆದ ವ್ಯತ್ಯಾಸವನ್ನಾಗಿ ಪರಿಗಣಿಸಬಹುದು.

ಆಯುರ್ವೇದದ ಮತ್ತಷ್ಟು ಆಳಕ್ಕಿಳಿದರೆ ಮತ್ತಷ್ಟು ವಿವರ ದೊರೆಯುತ್ತದೆ. ಥೈರಾಯಿಡ್ ತನ್ನ ಕಾರ್ಯದಲ್ಲಿ ಮಾಡುವ ವ್ಯತ್ಯಾಸವನ್ನು ಎರಡು ಭಾಗವಾಗಿ ಮಾಡುತ್ತಾರೆ. ಹೈಪರ್ ಮತ್ತು ಹೈಪೋ, ಇದನ್ನುತಿಳಿಯುವ ಮೊದಲು ಸ್ವಲ್ಪ ವಿವರ ಅಗತ್ಯ.

Hypothyroidism results when there is a destruction of the thyroid gland by the body's defense system (auto immunity), or surgical removal, or rarely congenital. Hypothyroidism or thyrotoxicosis indicates that the gland is producing more hormone than the body needs, resulting in an increase in the metabolic rate of the body.

ಕೆಲವು ಕಾರಣಗಳಿಂದ ಥೈರಾಯಿಡ್ ತನ್ನ ಹಾರ್ಮೋನುಗಳ ಉತ್ಪಾದನೆಯಲ್ಲಿ ವ್ಯತ್ಯಾಸ ಮಾಡಿಬಿಡುತ್ತದೆ. ಮುಖ್ಯವಾಗಿ ಇಲ್ಲಿ ಥೈರಾಯಿಡ್‌ನ ಎರಡು ಹಾರ್ಮೋನುಗಳ ಬಗ್ಗೆ ಸ್ಥೂಲ ಪರಿಚಯ ಮುಖ್ಯ. ಟಿ-3, ಮತ್ತು ಟಿ-4 ಥೈರಾಯಿಡ್ ಹಾರ್ಮೋನುಗಳು. ದೇಹದ ಅನೇಕ ಕ್ರಿಯೆಗಳ ನಿಯಂತ್ರಕಗಳು. ಇವುಗಳು ಉತ್ಪತ್ತಿಯ ನಿಯಂತ್ರಣ ಪಿಟ್ಯೂಟರಿ ಎಂಬ ರಾಜಗ್ರಂಥಿಯು ಸ್ರವಿಸುವ ಟಿ.ಎಸ್.ಹೆಚ್-ಎಂಬ ಹಾರ್ಮೋನನ್ನು ಅವಲಂಬಿಸಿರುತ್ತದೆ. ಥೈರಾಯಿಡ್ ಹಾರ್ಮೋನುಗಳ ಸ್ರಾವ ಹೆಚ್ಚಾದರೆ ಅದನ್ನು ಹೈಪರ್, ಸ್ರಾವ ಕಡಿಮೆಯಾದರೆ ಅದನ್ನು ಹೈಪೋ ಎಂದು ಪರಿಗಣಿಸಿ ಚಿಕಿತ್ಸೆ ಮಾಡಬೇಕಾಗುತ್ತದೆ.

ಸುಲಭವಾಗಿ ಅರ್ಥಮಾಡಿಕೊಳ್ಳುವುದಾದರೆ ಟಿ.ಎಸ್.ಹೆಚ್-ಪ್ರಮಾಣದಲ್ಲಿ ಹೆಚ್ಚಳವಾದಾಗ, ಟಿ-3 ಮತ್ತು ಟಿ-4 ರ ಪ್ರಮಾಣ ಕಡಿಮೆಯಾಗುತ್ತದೆ. ಇದು ಹೈಪೋ ಥೈರಾಯಿಡಿಸಂ, ಮತ್ತೊಂದು ಬಗೆಯಲ್ಲಿ ಟಿ.ಎಸ್.ಹೆಚ್-ನ ಪ್ರಮಾಣದಲ್ಲಿ ಕಡಿಮೆಯಾದಾಗ ಟಿ-3. ಮತ್ತು ಟಿ-4ರ ಪ್ರಮಾಣದಲ್ಲಿ ಹೆಚ್ಚಳವಾಗುತ್ತದೆ. ಇದೇ ಹೈಪರ್ ಥೈರಾಯಿಡಿಸಂ. ಅಂದರೆ ಟಿ-3 ಮತ್ತು ಟಿ-4 ರ ಪ್ರಮಾಣ ವಿಲೋಮವಾಗಿ ಟಿ.ಎಸ್.ಹೆಚ್‌ನ್ನು ಅವಲಂಬಿಸಿರುತ್ತದೆ. ಸಾಮಾನ್ಯವಾಗಿ ಇದನ್ನು ಪ್ರಯೋಗಾಲಯಗಳ ಪರೀಕ್ಷೆಯಿಂದ ತಿಳಿಯಬಹುದು.

ಆಯುರ್ವೇದದ ಸಂಹಿತೆಗಳನ್ನು ಅಭ್ಯಾಸ ಮಾಡಿದರೆ, ಇದರ ಸ್ಪಷ್ಟನೆ ದೊರೆಯುತ್ತದೆ. ಆಯುರ್ವೇದ "ಗಲಗಂಡ"-ವೆಂದು ಕರೆದಿರುವ ಈ ವಿಕಾರ, ವಾತಜ, ಕಫಜ ಮತ್ತು ಮೇದಜವೆಂದು ಮೂರು ವಿಭಾಗ ಮಾಡಿದೆ. ಕೇವಲ ಕುತೂಹಲಕ್ಕಾಗಿ ಹೈಪರ್ ಮತ್ತು ವಾತಜ ಗಲಗಂಡವನ್ನು ನೋಡೋಣ. ಹೈಪರ್‌ನ ಮುಖ್ಯ ಲಕ್ಷಣಗಳೆಂದರೆ – ಹೃದಯದ ಬಡಿತದಲ್ಲಿ ಹೆಚ್ಚಳ, ಆಯಾಸ, ದೇಹದ ತೂಕದಲ್ಲಿ ಇಳಿತ, ನಿದ್ರಾಹೀನತೆ, ಮಾನಸಿಕ ಕ್ಷೋಭೆ, ಭಯ, ಅನೇಕ ಬಾರಿ ಮಲ ಪ್ರವೃತ್ತಿ, ಸ್ತ್ರೀಯರಲ್ಲಿ ಋತು ತೊಂದರೆ, ಕೂದಲು ಉದುರುವುದು, ಮಾಂಸ ಖಂಡದಲ್ಲಿ ದೌರ್ಬಲ್ಯ ಇತ್ಯಾದಿ. ಚರಕ ಸಂಹಿತೆಯಲ್ಲಿ (110–11)ವಾತ ಮೂಲವಾದ 80 ರೋಗಗಳಲ್ಲಿ ಕುಬ್ಜತ್ವಂ, ವಾಮನತ್ವಂ, ಹೃನ್ಮೋಹ, ಹೃದ್ರವ, ಕೇಶ ಭೂಮಿ ಸ್ಫುಟನಂ, ಶ್ರಮ, ಭ್ರಮ, ವಿಷಾದ, ಅಸ್ವಪ್ನ, ಅತಿಪ್ರಲಾಪ ಇವಲ್ಲದೆ

"ತೋದಾನ್ವಿತಃ ಕೃಷ್ಣಸಿರಾವನದ್ಧಃ ಅಸ್ವಪ್ನ, ಅತಿಪ್ರಲಾಪ ಇವಲ್ಲದೆ ಮೇದೋನ್ವಿತಶ್ಚೋಪಚಿತಶ್ಚಕಾಲದ್ಭವೇತ್ತ್ರದಿಗ್ಧೇಚಗಲೇರುಜಶ್ಚ ॥ ಸು 282 ॥

ಎಂದು ಸುಶ್ರುತಾಚಾರ್ಯರ ವಿವರಣೆ ವಾತಜ ಗಲಗಂಡದ ಬಗ್ಗೆ ದೊರೆಯುತ್ತದೆ. ಚಿಕಿತ್ಸಾ ದೃಷ್ಟಿಯಿಂದ ಆಯುರ್ವೇದದ ವಾತಜ ಗಲಗಂಡ ಸಂಪೂರ್ಣವಾಗಿ ಹೈಪರ್ ಥೈರಾಯಿಡ್ ಅವಸ್ಥೆಯಾಗುತ್ತದೆ.

ಮುಂದಿನದು ಹೈಪೋ ಅವಸ್ಥೆ, ಅಂದರೆ ಥೈರಾಯಿಡ್ ಗ್ರಂಥಿಯ ಅಲ್ಪ ಸ್ರಾವ, ಇದು ಪೂರ್ಣವಾಗಿ ಆಯುರ್ವೇದದ ಕಫದ ಗಲಗಂಡವನ್ನು ಹೋಲುತ್ತದೆ. ಅದರ ವಿವರಣೆ ನೋಡಿದರೆ.

"ಸ್ಥಿರಃ ಸವರ್ಣೋಲ್ಪರುಗ್ರಕಣ್ಡುಃ ಶೀತೋಮಹಾಂ ಸ್ಯಾಪಿಕಫಾತ್ಮಕಸ್ತು । ಮಾಧುರ್ಯಮಾಸ್ಯಸ್ಯ ವತಸ್ಯ ಜನ್ತೋರ್ಭವೇತ್ತಥಾ ತಾಲುಗಲ ಪ್ರಲೇಪ ॥ ಸುಶ್ರುತ 828 ॥

ಸ್ಥಿರ, ವರ್ಣಭೇದವಿಲ್ಲದೆ, ಅಲ್ಪ ನೋವು, ಸಾವಕಾಶವಾಗಿ ಬೆಳೆಯುವುದೆಂಬ ವಿವರಣೆ, ಅತ್ಯಂತ ಪ್ರಮುಖವಾಗಿ ಪ್ರಾರಂಭದ ಅಧ್ಯಾಯವಾದ ದೋಷ ಧಾತು ವಿಚಾರಾಧ್ಯಾಯದಲ್ಲಿ ಇಪ್ಪತ್ತು ಕಫಜನ್ಯ ವಿಕಾರಗಳನ್ನು ವಿವರಿಸಲಾಗಿದೆ. ಚರಕರ ಪ್ರಕಾರ ಅದನ್ನು ನೋಡಿದರೆ –

ಆಲಸ್ಯಂ ಚ ಮುಖ ಮಾಧುರ್ಯಂ ಚ ಮುಖ ಸ್ರಾವಶ್ಚ ಉದ್ಗಾರಶ್ಚ । ಶ್ಲೇಷ್ಮೋದ್ಗರಣಂ ಚ ಮಲಸ್ಯಾಧಿಕ್ಯಂ ಕಂಠೋಪಲೇಪಶ್ಚ ವಲಾತಶ್ಚ ॥

ಹೃದಯೋಪಲೇಪಶ್ಚ ಧಮನೀಪ್ರತಿಚಯಶ್ಚ ಗಲಗಂಡಶ್ಚ ಅತಿ ಸ್ಥೌಲ್ಯಂ ಚ ॥

ಸಂಪೂರ್ಣ ವಿವರಣೆಯೊಂದಿಗೆ ದೊರೆಯುತ್ತದೆ. ಅಂದರೆ, ಹೆಚ್ಚು ನಿದ್ರೆ, ಜಡತ್ವ, ಭಾರವಾದ ಶರೀರ, ಆಲಸ್ಯ, ಹೆಚ್ಚು ಮಲ, ಹೃದಯ ಲೇಪ, ಧಮನಿಗಳಲ್ಲಿ ಬಂಧ, ಕುತ್ತಿಗೆಯಲ್ಲಿ ಗಂಟು ಬರುವುದು, ಇವೆಲ್ಲಾ ಕಫವಿಕಾರಗಳು.

ಈ ಲಕ್ಷಣಗಳು ಕಂಡು ಬಂದರೆ ಹೈಪೋ ಥೈರಾಯಿಡ್ ಇರಬೇಕೆಂದು ವೈದ್ಯರು ಅನುಮಾನಿಸುತ್ತಾರೆ.

1. ಸಂಧಿ ಶೂಲ
2. ಮಲಬದ್ಧತೆ
3. ಹಸಿವಿಲ್ಲದಿರುವುದು
4. ಜ್ಞಾಪಕ ಶಕ್ತಿ ಕುಂದುವುದು
5. ಮಾನಸಿಕ ಕ್ಷೋಭೆ
6. ಒಣ ಚರ್ಮ
7. ಮುಖದಲ್ಲಿ ಒಂದುರೀತಿಯ ಶೋಥ
8. ಆಯಾಸ
9. ಶಿರಃ ಶೂಲ
10. ಒಡಕು ಧ್ವನಿ
11. ಮಾಸಿಕ ಋತು ಚಕ್ರದಲ್ಲಿ ಏರುಪೇರು
12. ಅತಿನಿದ್ರಾ
13. ದೇಹದ ತೂಕದಲ್ಲಿ ಹೆಚ್ಚಳ.

ಇವೆಲ್ಲಾ ಇರಲೇಬೇಕೆಂಬ ನಿಯಮವೂ ಇಲ್ಲ.

ಮೇಲಿನ ಸಾಮ್ಯತೆಗಳನ್ನು ಗಮನಿಸಿದರೆ ಆಯುರ್ವೇದಕ್ಕೆ ಥೈರಾಯ್ಡ್ ಎಂದು ಕರೆಯುವ ರೋಗದ ಪರಿಚಯವಿತ್ತು. ನಮ್ಮ ಆಧುನಿಕ ಜಗತ್ತು ಅದನ್ನು ಒಂದು ಕಷ್ಟಕಾರಕ ರೋಗವೆಂದು ಮಾರ್ಪಾಡಿಸಿದೆ ಎಂಬುದು ನಿಶ್ಚಯವಾಗುತ್ತದೆ. ಅಂದಿನ ಕಾಲಕ್ಕೆ ಇದನ್ನು ಒಂದು ಕ್ಷುದ್ರ ರೋಗವೆಂದು ಭಾವಿಸಿದ್ದರು.

ಆಯುರ್ವೇದದಲ್ಲಿ ಹೇಳುವ ಮೂರನೆಯ ಪ್ರಕಾರ– ಮೇದೋಜ ಗಲಗಂಡ, ಚಿಕಿತ್ಸಾ ದೃಷ್ಟಿಯಿಂದ ಇದನ್ನು ಅರ್ಥ ಮಾಡಿಕೊಂಡರೆ–ಇಂದಿನ ಸಿಸ್ಟ್ (CYST) ಎಂದು ಪರಿಗಣಿಸ ಬಹುದು. ಇಲ್ಲಿ ಮುಖ್ಯವಾಗಿ ರಚನೆಯಲ್ಲಿ ಆದ ವ್ಯತ್ಯಾಸ ಹಾಗೂ ಇನ್ನಿತರ ಕಾರಣಗಳಿಂದ ಥೈರಾಯಿಡ್‌ನಲ್ಲಿ ಒಂದು ಗ್ರಂಥಿ ಅಥವಾ ಗಂಟು ಪ್ರಾರಂಭವಾಗುತ್ತದೆ. ಕೆಲವೊಮ್ಮೆ ಕಾರ್ಯದಲ್ಲೂ ವ್ಯತ್ಯಾಸಕಾಣಬಹುದು. ಇದರ ಬಗ್ಗೆ ಸುಶ್ರುತ ಸಂಹಿತೆಯಲ್ಲಿ ಕೊಡುವ ವಿವರಣೆ ನೋಡೋಣ.

"ಸ್ನಿಗ್ಧೋಮೃದುಃ ಪಾಣ್ಡುರನಿಷ್ಟಗನ್ಧೋ, ಮೇದಃಕೃತೋನೀರು ಗಥಾತಿ ಕಣ್ಡುಃ ।

ಪ್ರಲಮ್ಬತೇಲಾಬುವದಲ್ಪ ಮೂಲೋದೇಹಾನುರೂಪ ಕ್ಷಯವೃದ್ಧಿಯುಕ್ತಃ ॥

ಸ್ನಿಗ್ಧಾಸ್ಯತಾತಸ್ಯ ಭವೇಚ್ಚ ಜನ್ತೋರ್ಗಲೇನಶಬ್ದಂ ಕುರುತೇಚನಿತ್ಯಮ್ ॥ ಸುಶ್ರುತ 282–83 ॥

ಈ ವಿವರಣೆಗಳು ಕೇವಲ ಆಯುರ್ವೇದವೂ ಸಹ ಅಂದಿನ ದಿನದಲ್ಲೇ ಥೈರಾಯಿಡ್ ರೋಗದ ಬಗ್ಗೆ ತನ್ನ ಚಿಂತನೆ ಮಾಡಿತ್ತು ಎಂಬುದನ್ನು ವಿವರಿಸಲಷ್ಟೇ. ಆದರೂ ಯಾವುದೇ ವೈಜ್ಞಾನಿಕ ಸಲಕರಣೆ, ಅತ್ಯಾಧುನಿಕ ಪ್ರಯೋಗಾಲಯಗಳ ಸಹಾಯವಿಲ್ಲದೆ ಕೇವಲ ತನ್ನ ತ್ರಿದೋಷ ಸಿದ್ಧಾಂತದ ಮೇಲೆ ರೂಪಿಸಿರುವುದೂ ಒಂದು ವಿಶೇಷತೆ. ಆಯುರ್ವೇದದ ವೈಜ್ಞಾನಿಕ ನಿಲುವು ಅಷ್ಟು ನಿಖರವಾಗಿತ್ತು ಎಂಬುದು ಓದುಗರಿಗೆ ತಿಳಿಯಲಿ ಎಂಬ ಆಶಯ. ಅದು ಮತ್ತೂ ಮುಂದೆ ಹೋಗಿ ಗಲಗಂಡದ ಅಸಾಧ್ಯ ಲಕ್ಷಣವನ್ನೂ ತಿಳಿಸಿದೆ. ಅಂದರೆ ಅಂದಿನ ಕಾಲಕ್ಕೆ ಇದನ್ನು ಅನ್ವಯಿಸಬಹುದು.

"ಕೃಚ್ಛ್ರಾತ್ ಶ್ವಸನಂ, ಮೃದು ಸರ್ವಗಾತ್ರಂ ಸಂವತ್ಸರಾತೀತ ಮರೋಚಕಾರ್ತಮ್ ।

ಕ್ಷೀಣಾನ್ತು ವೈದ್ಯೋಗಗಣ್ಡಿನಂತಂ ಭಿನ್ನಸ್ವರಂಚೈವವಿವರ್ಜ ಯೇತ್ತು ॥ ಸುಶ್ರುತ – 282 ॥

ಉಸಿರಾಟ ಕಷ್ಟವಾದ, ಇಡೀ ಶರೀರ ಮೃದುವಾದ (ಅತೀ ಕೋಮಲವಾದ), ಒಂದು ವರ್ಷ ಹಳೆಯದಾದ, ಕ್ಷೀಣ ಶರೀರ ಮತ್ತು ಅತ್ಯಂತ ಕಷ್ಟವಾಗಿ ಮಾತಾಡುವಂತಹವರು ಚಿಕಿತ್ಸೆಗೆ ಅನರ್ಹ ಅಥವಾ ಅಸಾಧ್ಯವೆಂದು. ಆದರೆ ಇಂದಿನ ಅಧುನಿಕ ಕಾಲದಲ್ಲಿ ಇದು ಸಾಧ್ಯವಾಗಿದೆ.

ಇಂದು ಪ್ರತಿ ರೋಗಿಯ ರಕ್ತವನ್ನೂ ಪ್ರಯೋಗಾಲಯದಲ್ಲಿ ಪರೀಕ್ಷಿಸಿ ನಂತರ ಥೈರಾಯಿಡ್ ಬಗ್ಗೆ, ಚಿಕಿತ್ಸೆಯ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ. ಇಂದಿನ ವೈಜ್ಞಾನಿಕ ಆವಿಷ್ಕಾರಗಳು ಇದನ್ನು ಸಾಧ್ಯವಾಗಿಸಿವೆ. ರಕ್ತ ಪರೀಕ್ಷೆಯಲ್ಲಿ ಅನೇಕ ವಿಧಾನಗಳು ಇಂದು ಲಭ್ಯ. ಪ್ರತಿಯೊಂದು ವಿಧಾನವೂ ತನ್ನದೆ ಆದ ನಿರ್ದಿಷ್ಟ ಕನಿಷ್ಟ ಹಾಗೂ ಗರಿಷ್ಟ ಮಿತಿಗಳನ್ನು ಹೊಂದಿದೆ. ಸಾಧಾರಣವಾಗಿ ಪ್ರತಿಯೊಬ್ಬ ವೈದ್ಯರೂ ಈ ಪ್ರಯೋಗಾಲಯದ ವರದಿಯ ಮೇಲೇ ರೋಗಿಯ ಚಿಕಿತ್ಸೆಯನ್ನು ನಿರ್ಧರಿಸುತ್ತಾರೆ, ಹಾಗೂ ರೋಗಿಯು ಥೈರಾಯಿಡ್‌ನ ಹೆಚ್ಚಿನ ಸ್ರಾವ ಅಥವಾ ಕುಗ್ಗಿದ ಸ್ರಾವದಿಂದ ಬಳಲುತ್ತಿರುವುದನ್ನು ಖಚಿತ ಪಡಿಸಿಕೊಂಡು ನಂತರ ಚಿಕಿತ್ಸೆಯನ್ನು ಪ್ರಾರಂಭಿಸಲಾಗುತ್ತದೆ. ಸಾಧಾರಣವಾಗಿ ಇಂದು ಲಭ್ಯವಿರುವ ಕೆಲವು ಥೈರಾಯಿಡ್ ಪತ್ತೆಯ, ಪ್ರಯೋಗಾಲಯಗಳ ವಿಧಾನಗಳು ಕೆಳಕಂಡಂತೆ ಇರುತ್ತವೆ.

Normal ranges of thyroid hormones for clinical references.

The different methods used for the clinical diagnosis of thyroid are

1. C L I A – Method
2. R I A – Method
3. V I D A S – System
4. Chemi luminescence method.
5. E L F A – Method

One should know the reference range in each method.

1. In C L I A - method

T3- 60-180ng/dl. T4-3.2-12.6ug/dl. TSH-0.35-5.50ul/ml
FT3-2.3-4.2 FT4-0.92-1.80

2. In R I A method (Radio immuno Assay)

T3- 70-200ng/dl. T4-4.0-13.0 TSH-0.30-7.0
FT3-2-5.0 FT4-0.7-2.00

3. In V I D A S System

T3-0.7- 1.9 T4-4.6-10.00 TSH-0.2-8.00

4. In Chemiluminiscence-----method

T3---0.7---2.0 T4---4.5---12.5 TSH – 0.4-5.5

5. In E L F A method

T3-0.7-2.04 T4-4.5----12.00 TSH-0.2-6.6

ಇವುಗಳಲ್ಲಿ ಅನೇಕ ಬಾರಿ ಅಲ್ಪ ಸ್ವಲ್ಪ ವ್ಯತ್ಯಾಸ ಕಂಡು ಬರುವುದುಂಟು, ಮೇಲಿನವು ಸಾಧಾರಣವಾಗಿ ಪ್ರಾಯದಲ್ಲಿ ಕಂಡು ಬರುವ ಮಾಪಕಗಳೆಂದು ತೀರ್ಮಾನಿಸಲಾಗಿದೆ.

ಇದು ಕೇವಲ ತಿಳುವಳಿಕೆಗೆ ಮಾತ್ರ. ವೈದ್ಯರು ಮತ್ತಷ್ಟು ಪರೀಕ್ಷೆ ಮಾಡಿದನಂತರವಷ್ಟೇ ಥೈರಾಯಿಡ್‌ನ ಬಗ್ಗೆ ತೀರ್ಮಾನಕ್ಕೆ ಬರುತ್ತಾರೆ. ಈಗ ಮತ್ತೊಂದು ಪ್ರಶ್ನೆ ಬರುತ್ತದೆ. ಆಯುರ್ವೇದ ಈ ರೋಗಕ್ಕೆ ಪರಿಹಾರ ಕೊಡುತ್ತದೆಯ್ಯೇ ಎಂದು. ಯಾವ ರೋಗವನ್ನು ಕೇವಲ ಕ್ಷುದ್ರರೋಗವೆಂದು ಪರಿಗಣಿಸಿತ್ತೋ ಅಂತಹ ರೋಗಕ್ಕೆ ಸುಲಭವಾಗೇ ಚಿಕಿತ್ಸೆ ಮಾಡಬಹುದು ಎಂದು. ಅದಕ್ಕಾಗೆ ಅನೇಕ ಔಷಧಿಗಳ ಪಟ್ಟಿಯನ್ನೇ ಆಯುರ್ವೇದ ಸಿದ್ಧಮಾಡಿ ಕೊಟ್ಟಿದೆ. ವೈದ್ಯರ ಕೆಲಸವೇನಿದ್ದರೂ ರೋಗಿಯ ಬಲಾಬಲ, ಪ್ರಕೃತಿ, ರೋಗನಿದಾನವನ್ನು ಮಾಡಿ ಚಿಕಿತ್ಸೆ ಮಾಡುವುದಷ್ಟೇ. ಚಿಕಿತ್ಸೆಯಲ್ಲಿ

1. ಲೇಪ

2. ನಸ್ಯ

3. ಭಸ್ಮ ಪ್ರಯೋಗ

4. ಆಂತರಿಕವಾಗಿ ಕೊಡುವ ಔಷಧಿ ಇತ್ಯಾದಿಗಳ ಒಂದು ದೊಡ್ಡ ಪಟ್ಟಿಯೇ ಇದೆ. ಅತ್ಯಂತ ಮುಖ್ಯವಾದುದ್ದು ಪಥ್ಯ. ಆಯುರ್ವೇದ ಚಿಕಿತ್ಸೆ ಪೂರ್ಣಫಲ ಕೊಡಬೇಕಿದ್ದರೆ ಪಥ್ಯಮುಖ್ಯ. ದೀರ್ಘಕಾಲ ಅಥವಾ ಜೀವನ ಪರ್ಯಂತ ಚಿಕಿತ್ಸೆ ಬೇಡವೆಂದರೆ ಚಿಕಿತ್ಸಾ ಕಾಲದಲ್ಲಿ ಪಥ್ಯಪಾಲಿಸುವುದು ಮುಖ್ಯ. ನಂತರ ಪಥ್ಯವಿರುವುದು ಬೇಕಿಲ್ಲ. ಆಯುರ್ವೇದದ ಮತ್ತೊಂದು ವಿಶೇಷವೆಂದರೆ ರೋಗಿಯನ್ನು ಯಾವ ಕಾಲದಲ್ಲಿ ಬೇಕಾದರೂ, ಅಂದರೆ ಹೊಸದಾಗಿ ಥೈರಾಯಿಡ್ ಬಂದಾಗ ಅಥವಾ ಈಗಾಗಲೇ ಬೇರೆ ಚಿಕಿತ್ಸಾಪದ್ಧತಿಯಲ್ಲಿ ಔಷಧಿ ಸೇವನೆ ಪ್ರಾರಂಭವಾಗಿದ್ದರೂ ಸಹ ಚಿಕಿತ್ಸೆಗೆ ಒಳಪಡಿಸಬಹುದು. ಇಲ್ಲಿ ಕೇವಲ ಚಿಕಿತ್ಸಾ ಕಾಲ ಮಾತ್ರ ಹೆಚ್ಚುತ್ತದೆಯೆ ವಿನಃ ಮತ್ತೆ ಯಾವುದುರಲ್ಲಿಯೂ ವ್ಯತ್ಯಾಸವಿಲ್ಲ. ಕ್ರಮೇಣ ಔಷಧಿಯ ಪ್ರಮಾಣವನ್ನು ಕಡಿಮೆ ಮಾಡುತ್ತಾ ಬರಲಾಗುವುದು. ರೋಗಿಯ ಮಾನಸಿಕ ನೆಮ್ಮದಿಗಾಗಿ ಪ್ರತಿಬಾರಿ ಪ್ರಯೋಗಾಲಯದ ಪರೀಕ್ಷೆ ಮಾಡಿಸುವುದು ಸೂಕ್ತ.

ಆಯುರ್ವೇದದ ಚಿಕಿತ್ಸೆಮಾಡಿದ ಅನೇಕ ರೋಗಿಗಳು ಇದರಿಂದ ಮುಕ್ತರಾಗಿರುವುದನ್ನು ಪರೀಕ್ಷೆಗಳು ಸಿದ್ಧ ಪಡಿಸಿವೆ. ಆದರ ಬಗ್ಗೆ ಕೆಲವು ಅಂಕಿಅಂಶಗಳೆಂದರೆ,

1) ವಯೋಮಾನದಲ್ಲಿ – ಒಟ್ಟು ಗಣನೆಗೆ ತೆಗೆದುಕೊಂಡರೆ, ಪ್ರತಿ ಇನ್ನೂರು ರೋಗಿಗಳಲ್ಲಿ , ಇಪ್ಪತ್ತು ವರ್ಷಕಿಂತ ಕಡಿಮೆಯವರ ಪ್ರಮಾಣ 19, ಇಪ್ಪತ್ತರಿಂದ–ನಲವತ್ತು ವಯಸ್ಸಿನವರು 102, ನಲವತ್ತೊಂದರಿಂದ –ಅರವತ್ತು ವಯಸ್ಸಿನವರು 65, ಅರವತ್ತೊಂದು –ನಂತರದವರು 14, ಅಂದರೆ ಬಹುಶಃ ಮಧ್ಯವಯಸ್ಕರಲ್ಲಿ ಥೈರಾಯಿಡ್ ತೊಂದರೆ ಹೆಚ್ಚು.

2) ಪ್ರತಿ ಇನ್ನೂರು ಥೈರಾಯಿಡ್ ರೋಗಿಗಳಲ್ಲಿ ಸ್ತ್ರೀಯರಲ್ಲಿ ಇದು ಹೆಚ್ಚು. ಅಂದರೆ 172. ಪುರುಷರಲ್ಲಿ ಈ ಪ್ರಮಾಣ ಕೇವಲ 28. ಅಂದರೆ ಈ ಥೈರಾಯಿಡ್ ಅತಿಹೆಚ್ಚು ಬಾಧಿಸುವುದು ಹೆಂಗಸರನ್ನು ಎಂದು ತಿಳಿಯಬಹುದು.

3) ಆಯುರ್ವೇದ ರೀತ್ಯ ವಿಂಗಡಿಸಿದರೆ, ವಾತಜ, ಕಫಜ ಮತ್ತು ಮೇದಜವೆಂದು ಮೂರುವಿಧಗಳು. ಇದನ್ನು ಆಧರಿಸಿ ರೋಗಗಳ ವಿಶ್ಲೇಷಣೆ ಮಾಡಿದಾಗ, ಒಟ್ಟು 200 ರೋಗಿಗಳಲ್ಲಿ 82 ಜನರಿಗೆ ವಾತಜ ಅಂದರೆ–ಹೈಪರ್ ಥೈರಾಯಿಡ್ ತೊಂದರೆ, 88 ಜನರಿಗೆ ಕಫಜ ಅಂದರೆ ಹೈಪೋ ಥೈರಾಯಿಡ್ ತೊಂದರೆ ಮತ್ತು 30 ಜನರಿಗೆ ಮೇದಜ ವಿಕಾರ ಅಥವಾ ಥೈರಾಯಿಡ್ ನಲ್ಲಿ ಗ್ರಂಥಿಯ ತೊಂದರೆ ಇರುವುದು ಚಿಕಿತ್ಸಾ ಕಾಲದಲ್ಲಿ ತಿಳಿದು ಬಂದಿತ್ತು. ಇಲ್ಲಿ ಮೇದಜವನ್ನು ಥೈರಾಯಿಡ್ ಸಿಸ್ಟ್ ಎಂದು ತೀರ್ಮಾನಿಸಿ ಚಿಕಿತ್ಸೆ ಮಾಡಲಾಗಿದೆ.

4) ಆಯುರ್ವೇದದ ಸಿದ್ಧಾಂತವನ್ನು ಅನುಸರಿಸಿ ಚಿಕಿತ್ಸೆ ಮಾಡಿದ, ಥೈರಾಯಿಡ್ ರೋಗದಿಂದ ಮುಕ್ತಿಪಡೆದ ಎಲ್ಲಾ ರೋಗಿಗಳನ್ನು ಅಭ್ಯಾಸಮಾಡಿದಾಗ ಮೇಲಿನ ಆಯುರ್ವೇದ ಸಿದ್ಧಾಂತ ಇಂದಿನ ಕಾಲಕ್ಕೂ ಸರಿ ಹೊಂದುವುದೇ ಅಲ್ಲದೆ, ತನ್ನ ಚಿಕಿತ್ಸಾಪದ್ಧತಿ ಇಂದಿಗೂ ಸಹ ಪ್ರಸ್ತುತವೆಂದು ಸಾಬೀತುಪಡಿಸುತ್ತದೆ.

ಈ ಕೆಳಗಿನ ಶೇಕಡಾವಾರು ಅಂಕಿಅಂಶಗಳು ಅದನ್ನು ಸಾಬೀತುಪಡಿಸುತ್ತವೆ. ಒಟ್ಟು ರೋಗಿಗಳು ಸಂಖ್ಯೆ ನೂರೆಂದು ಪರಿಗಣಿಸಿದಾಗ

ಅ) ಪೂರ್ಣ ಗುಣವಾದವರ ಸಂಖ್ಯೆ 30. ಇದರಲ್ಲಿ ಹೊಸದಾಗಿ ಥೈರಾಯಿಡ್ ತೊಂದರೆಗೆ ಒಳಗಾದವರು, ಹಾಗೂ ಅನೇಕ ವರ್ಷಗಳಿಂದ ಚಿಕಿತ್ಸೆ ಪಡೆಯುತ್ತಿರುವವರೂ ಸೇರುತ್ತಾರೆ. (ವಾತಜ ಮತ್ತು ಕಫಜ ಎರಡೂ ಸೇರಿ).

ಆ) ಇನ್ನೂ ಚಿಕಿತ್ಸೆ ಮುಂದುವರಿಸುತ್ತಿರುವವರು 40 ಜನ.

ಇ) ಶೇಕಡಾ 20 ಮಂದಿ ಅನೇಕ ಕಾರಣಗಳಿಂದ ಪೂರ್ಣ ಚಿಕಿತ್ಸೆಯನ್ನು ಪಡೆಯದವರು.

ಈ) ಶೇಕಡಾ 10 ಮಂದಿ ಮೇದಜ ಗಲಗಂಡ (ಥೈರಾಯಿಡ್ ಸಿಸ್ಟ್)ಗಾಗಿ ಚಿಕಿತ್ಸೆಗೆ ಒಳಗಾದವರು.

ಇಲ್ಲಿ ಒಂದು ವಿಷಯವನ್ನು ಗಮನದಲ್ಲಿಟ್ಟು ಕೊಂಡು ಚಿಕಿತ್ಸೆಯನ್ನು ಮಾಡಲಾಯಿತು. ಒಮ್ಮೆ ರೋಗಿ ತನ್ನರೋಗ ಲಕ್ಷಣಗಳಿಂದ ಮುಕ್ತನಾದ ನಂತರ ನಿಧಾನವಾಗಿ ಪಥ್ಯವನ್ನು ಸಡಿಲಿಸಿ ಆತನ ಆಹಾರ ವಿಹಾರದಲ್ಲಿ ಅನೇಕ ಮಾರ್ಪಾಡನ್ನು ಮಾಡಿ ಕೆಲವು ಜೀವನ ಕ್ರಮವನ್ನು ರೂಪಿಸಲಾಯಿತು. ಪ್ರತಿ ಆರು ತಿಂಗಳಿಗೊಮ್ಮೆ ಪ್ರಯೋಗಾಲಯದ ಸಹಾಯದಿಂದ ಆತನ ರಕ್ತವನ್ನು ಪರೀಕ್ಷಿಸಿ, ಎರಡು ವರ್ಷವಾದರೂ ಮತ್ತೆ ಯಾವ ರೋಗ ಲಕ್ಷಣವೂ ಕಂಡುಬರದ ನಂತರವಷ್ಟೇ ಆತ ರೋಗ ಮುಕ್ತನೆಂದು ತೀರ್ಮಾನಿಸಲಾಯಿತು. ಈ ಎಲ್ಲಾ ಕಾಲವಧಿಯನ್ನು ಪರಿಗಣಿಸಿದರೂ ಆಯುರ್ವೇದದ ಚಿಕಿತ್ಸೆ ಅತ್ಯಂತ ಅಲ್ಪಕಾಲದ್ದು, ಹಾಗೂ ಅತ್ಯಂತ ಪ್ರಭಾವಕಾರಿಯೆಂದು ತಿಳಿದುಬರುತ್ತದೆ.

ಹಾಗೆಯೆ ಮೇದಜ ಗಲಗಂಡ ಅಥವಾ ಥೈರಾಯಿಡ್ ಸಿಸ್ಟ್‌ನ ಪರೀಕ್ಷೆಗೆ ಶಬ್ದಾತೀತ ತರಂಗ ಚಿತ್ರಣ (ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್)ನ

ಸಹಾಯ ಪಡೆದು ರೋಗಿ ರೋಗಮುಕ್ತನಾದ ಬಗ್ಗೆ ತೀರ್ಮಾನಕ್ಕೆ ಬರಲಾಗಿದೆ. ಆಯುರ್ವೇದದಲ್ಲಿ ಇದರ ಬಗ್ಗೆ ಯಾವ ವಿವರಣೆಯೂ ಇಲ್ಲದಿರಬಹುದು. ಆದರೆ ಇಂದಿನ ಅಧುನಿಕ ಕಾಲದಲ್ಲಿ ರೋಗಿಗಳ ವಿಶ್ವಾಸವೃದ್ಧಿಸಲು ಹಾಗೂ ತಾವು ರೋಗಮುಕ್ತವಾದ ಬಗ್ಗೆ ಖಾತ್ರಿಹೊಂದಲು ಇದು ಸಹಾಯಕಾರಿಯಾಗಿರುತ್ತದೆ.

ಆಯುರ್ವೇದ ಭಾರತೀಯ ಪದ್ಧತಿ, ಅದು ಬೆಳದದ್ದೇ ಭಾರತೀಯರ ಆಹಾರ ವಿಹಾರ ಹಾಗೂ ತನ್ನ ಪರಿಸರದಲ್ಲಿ ದೊರೆಯುವ ಸಸ್ಯಜನ್ಯ, ಪ್ರಾಣಿಜನ್ಯ, ಹಾಗೂ ಖನಿಜಗಳ ಶುದ್ಧ ರೂಪದ ಚಿಕಿತ್ಸಾಪದ್ಧತಿಯಿಂದ. ನೂರಾರು ವರ್ಷ ಹಾದಿಸವೆಸಿದ ಒಂದು ಶಾಸ್ತ್ರ ತನ್ನಲ್ಲಿ ಸತ್ವವಿಲ್ಲದಿದ್ದರೆ ಬದುಕುತ್ತಲೇ ಇರಲಿಲ್ಲ. ನಮಗೀಗ ಬೇಕಾಗಿರುವುದು ಅದರ ಸತ್ವಪೂರ್ಣ ಚಿಕಿತ್ಸಾ ವಿಧಾನ.

ವೈದ್ಯ॥ ಹೆಚ್.ಎಸ್.ವೆಂಕಟೇಶ್,
**Ph: 080-7562251, Cell – 9448091313**

With Best Compliments From:

GRAM: SAFFRON

# ಅಮೃತ್ ಕೇಸರಿ ಡಿಪೋ

## AMRUTH KESARI DEPOT

Shop : 2235 6336
Resi : 2665 8312
Fax : 2291 6134
M : 98453 39841

# 18, B.B.T. Street, 1st Cross, Mamulpet, Opp. D.P.G. Complex, Bangalore - 560 053.

DEALERS IN : AYURVEDIC, AGARBATHI, RAW MATERIALS, KIRANA, DRY FRUITS, DYES & CHEMICALS

# ಸೊಂಟದ ನೋವು ಸಾವಧಾನದಿಂದ ಸಮಾಧಾನ

ಚಿಕ್ಕಂದಿನಿಂದಲೂ ನಾನು ಭಾರ ಎತ್ತುವುದರಲ್ಲಿ ಭಾರಿ ಗಟ್ಟಿಗ, ಆದ್ರೆ ಈಗ ಸ್ವಲ್ಪ ಭಾರ ಎತ್ತಿದರೂ ಸೊಂಟದ ನೋವು ಕಾಡುತ್ತದೆ. ಏನು ಮಾಡಲಿ ಡಾಕ್ಟ್ರೇ?

ಬೆಡ್ ರೂಮ್‌ನಿಂದ ಬಾತ್ ರೂಮ್‌ಗೆ ಹತ್ತೇ ಹೆಜ್ಜೆ ದೂರ. ಆದ್ರೂ ನಡೀಲಿಕ್ಕೆ ಕನಿಷ್ಠ 10 ನಿಮಿಷ ಬೇಕು. ಹಲವು ರೀತಿಯ ಔಷಧಿ ಬಳಸಿದರೂ ಸೊಂಟದ ನೋವು ಮಾತ್ರ ಕಡಿಮೆಯಾಗಿಲ್ಲ'- ಹೀಗೆ ಹೇಳಿಕೊಳ್ಳುತ್ತ ವೈದ್ಯರಲ್ಲಿಗೆ ಬರುವವರಿಗೇನೂ ಕಡಿಮೆ ಇಲ್ಲ.




ಬೆನ್ನು ನೋವು, ಕುತ್ತಿಗೆ ನೋವು, ಸೊಂಟ ನೋವು ಇವುಗಳಿಂದ ಬಳಲುತ್ತಿರುವವರ ಸಂಖ್ಯೆ ದಿನೇದಿನೆ ಹೆಚ್ಚುತ್ತಿದೆ. ಇದಕ್ಕೆ ಕಾರಣ ಅವರವರ ವಿಭಿನ್ನ ರೀತಿಯ ಕಾರ್ಯಚಟುವಟಿಕೆ ಹಾಗೂ ಶಾರೀರಿಕ ದೌರ್ಬಲ್ಯ, ಕುತ್ತಿಗೆಯಿಂದ ಹಿಡಿದು ಗುದಭಾಗದ ತನಕ ಒಟ್ಟು 33 ಮೂಳೆಗಳ ಸರಪಳಿಯಾದ ಬೆನ್ನುಹುರಿಯು 31 ಜತೆ ನರಗಳಿಗೆ ಅಡಿಪಾಯವಾಗಿದೆ. ಸೊಂಟದ ಭಾಗದಲ್ಲಿ ಬೆನ್ನು ಹುರಿಯ ಐದು ಮೂಳೆಗಳು ಮತ್ತು ಐದು ಜತೆ ನರಗಳು, ಪೃಷ್ಠದ ಭಾಗದಲ್ಲೂ ಅಷ್ಟೇ ಪ್ರಮಾಣದ ಮೂಳೆ ಹಾಗೂ ನರಗಳು ದೇಹಕ್ಕೆ ಆಧಾರ ಸ್ತಂಭದಂತೆ ಕಾರ್ಯನಿರ್ವಹಿಸುತ್ತವೆ.

ಸೊಂಟ ನೋವನ್ನು ಎರಡು ವಿಧವಾಗಿ ವಿಂಗಡಿಸಬಹುದು- ತಾತ್ಕಾಲಿಕ ಸೊಂಟ ನೋವು ಹಾಗೂ ದೀರ್ಘಕಾಲೀನ ಸೊಂಟ ನೋವು.

**ತಾತ್ಕಾಲಿಕ ಸೊಂಟ ನೋವಿಗೆ ಕಾರಣಗಳು**

- ಸೊಂಟದ ಮಾಂಸ-ಖಂಡಗಳ ಬಿಗಿತ: ಉದಾ: ಬಗ್ಗುವುದು, ಓಡುವುದು, ಭಾರ ಎತ್ತುವುದು, ಸಮತಟ್ಟಿಲ್ಲದ ಜಾಗದಲ್ಲಿ ಕೆಲಸ ಮಾಡುವುದು, ಬೀಳುವುದು, ಆತುರವಾಗಿ ಕುಳಿತೇಳುವುದು, ತಕ್ಷಣ ಪಕ್ಕಕ್ಕೆ ತಿರುಗುವುದು, ಬಹಳ ಕಾಲ ಕುಳಿತೇ ಇರುವುದು ಮುಂತಾದ ಸಂದರ್ಭಗಳಲ್ಲಿ ಮಾಂಸ-ಖಂಡಗಳ ಮೇಲೆ ಒತ್ತಡ ಬಿದ್ದಾಗ ಅವು ಬಿಗಿಯಾಗುತ್ತದೆ.
- ಮುಟ್ಟಿನ ಸಂದರ್ಭದಲ್ಲಿ ಋತುಸ್ರಾವಕ್ಕೆ ಮುನ್ನ ಮೂರು ದಿನಗಳಿಂದ ಹಿಡಿದು ಒಂದು ವಾರದ ತನಕವೂ ಸೊಂಟ ಹಾಗೂ ಕಿಬ್ಬೊಟ್ಟೆ ನೋವು ಬಹಳಷ್ಟು ಜನರಲ್ಲಿ ಕಾಡುತ್ತಿರುತ್ತದೆ.
- ಮಲಬದ್ಧತೆ, ಹೊಟ್ಟೆಯುಬ್ಬರ, ಅಜೀರ್ಣತೆ ಮುಂತಾದವೂ ಒಮ್ಮೊಮ್ಮೆ ಬೆನ್ನು ಹಾಗೂ ಸೊಂಟ ನೋವಿಗೆ ಕಾರಣ ವಾಗುತ್ತವೆ. ಉದಾ: ವೈದ್ಯರ ಸಂದರ್ಶನದ ಮೇರೆಗೆ ಮಾಂಸ-ಖಂಡಗಳು ವಿಕಸನಗೊಳ್ಳುವ ಔಷಧಿಗಳನ್ನು ಬಳಸಬಹುದು, ನೋವು ನಿವಾರಕ ತೈಲಗಳನ್ನು ಹಚ್ಚಿ ಬಿಸಿ ನೀರಿನ ಶಾಖ ನೀಡುವುದು.
- ಮುಟ್ಟಿನ ನೋವಿನಲ್ಲಿ-ಒಂದು ಲೋಟ ಬಿಸಿ ನೀರಿಗೆ ಸ್ವಲ್ಪ ಇಂಗು, ರುಚಿಗೆ ತಕ್ಕಷ್ಟು ಉಪ್ಪು ಹಾಗೂ ಒಂದು ಚಮಚ ತುಪ್ಪಬೆರೆಸಿ ದಿನಕ್ಕೆರಡು ಬಾರಿ ಆಹಾರಕ್ಕೆ ಮುಂಚೆ ಸೇವಿಸಿದರೆ ಸೊಂಟ ನೋವು ಹತೋಟಿಗೆ ಬರುತ್ತದೆ. ಬಿಸಿ ನೀರಿನ ಚೀಲದಿಂದ ಸೊಂಟ ಹಾಗೂ ಕಿಬ್ಬೊಟ್ಟೆಯ ಭಾಗಕ್ಕೆ ಶಾಖ ನೀಡುವುದರಿಂದಲೂ ಪರಿಹಾರ ಸಾಧ್ಯ, ಒಂದೆರಡು ದಿನಗಳಲ್ಲಿ ಸೊಂಟ ನೋವು ಹತೋಟಿಗೆ ಬರದಿದ್ದಲ್ಲಿ ಸೂಕ್ತ ಚಿಕಿತ್ಸೆ ಕೈಗೊಳ್ಳಬೇಕಾಗುತ್ತದೆ.

**ದೀರ್ಘಕಾಲೀನ ಸೊಂಟ ನೋವಿಗೆ ಕಾರಣಗಳು:**

ಇದರಲ್ಲಿ ಸೊಂಟ ನೋವು ಕೆಲವೊಮ್ಮೆ ತೀವ್ರವಾಗಿ, ಮತ್ತೊಮ್ಮೆ ಮೃದುವಾಗಿ ಪೀಡಿಸುತ್ತಿರುತ್ತದೆ. ಕೆಲವರಿಗೆ ಹಲವು ವರ್ಷಗಳಿಂದಲೂ ಸೊಂಟ ನೋವು ಬಾಧಿಸುತ್ತಿರುತ್ತದೆ. ದೀರ್ಘಕಾಲೀನ ಸೊಂಟ ನೋವಿಗೆ ಕಾರಣಗಳ ಪಟ್ಟಿಯೂ ದೀರ್ಘವಾಗಿಯೇ ಇದೆ.

**ಸೊಂಟದ ನೋವು ಯಾರನ್ನೂ ಬಿಟ್ಟಿಲ್ಲ. ಅದು ಏಕೆ ಮತ್ತು ಹೇಗೆ ಬರುತ್ತದೆ, ಪರಿಹಾರ ಏನು ಎನ್ನುವ ಕುರಿತು ಇಲ್ಲಿದೆ ಮಾಹಿತಿ.**

- ಪೆಟ್ಟು ಬಿದ್ದು ಸೊಂಟದ ಭಾಗದಲ್ಲಿ ಮೂಳೆ ಮುರಿಯುವುದು
- ಅಸ್ಥಿಧಾತುವಿನ ಕ್ಷಯರೋಗ
- ಗ್ರಂಥಿ ಅಥವಾ ಗಡ್ಡೆಗಳ ಉಗಮ
- ಅರ್ಬುದ (ಕ್ಯಾನ್ಸರ್)
- ಸೊಂಟದ ಭಾಗದಲ್ಲಿ ಮೂಳೆಯ ಜರಿತ (ಸ್ಲಿಪ್ ಡಿಸ್ಕ್)
- ಅಸ್ಥಿಯ ಹೆಚ್ಚು ಅಥವಾ ವಕ್ರ ಬೆಳವಣಿಗೆ
- ಅಸ್ಥಿಧಾತುವಿನ ಸವೆತ ಮುಂತಾದವು.

ಸೊಂಟದ ಜಾಗದಿಂದ ಹಿಡಿದು ಪಾದದ ತನಕ ಹಬ್ಬಿರುವ ಸಯಾಟಿಕ್ ನರದ ಮೇಲೆ ಒತ್ತಡ ಹೆಚ್ಚಾದಾಗ ಒಂದು ಅಥವಾ ಎರಡೂ ಭಾಗದಲ್ಲಿ ಸೊಂಟದಿಂದ ಹಿಡಿದು ಪೃಷ್ಠ ತೊಡೆ, ಕಾಲು ಹಾಗೂ ಪಾದದ ತನಕ ಸಂಪೂರ್ಣವಾಗಿ ಹಿಂಬದಿಯಲ್ಲಿ ಹರಡುವ ನೋವನ್ನು ಗೃಧ್ರಸಿ ಎಂದು ಕರೆಯಲಾಗುತ್ತದೆ. ಇದಕ್ಕೂ ಸೊಂಟದ ಮೂಳೆಯ ಮುರಿತ ಅಥವಾ ಜರಿತವೇ ಪ್ರಮುಖ ಕಾರಣ.



ಸಯಾಟಿಕ್ ನರ

ಕೆಲವೊಮ್ಮೆ ಶಸ್ತ್ರಚಿಕಿತ್ಸೆಯ ಅವಶ್ಯಕತೆ ಇದ್ದರೂ, ಆಯುರ್ವೇದದ ವಿಶೇಷ ಚಿಕಿತ್ಸಾ ವಿಧಾನಗಳಿಂದ ಸೊಂಟ ನೋವು ಹಾಗೂ ಗೃಧ್ರಸಿ ಸಮಸ್ಯೆಗಳನ್ನು ಸಂಪೂರ್ಣವಾಗಿ ನಿಯಂತ್ರಿಸಲು ಸಾಧ್ಯ. ಉದಾ: ಕಟಿಬಸ್ತಿ, ನೋವು ನಿವಾರಕ ತೈಲಗಳನ್ನು ಹಚ್ಚುವುದು, ಸ್ವೇದನ ಮುಂತಾದವು.

ಸೊಂಟ ನೋವು ಹಾಗೂ ಸಯಾಟಿಕ ಬಾಧೆಯಿಂದ ಬಳಲುತ್ತಿರುವವರು ಅನುಸರಿಸಬೇಕಾದ ಕೆಲವು ಸೂತ್ರಗಳು ಈ ಕೆಳಗಿನಂತಿವೆ:

**ಪಥ್ಯ**

- ಸಮತಲವಾದ ಸ್ಥಳದಲ್ಲಿ ಒಂದು ಬೆಡ್ ಶೀಟ್ ಹಾಕಿಕೊಂಡು ಮಲಗಬೇಕು ತಲೆದಿಂಬು ಬಳಸಬಹುದು.
- ನಡೆಯುವಾಗ ಸೊಂಟದ ಪಟ್ಟಿ ಬಳಸುವುದು ಸೂಕ್ತ.
- ಹಾಲು, ತುಪ್ಪ ಎಳ್ಳು, ಉದ್ದು ಹುರುಳಿ, ಪಡವಲಕಾಯಿ, ಹೀರೆಕಾಯಿ, ಬದನೆ, ಬೆಳ್ಳುಳ್ಳಿ, ಮಾವು ಮುಂತಾದ ಆಹಾರಗಳನ್ನು ಬಳಸಬಹುದು.
- ಬಿಸಿ ನೀರಿನ ಚೀಲದಿಂದ ನೋವಿರುವ ಜಾಗಕ್ಕೆ ಆಗಾಗ ಸ್ವಲ್ಪ ಬಿಸಿ ಮಾಡಿಕೊಳ್ಳುತ್ತಿರುವುದು ಸೂಕ್ತ.

**ಅಪಥ್ಯ**

- ತಣ್ಣನೆ ನೆಲದ ಮೇಲೆ ನಡೆಯುವುದು ಹಾಗೂ ಮಲಗುವುದು.
- ತಣ್ಣನೆಯ ನೀರು ಹಾಗೂ ಆಹಾರ ಸೇವನೆ.
- ಬಟಾಣಿ, ಆಲೂಗಡ್ಡೆ ಕಡಲೆ, ನೇರಳೆ, ಅಡಿಕೆ, ಹಾಗಲಕಾಯಿ, ಒಣಗಿದಮಾಂಸ, ತಂಗಳು ಆಹಾರ, ಚಹ, ಖಾರದ ಪದಾರ್ಥ ಮುಂತಾದವುಗಳ ಸೇವನೆ.
- ಕೋಪ, ಚಿಂತೆ, ಪರಿಶ್ರಮ, ಜಾಗರಣೆ, ಸಂಭೋಗ, ಮಲ-ಮೂತ್ರಗಳು ವೇಗಗಳನ್ನು ತಡೆಯವುದು ಮುಂತಾದವು.

## ಗೃಧ್ರಸೀ ರೋಗ ಚಿಕಿತ್ಸೆ

**ವಾತಜ ಗೃಧ್ರಸೀ**

**1. ಬಾಹ್ಯ ಚಿಕಿತ್ಸೆ-ಸ್ನೇಹನ:** ಮಹಾವಿಷಗರ್ಭತೈಲ, ಮಹಾಮಾಷತೈಲ ನಿರ್ಗುಂಡಿತೈಲ ಮತ್ತು ಕ್ಷೀರಬಲಾತೈಲ ಇವುಗಳ ಮಿಶ್ರಣದಿಂದ ಸ್ನೇಹನ ಹಾಗೂ ಸ್ವೇದನ ಅಥವಾ ಕಟಿಬಸ್ತಿ ಮಾಡುವುದರಿಂದ ಉತ್ತಮ ಪರಿಣಾಮ ಕಾಣುವುದು.

**ಸ್ವೇದನ:** ಮಾಷ ಸ್ವೇದ, ವಾಲುಕಸ್ವೇದ, ಪಿಂಡಸ್ವೇದ ಅಥವಾ ಉಷ್ಣಜಲ ಸ್ವೇದ.

**2. ಅಭ್ಯಂತರ ಚಿಕಿತ್ಸೆ**

• ಅಶ್ವಗಂಧ ರಸಾಯನ, • ಕ್ಷೀರಬಲಾ 101, • ತ್ರಯೋದಶಾಂಗ ಗುಗ್ಗುಲು, • ಮಹಾವಾತ ವಿಧ್ವಂಸನ ರಸ, • ಲಾಕ್ಷಾದಿಗುಗ್ಗುಲು, • ಬೃಹತ್ ವಾತ ಚಿಂತಾಮಣಿ ರಸ.

**ವಾತ ಕಫಜ ಗೃಧ್ರಸೀ**

**1. ಬಾಹ್ಯ ಚಿಕಿತ್ಸೆ :-**

**ಸ್ನೇಹನ :** ಮಹಾವಿಷಗರ್ಭತೈಲ, ಮಹಾನಾರಾಯಣತೈಲ

**ಸ್ವೇದನ:** ವಾಲುಕಸ್ವೇದ

**2. ಅಭ್ಯಂತರ ಚಿಕಿತ್ಸೆ:**

ಅಶ್ವಗಂಧಾದಿ ಚೂರ್ಣ, ಕ್ಷೀರಬಲಾ 101 ತೈಲ, ತ್ರಯೋದಶಾಂಗಗುಗ್ಗುಲು, ಮಹಾವಾತವಿಧ್ವಂಸನ ರಸ, ಯೋಗರಾಜಗುಗ್ಗುಲು.

ಪಂಚಕರ್ಮ ಹಾಗೂ ಅಗ್ನಿಕರ್ಮ ಚಿಕಿತ್ಸೆಗಳಿಂದಲು ಈ ಸಮಸ್ಯೆಯನ್ನು ಬಗೆಹರಿಸಬಹುದಾದರೂ ಅದು ವೈದ್ಯರ ಅನುಭವ ಹಾಗೂ ಯುಕ್ತಿಯ ಮೇಲೆ ಅವಲಂಬಿಸಿರುತ್ತದೆ.

ಲೇಖಕರು:
ವೈದ್ಯ ರಾಘವೇಂದ್ರ ಎನ್.
ಮೊ : 94481 82037

With Best Compliments From:
GEMINI FIBRE GLASS (P) LTD.
#190/1, Ram's Complex,
2nd Floor
Brigade Road
Bengaluru - 560001
Ph : 91-80-25587925 M: 9845057780
E-Mail : gemini_19582000@yahoo.co.in

With Best Compliments From:

# GEMINI FIBRE GLASS (P) LTD.

#190/1, Ram's Complex,
2nd Floor
Brigade Road
Bengaluru - 560001

Ph : 91-80-25587925 M: 9845057780

E-Mail : gemini_19582000@yahoo.co.in

*With best compliments from*

# SAI DHANVANTARI AYURVEDA BHANDAR

## (Wholesale Distributors of Ayurvedic Medicines)

TIN No.: 29490393223
Managing Partners
**C.V. RAMAIAH,** B.E., M.I.E.
**V.R. MADHURI,** M.B.A.

**SAI DHANVANTARI AYURVEDA BHANDAR**
No. 102, Celebrity Housing
8th Cross, Doddatogur, Electronic City
Bangalore - 560 100
Ph : 23560529,

Cell : 98451 62980

**VENKATESWARA AYURVEDA NILAYAM LTD.**
CHINTALURU - 533 232 E.G.DT CA.P)
ESTD 1925 : AN ISO 9001 : 2000 COMANY

# ಕಾಮಲಾ?! - ಹೆಪಟೈಟಿಸ್ - ಬಿ?!

ಕಣ್ಣು, ನಾಲಿಗೆ, ಉಗುರು, ಚರ್ಮ ಹಾಗೂ ಮೂತ್ರ ಹಳದಿ ಬಣ್ಣವನ್ನು ಹೊಂದಿದ್ದು ಸುಸ್ತು, ಸಂಕಟ ಇದ್ದರೆ ಇದು ಕಾಮಾಲೆ ಅಥವಾ ಜಾಂಡೀಸ್ ಕಾಯಿಲೆ ಎಂದು ಅನಕ್ಷರಸ್ಥರೂ ಹೇಳುವಷ್ಟು ಸಾಮಾನ್ಯ ಕಾಯಿಲೆ ಇದು. ಜನಸಾಮಾನ್ಯರಲ್ಲಿ ರೂಢಿಯಲ್ಲಿರುವ ಇದರ ಮತ್ತೆರಡು ಹೆಸರುಗಳೆಂದರೆ ಅರಿಶಿನ ಮಂಡಿಗೆ ಮತ್ತು ಹಳದಿ ರೋಗ.

ಈ ಖಾಯಿಲೆಗೆ ಪರಿಹಾರ ಕುರಿತಂತೆ ವಿದ್ಯಾವಂತರಿಂದ ಅವಿದ್ಯಾವಂತರವರೆಗೂ, ಬಡವರಿಂದ ಹಿಡಿದು ಸಿರಿವಂತರವರೆಗೂ ಯಾವ ತಾರತಮ್ಯವೂ ಇಲ್ಲದೆ ಥಟ್ಟನೆ ಹೊಳೆಯುವುದು ಆಯುರ್ವೇದ ಚಿಕಿತ್ಸೆ. ಅದೇ ಇದಕ್ಕೆ ಸೂಕ್ತ ಚಿಕಿತ್ಸೆ ಎಂಬುದು ಸಮಾಜದ ಎಲ್ಲ ವರ್ಗಗಳ ಜನರಲ್ಲೂ ಬಲವಾಗಿ ಬೇರೂರಿದೆ. ಎಷ್ಟೋ ಸಲ ಬೇರೆ ವೈದ್ಯ ಪದ್ಧತಿಯ ವೈದ್ಯರು ತಮಗೂ ತಮ್ಮ ಬಂಧು-ಬಳಗದವರಿಗೆ ಈ ಖಾಯಿಲೆ ಬಂದಾಗ ಕೂಡಲೇ ಆಯುರ್ವೇದ ಚಿಕಿತ್ಸೆಯೆಂದು ನಮ್ಮಲ್ಲಿ ಕರೆದು ಕೊಂಡು ಬಂದಿರುವ ಉದಾಹರಣೆಗಳು ಅನೇಕ. ಅಲ್ಲದೆ ಇತರೆ ವೈದ್ಯ ಪದ್ಧತಿಯ ವೈದ್ಯರು ಈ ಖಾಯಿಲೆಗೆ ನಮ್ಮಲ್ಲಿ ಸೂಕ್ತ ಚಿಕಿತ್ಸೆ ಇಲ್ಲ. ಆಯುರ್ವೇದ ವೈದ್ಯರಲ್ಲಿಗೆ ಹೋಗಿ ಎಂದು ಶಿಫಾರಸ್ಸು ಮಾಡಿರುವುದು ನಮ್ಮ ಸಾಮಾನ್ಯ ಅನುಭವ. ಕಾಮಾಲೆ ಖಾಯಿಲೆಗೆ ಇಷ್ಟೊಂದು ಪರಿಣಾಮಕಾರಿಯಾದ ಚಿಕಿತ್ಸೆ ಹೊಂದಿರುವ ಆಯುರ್ವೇದ ವೈದ್ಯ ಶಾಸ್ತ್ರದಲ್ಲಿ ಈ ಖಾಯಿಲೆ ಕುರಿತಂತೆ ಆಯುರ್ವೇದದಲ್ಲಿ ಏನು ಹೇಳಿದೆ ಎಂಬುದು ಜನಸಾಮಾನ್ಯರಲ್ಲಿ ಕಂಡು ಬರುವ ಕುತೂಹಲದ ಸಂಗತಿ. ಅದಕ್ಕೆ ಉತ್ತರ ಇಲ್ಲಿದೆ ಓದಿ.

ಸಂಸ್ಕೃತದ 'ಕಾಮಲಾ' ಪದವೇ ಕನ್ನಡದ ಕಾಮಾಲಿ ಅಥವಾ ಕಾಮಾಲೆ ಆಗಿದೆ. 'ಕಾಮಲಾ' ಪದಕ್ಕೆ ಎರಡು ಅರ್ಥಗಳಿವೆ. ಮೊದಲನೆಯದು 'ಕಾಮ' ಎಂದರೆ ಆಸೆ ಅಥವಾ ಇಚ್ಛೆ. 'ಲಾ'ಎಂದರೆ ಲುಪ್ತವಾಗುವುದು ಅಥವಾ ನಷ್ಟವಾಗುವುದು. ಇದರ ಒಟ್ಟಾರೆ ಅರ್ಥ ಈ ಖಾಯಿಲೆಯಲ್ಲಿ ಮುಖ್ಯವಾಗಿ ಹಸಿವಿನ ಹಂಬಲವು ನಷ್ಟವಾಗುವುದರಿಂದ 'ಕಾಮಲಾ' ಎಂಬ ಹೆಸರು ಬಂದಿದೆ. ಎರಡನೆಯ ಅರ್ಥವೆಂದರೆ ಈ ವ್ಯಾಧಿಯಲ್ಲಿ ಶರೀರದ ಸಹಜ ಬಣ್ಣವು ಹಳದಿಗೆ ಬದಲಾಗುವುದರಿಂದ ಇದಕ್ಕೆ ಕಾಮಲಾ ಎಂದು ಕರೆದಿದ್ದಾರೆ. ಈ ಎರಡೂ ಅರ್ಥಗಳು ಕಾಮಾಲೆ ಖಾಯಿಲೆಯ ಎರಡು ಮುಖ್ಯ ಲಕ್ಷಣಗಳೇ ಆಗಿದೆ.

**ವರ್ಗೀಕರಣ:** ಆಯುರ್ವೇದ ವೈದ್ಯ ಶಾಸ್ತ್ರದಲ್ಲಿ ಉತ್ಪತ್ತಿಗನುಗುಣವಾಗಿ ಇದನ್ನು ವೃದ್ಧಪಥ ಕಾಮಲಾ ಮತ್ತು ಕೋಷ್ಠಾಖಾಶ್ರಿತಕಾಮಲಾ ಎಂದು ವರ್ಗೀಕರಿಸಲಾಗಿದೆ. ಈ ಎರಡು ವಿಧಗಳಿಗೂ ಬೇರೆ ಬೇರೆ ಕಾರಣ, ಲಕ್ಷಣ, ಹಂತಗಳು ಮತ್ತು ಚಿಕಿತ್ಸೆಗಳು ಇವೆ.

**ರುದ್ಧಪಥ ಕಾಮಲಾ: (Obstructive Jaundice):** ಇದರಲ್ಲಿ ಮಲವು ಎಳ್ಳಿನ ಹಿಟ್ಟಿನ ವರ್ಣ ಅರ್ಥಾತ್ ಬಿಳಿಯ ಬಣ್ಣದ್ದಾಗಿದ್ದು ಪಿತ್ತವಾಹಿನಿಯಲ್ಲಿನ ಅವರೋಧದಿಂದ ಉಂಟಾಗುತ್ತದೆ.

**ಕಾರಣಗಳು:** ಶೀತ, ಜೀರ್ಣಕ್ಕೆ ಭಾರ, ಒಣ ಹಾಗೂ ಮಧುರ ರಸ ಪದಾರ್ಥಗಳ ಅತಿ ಸೇವನೆ, ಹೆಚ್ಚಾಗಿ ವ್ಯಾಯಾಮ ಮಾಡುವುದು, ಮಲ, ಮೂತ್ರ ಮುಂತಾದ ಅಪಾನವಾಯುಗಳನ್ನು ತಡೆ ಹಿಡಿಯುವುದು ಈ ಕಾರಣಗಳಿಂದ ಕಫ ಮತ್ತು ವಾತ ದೋಷಗಳು ವೃದ್ಧಿಯಾಗಿ ಪಿತ್ತವಾಹಿನಿಯಲ್ಲಿ ಸಂಚಿತವಾಗಿ ಪಿತ್ತರಸಸ್ರಾವದ ಮಾರ್ಗವನ್ನು ಅವರೋಧಿಸಿ ಕಾಮಾಲೆಯನ್ನುಂಟು ಮಾಡುತ್ತದೆ.

**ಲಕ್ಷಣಗಳು:** ಇದರಲ್ಲಿ ಮಲಬದ್ಧತೆ, ಹೊಟ್ಟೆಯಲ್ಲಿ ಗುಡುಗುಡು ಶಬ್ದವಾಗುವುದು, ಹಸಿವಿಲ್ಲದಿರುವುದು, ಇಡೀ ಶರೀರದಲ್ಲಿ ಹಾಗೂ ಎದೆಯಲ್ಲಿ ವಿಶೇಷ ಭಾರ ಎನಿಸುವುದು, ಮಲವು ಬಿಳುಪಾಗಿರುವಂತೆ (ಎಳ್ಳಿನ ಹಿಟ್ಟಿನಂತೆ) ವರ್ಣ ಹೊಂದಿರುವುದು, ಕಣ್ಣು, ಮೈ, ಚರ್ಮ, ಮೂತ್ರ ಹಳದಿಯಾಗಿರುವುದು. ರೋಗಿಗೆ ಜ್ವರ, ಯಕೃತ್ತಿನ ಭಾಗದಲ್ಲಿ ಊತ ಇರುವುದು ಮತ್ತು ವಾಂತಿ, ಬಿಕ್ಕಳಿಕೆ ಅಲ್ಪ ಜಠರಾಗ್ನಿ, ಮಲಬದ್ಧತೆ ಮೊದಲ ಸ್ವಲ್ಪ ದಿವಸಗಳು ಕಾಣಿಸಿಕೊಂಡು ನಂತರ ಇಲ್ಲವಾಗುವುದು ರುದ್ಧಪಥ ಕಾಮಲದ ಮೊದಲನೆ ಹಂತದ ಲಕ್ಷಣಗಳಾಗಿದೆ.

ಎರಡನೇ ಹಂತದಲ್ಲಿ ತಡೆಯು ಕ್ರಮೇಣ ನಿವಾರಣೆಯಾಗಿ ಮಲವು ಹಳದಿ ಬಣ್ಣಕ್ಕೆ ತಿರುಗುತ್ತದೆ. ಹಸಿವು ಉಂಟಾಗುತ್ತದೆ. ಜ್ವರ ಇರುವುದಿಲ್ಲ, ಶರೀರವು ಹಗುರವಾಗಿರುತ್ತದೆ.

**ಚಿಕಿತ್ಸೆ:** ಮೊದಲು ಅವರೋಧಿತ ಕಫವನ್ನು ತೆಗೆಯಲು ರೋಗಿಯು ಹಗುರವಾದ ಖಾರ, ಉಪ್ಪು ಹಾಗೂ ದ್ರವ ಪದಾರ್ಥಗಳುಳ್ಳ ಆಹಾರಗಳನ್ನು ಸೇವಿಸಬೇಕು. ಉದಾಹರಣೆಗೆ ನಿಂಬೆರಸ, ಹುಣಸೆ ಸಾರು, ಟೊಮೆಟೊ ಸಾರು, ದಾಳಿಂಬೆ ರಸ, ಹುರುಳಿ ಕಟ್ಟಿನ ಸಾರು, ಗಂಜಿ, ಶುಂಠಿ, ಮೆಣಸು, ಜೀರಿಗೆ, ಹಿಪ್ಪಲಿ ಇತ್ಯಾದಿ. ರೋಗಿಯು ಈ ಹಂತದಲ್ಲಿ ಸಿಹಿ ಹಾಗೂ ಜೀರ್ಣಕ್ಕೆ ಭಾರವಾದ ಪದಾರ್ಥಗಳು, ತುಪ್ಪ, ಎಣ್ಣೆಯಲ್ಲಿ ಕರಿದ ಪದಾರ್ಥಗಳನ್ನು ವರ್ಜಿಸಬೇಕು. ಪಿತ್ತದ ಸ್ರಾವದ ತಡೆಯನ್ನು ನಿವಾರಿಸಲು ಈ ಕೆಳಗಿನ ಚಿಕಿತ್ಸೆಯಲ್ಲಿ ಯಾವುದಾದರೂ ಒಂದನ್ನು ಅನುಸರಿಸಬಹುದು.

- ಶುಂಠಿ, ಮೆಣಸು, ಹಿಪ್ಪಲಿಯ ಸಮ ಪ್ರಮಾಣದ ಚೂರ್ಣವನ್ನು ನಿಂಬೆಹಣ್ಣಿನ ರಸ ಅಥವಾ ನೀರು ಮಜ್ಜಿಗೆಯಲ್ಲಿ ಬೆರೆಸಿ ಸೇವಿಸಬೇಕು.
- ಶರಪುಂಖದ ಒಂದು ಚಮಚ ಚೂರ್ಣವನ್ನು ಎರಡು ಚಮಚ ಹರಳು ಗಿಡದ ಎಲೆಯ ರಸದಲ್ಲಿ ಬೆರೆಸಿ ತೆಗೆದುಕೊಳ್ಳಬೇಕು.

- ಉತ್ತರಾಣಿ ಗಿಡದ ಕ್ಷಾರವನ್ನು (ಅಪಾಮಾರ್ಗ ಕ್ಷಾರ) ಹುರುಳಿಸಾರು ಅಥವಾ ಮೂಲಂಗಿ ಸಾರಿನೊಡನೆ ಬೆರೆಸಿ ಸೇವಿಸಬೇಕು.

**ಪಿತ್ತವಾಹಿನಿಯ ತಡೆಯು ನಿವಾರಣೆಯಾದ ನಂತರ ಈ ಕೆಳಗಿನ ಚಿಕಿತ್ಸೆ ಮಾಡಬೇಕು.**

- ಕಬ್ಬನ್ನು ಕಚ್ಚಿ ಕಚ್ಚಿ ಅದರ ರಸವನ್ನು ಹೀರುವುದು.
- ಒಂದು ಚಮಚ ವಿದಾರಿಗಂಧ, ಬೆಟ್ಟದ ನೆಲ್ಲಿಕಾಯಿ ಹಾಗೂ ನೆಲನೆಲ್ಲಿ (ಭೂ ನೆಲ್ಲಿ) ಸಮಪ್ರಮಾಣದ ಚೂರ್ಣವನ್ನು ಸೇವಿಸಬೇಕು.
- ಅಮೃತ ಬಳ್ಳಿ, ಬೆಟ್ಟದ ನೆಲ್ಲಿಕಾಯಿ ಹಾಗೂ ನೆಲನೆಲ್ಲಿಯ ಚೂರ್ಣವನ್ನು ದಾಳಿಂಬೆ ಹಣ್ಣಿನ ರಸದಲ್ಲಿ ಸೇವಿಸಬೇಕು.

**ಕೋಷ್ಠ ಶಾಖಾಶ್ರಿತ ಕಾಮಲಾ: <u>(Non Obstructive Jaundice):</u>** ಇದರಲ್ಲಿ ಮಲವು ಮಾತ್ರವಲ್ಲದೆ ಇಡೀ ಶರೀರವು ಹಳದಿ ಬಣ್ಣದ್ದಾಗಿರುತ್ತದೆ. ಪಿತ್ತದ ಅಂಶವು ಹೊಟ್ಟೆಯನ್ನು ಸೇರಿದಂತೆ ಶರೀರದ ಎಲ್ಲ ಭಾಗಗಳನ್ನೂ ಆವರಿಸಿರುತ್ತದೆ.

**ಕಾರಣಗಳು:** ಖಾರ, ಹುಳಿ, ಲವಣ, ಮಸಾಲೆಗಳು ಹಾಗೂ ಉಷ್ಣ, ತೀಕ್ಷ್ಣ ಪದಾರ್ಥಗಳ ಅತಿ ಸೇವನೆ, ಅತಿ ವ್ಯಾಯಾಮ ಮಾಡುವುದು, ಬಿಸಿಲಿನಲ್ಲಿ ಹೆಚ್ಚಾಗಿ ತಿರುಗಾಡುವುದು ಈ ಕಾರಣಗಳಿಂದ ಪಿತ್ತವು ಅಧಿಕವಾಗಿ ರಕ್ತ ಮತ್ತು ಮಾಂಸಗಳಲ್ಲಿ ಶೇಖರವಾಗುತ್ತದೆ.

ಮೊದಲು ಇದರಲ್ಲಿ ಜ್ವರ, ಮೈಉರಿ, ಸುಸ್ತು, ಅಜೀರ್ಣ, ತಳಮಳ ಕಂಡು ಬಂದು ನಂತರ ಕಣ್ಣು, ಉಗುರು, ಚರ್ಮ, ಮಲ ಮತ್ತು ಮೂತ್ರ ಹಳದಿ ವರ್ಣಕ್ಕೆ ತಿರುಗುತ್ತದೆ. ಹಸಿವು ಹಿಂಗಿ ಹೋಗುತ್ತದೆ. ರೋಗಿಯು ವಿವರ್ಣನಾಗುತ್ತಾನೆ. ಸುಸ್ತು ಇರುತ್ತದೆ. ಯಕೃತ್ತು ಹಾಗೂ ಪ್ಲೀಹ ಪ್ರಮಾಣದಲ್ಲಿ ದೊಡ್ಡದಾಗಿ ಆ ಪ್ರದೇಶದಲ್ಲಿ ನೋವು ಕಾಣಿಸುತ್ತದೆ.

**ಉಪದ್ರವಗಳು:** ಇದರಿಂದ ಒಮ್ಮೊಮ್ಮೆ ಮೈ ಕೈ ಊತ, ಹೊಟ್ಟೆಯಲ್ಲಿ ನೀರು ತುಂಬುವುದು, ಯಕೃತ್ತು ಹಾಗೂ ಪ್ಲೀಹದಲ್ಲಿ ಊತ, ಜ್ವರ, ಉಸಿರಾಡಲು ಕಷ್ಟವಾಗುವುದು, ಜ್ಞಾನವು ತಪ್ಪುವುದು ಉಂಟಾಗುತ್ತದೆ. ಕಾಮಾಲೆಯು ತೀವ್ರವಾಗಿ ಶರೀರವೆಲ್ಲ ಊತವಿದ್ದು ಕೀಲುಗಳಲ್ಲಿ ನೋವಿರುವ 'ಕುಂಭಕಾಮಲ'ವು ಉಂಟಾಗಬಹುದು ಮತ್ತು ತೀವ್ರತರನಾದ ಕಾಮಲೆಯೊಡನೆ ಮೈ ಬಣ್ಣ ಹಸಿರು ಬಣ್ಣಕ್ಕೆ ತಿರುಗಿ ತೂಕಡಿಕೆ, ಸುಸ್ತು ಇರುವ 'ಹಲೀಮಕ'ವಾಗ ಬಹುದು. ಇದರ ಮುಂದಿನ ಹಂತ "ಪಾನಾಕೀ" ಎಂಬ ಕಾಮಲಾ.

**ಚಿಕಿತ್ಸೆ:** ಶಮನ ಚಿಕಿತ್ಸೆಗೆ ಮೊದಲು ಕಹಿ ರಸವನ್ನು ಪದಾರ್ಥಗಳಿಂದ ಸಂಸ್ಕಾರ ಹೊಂದಿದ ತುಪ್ಪದ ಸೇವನೆಯನ್ನು ಸ್ನೇಹನಕ್ಕಾಗಿ ಮಾಡಿ ನಂತರ ಭೇದಿಗೆ ನೀಡುವುದರ ಮೂಲಕ ದೇಹಶುದ್ಧಿಯನ್ನು ಮಾಡುವುದು ಉಚಿತವೆಂದು ಆರ್ಯುವೇದವು ತಿಳಿಸುತ್ತದೆ.

ಶಮನಾರ್ಥವಾಗಿ ರುದ್ಧಪಥ ಕಾಮಲಾದ ಎರಡನೇ ಹಂತದಲ್ಲಿರುವ ಚಿಕಿತ್ಸೆಯನ್ನು ಅನುಸರಿಸಬಹುದು.

ಆಯುರ್ವೇದವು ಕಾಮಾಲೆ ರೋಗಿಗಳಿಗೆ ತುಪ್ಪ, ಹಾಲು, ಅನ್ನ ಹಾಗೂ ಉಪ್ಪಿಲ್ಲದ ಆಹಾರವನ್ನು ಪಥ್ಯವಾಗಿ ತಿಳಿಸುತ್ತದೆ.

**ಆರ್ಯುವೇದದ ಕೆಲವು ಪ್ರಭಾವ ಶಾಲಿ ಸಿದ್ಧೌಷಧಗಳ ವಿವರ ಹೀಗಿದೆ:**

**ಆಸವ/ಕ್ವಾಥಗಳು/ಅರಿಷ್ಟಗಳು**

1. ಕುಮಾರ್ಯಾಸವ 2. ರೋಹೀತಕಾರಿಷ್ಟ 3. ಪಟೋಲ ಕಟುಕ ರೋಹಿಣ್ಯಾದಿಕ್ವಾಥ. 4. ಕಾಲಮೇಘಾಸವ 5. ದ್ರಾಕ್ಷಾರಿಷ್ಟ 6. ಪುನರ್ನವಾರಿಷ್ಟ – ಇತ್ಯಾದಿ.

**ಚೂರ್ಣಗಳು**

1. ಭೂವಾಮ್ಯಾವುಲಕಿ ಚೂರ್ಣ 2. ಆಮಲಿಕಿ ಚೂರ್ಣ 3. ತ್ರಿಫಾಲಾ ಚೂರ್ಣ 4. ತ್ರಿಕಟು ಚೂರ್ಣ ಇತ್ಯಾದಿ.

**ರಸೌಷಧಗಳು**

1. ಆರೋಗ್ಯ ವರ್ಧಿನಿ, 2. ಪುನರ್ನವ ಮಂಡೂರ 3. ಲೋಹ ಭಸ್ಮ 4. ತಾಮ್ರ ಭಸ್ಮ 5. ಅಭ್ರಕ ಭಸ್ಮ 6. ನವಾಯಸ ಲೋಹ 7. ಯಕೃತ್–ಪ್ಲೀಹಾರಿ ರಸ 8. ಮಹಾಲಕ್ಷ್ಮೀವಿಲಾಸ ರಸ–ಸುವರ್ಣ 9. ಕುಮಾರ ಕಲ್ಯಾಣ ರಸ 10. ಚತುರ್ಮುಖ ರಸ 11. ಬೃಹತ್ ಕಸ್ತೂರಿ ಭೈರವ.

ಹೀಗೆ ಇನ್ನೂ ಅನೇಕಾನೇಕ ರಸೌಷಧಗಳು, ವನೌಷಧಗಳು ಲಭ್ಯವಿದೆ. ವೈದ್ಯರು ಸೂಕ್ತ ವಿವೇಚನೆಯೊಂದಿಗೆ ಇವುಗಳನ್ನು ಉಪಯೋಗಿಸಿ ಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಬಹುದು.

**ಪರಂಪರೆಯಿಂದ ಔಷಧಿ ನೀಡುವವರ ಕುರಿತಂತೆ:** ಸಾಮಾನ್ಯವಾಗಿ ಕಾಮಾಲೆ ಖಾಯಿಲೆಗೆ ಪರಂಪರೆಯಿಂದ ಔಷಧಿ ನೀಡುವವರಿಗೆ ಖಾಯಿಲೆ ಕುರಿತಂತೆ ವಿವರಗಳ ಅರಿವು ಅಷ್ಟಾಗಿ ಇರುವುದಿಲ್ಲ. ವಂಶ ಪಾರಂಪರ್ಯದಿಂದ ಒಂದೋ ಅಥವಾ ಎರಡೋ ಔಷಧಿಗಳನ್ನು ಇವರು ನೀಡುತ್ತಾರೆ. ಇಂಥವರು ನೀಡುವ ಔಷಧಿಗಳು ಸಾಮಾನ್ಯವಾಗಿ ಇವುಗಳಲ್ಲಿ ಯಾವುದಾದರೂ ಒಂದು ಆಗಿರುತ್ತದೆ.

- ಹರಳೆಣ್ಣೆ, ಕಟುಕಿಯ ಬೇರು, ಮೊಸರಿನೊಡನೆ ಸುಣ್ಣ, ಕಟುಕಿಯ ಬೇರನ್ನು ಹಾರದಂತೆ ಮಾಡಿ ಕೊರಳಿಗೆ ಹಾಕುವುದು ನೆಲನೆಲ್ಲಿ ಗಿಡದ ರಸ ಸಾಮಾನ್ಯವಾಗಿ ಇದನ್ನು ಹಾಲಿನೊಡನೆ ನೀಡುತ್ತಾರೆ. ಅಮೃತ ಬಳ್ಳಿಯ ರಸ. ಇವುಗಳನ್ನು ಉಪಯೋಗಿಸುತ್ತಾರೆ.

ಇಂಥವರು ಔಷಧಿಯನ್ನು ರಹಸ್ಯವಾಗಿ ಇಟ್ಟಿರುತ್ತಾರೆ. ಇವರಿಗೆ ಖಾಯಿಲೆಯ ಕಾರಣ, ದೋಷ, ಸಂಪ್ರಾಪ್ತಿ, ಅಗ್ನಿ, ಮಾರ್ಗ, ಸಾಧ್ಯ ಸಾಧ್ಯತೆ ಮುಂತಾದವುಗಳ ಬಗ್ಗೆ ಯಾವುದೇ ತಿಳುವಳಿಕೆ ಇರುವುದಿಲ್ಲ. ಹೆಚ್ಚಿನಂಶದ ಕಾಮಾಲೆ ರೋಗವು ಶರೀರದ ರಕ್ಷಣಾ ವ್ಯವಸ್ಥೆಯ ಪ್ರಭಾವ ಹಾಗೂ ರೋಗದ ಗಡುವು ತಂತಾನೆ

ಮುಗಿಯುವುದರಿಂದ ಪರಿಹಾರವಾಗುತ್ತದೆ. ಆದರೆ ವಾಸಿ ಮಾಡಿದ ಕೀರ್ತಿ ಔಷಧಿ ಮಾಡಿದ ವ್ಯಕ್ತಿಗೆ ಸಲ್ಲುತ್ತದೆ.

ಇತ್ತೀಚೆಗೆ ಜಾಹಿರಾತು ಮಾಧ್ಯಮಗಳಲ್ಲಿ "ಹೆಪಟೈಟಿಸ್-ಬಿ"- ಒಂದು ಘನ ಘೋರ ರೋಗ, ಮಹಾಮಾರಿ-ಚಿಕಿತ್ಸೆಯೇ ಇಲ್ಲ. ಇದಕ್ಕೆ. . . . . . .ಇಂತಹ ವ್ಯಾಕ್ಸೀನ್ ಕಡ್ಡಾಯವಾಗಿ ಹಾಕಿಸಿ ಎಂದು ಪ್ರಚಾರ ನಡೆಯುತ್ತಿದೆ. ಇದರ ಬಗ್ಗೆ ಅನೇಕ ವ್ಯಾಕ್ಸಿನೇಷನ್ ನೀಡುವ ಕ್ಯಾಂಪ್‌ಗಳು ಸಹ ನಡೆಯುತ್ತಿವೆ. ಈ ಹೆಪಟೈಟಿಸ್ - ಎ, ಬಿ, ಸಿ, ಇ, ಕೆ- ಎಂದು ಹಲವಾರು ರೂಪದಲ್ಲಿವೆ. ಅದರಲ್ಲಿ ಹೆಪಟೈಟಿಸ್-ಎ ಗೆ ಭಯಪಡಬೇಕಾದುದಿಲ್ಲ. ಉಳಿದವು ಭಯಂಕರ ಸ್ವರೂಪಿಗಳು. ಇದಿಷ್ಟು ಅದರ ಮಾಹಿತಿ. ಈ ಹೆಪಟೈಟಿಸ್‌ನಲ್ಲಿ ಮತ್ತಷ್ಟು ಸಂಶೋಧನೆಗಳಾಗಿ - M, N, O . . . . . X, Y, Z ಎಂದು ಹೊಸ ಹೊಸ ತಳಿಗಳ ರೂಪಗಳು ಮುಂದೆ ಕಂಡು ಬಂದರೆ ಏನೂ ಆಶ್ಚರ್ಯವಿಲ್ಲ.

ಆಯುರ್ವೇದದ ವೃತ್ತಿಗೆ ಹೊಸದಾಗಿ ಅಡಿ ಇಟ್ಟವರಿಗೆ ಹಾಗೂ ಆಯುರ್ವೇದದ ವಿದ್ಯಾರ್ಥಿಗಳಿಗೆ ಈ ಸಂಶೋಧನೆಗಳೂ, ಜಾಹಿರಾತುಗಳು- ಗಲಿಬಿಲಿ-ಉಂಟು ಮಾಡುತ್ತವೆ. ಈ ಹೆಪಟೈಟಿಸ್-ಬಿ, ಸಿ,-ಇತ್ಯಾದಿಗಳಾಗಲೀ-ಅಥವಾ ಇನ್ನು ಮುಂದೆ ಸಂಶೋಧಿಸಲಾಗುವ. . . . . X, Y, Z ಹೆಪಟೈಟಿಸ್‌ಗಳಾಗಲೀ, ಯಾವುದೇ ರೂಪದಲ್ಲಿ, ಏನೇ ಅವತಾರಗಳಲ್ಲಿ ಬರಲಿ ಅದಕ್ಕೆ ಆಯುರ್ವೇದ ವೈದ್ಯ ವಿಚಲಿತನಾಗುವ ಅಗತ್ಯವಿಲ್ಲ. ಏಕೆಂದರೆ- ಇವೆಲ್ಲವೂ ಸಹ ನಮ್ಮ ಗ್ರಂಥಗಳಲ್ಲಿ ಹೇಳಿರುವ-ಕಾಮಲಾ; ಕುಂಭ ಕಾಮಲಾ; ಹಲೀಮಕ; ಪಾನಾಕಿ ಇವುಗಳ ವ್ಯಾಪ್ತಿಗೇ ಬರುತ್ತದೆ ಹಾಗೂ ಚಿಕಿತ್ಸೆಯು ಅದೇ ಆಗಿರುತ್ತದೆ. ಅಂತೆಯೇ ಗ್ರಂಥಗಳಲ್ಲಿ ಹೇಳಿರುವ ಪ್ರಕಾರ ಸಾಧ್ಯ/ಅಸಾಧ್ಯ ಲಕ್ಷಣಗಳನ್ನು ಅನುಸರಿಸಿ ಚಿಕಿತ್ಸೆ ನಡೆಸುವುದು ಆಯುರ್ವೇದ ವೈದ್ಯದ ಕರ್ತವ್ಯ.

ಲೇಖಕರು:
ವೈದ್ಯ॥ ಎ. ಪದ್ಮನಾಭ ರಾವ್,
ದೂರವಾಣಿ - 26601586.

## ಅಗ್ನಿವೇಶ ಆಯುರ್ವೇದ ಅನುಷ್ಠಾನ

ಆಯುರ್ವೇದ - ಎಲ್ಲೆಲ್ಲೂ ಮೊಳಗಲಿ ಇದರ ನಿನಾದ.
ಕಟ್ಟಬಹುದು ಇದರಿಂದ ಆರೋಗ್ಯದ ಸೌಧ.

ಇದೊಂದು ಸನಾತನ ಚಿಕಿತ್ಸಾ ಪದ್ಧತಿ,
ಇದರಲ್ಲಿಲ್ಲ ಯಾವುದೇ ತೊಂದರೆಗಳ ಭೀತಿ.
ಇರಿಸಬೇಕು ಇದರಲ್ಲಿ ನಂಬಿಕೆ; ಪ್ರೀತಿ

ಆಯುರ್ವೇದ ವೈದ್ಯರೆಲ್ಲ ಒಂದಾಗಿ
ಆಯುರ್ವೇದದ ಕಹಳೆ ಮೊಳಗಿಸಲು ಸನ್ನದ್ಧರಾಗಿ
ಜನರಲ್ಲಿ ಅರಿವು ಮೂಡಿಸಲು ಮುಂದಾಗಿ

ಇದಕ್ಕೆ ಸೃಷ್ಟಿಯಾಗಿದೆ ಈ ವೇದಿಕೆ - ಅಗ್ನಿವೇಶ,
ಇದು ಆಯುರ್ವೇದ ವೈದ್ಯರ ಸಮಾವೇಶ.
ಎಲ್ಲರಿಗೂ ಇಲ್ಲಿದೆ ಮುಕ್ತ ಪ್ರವೇಶ,
ಜ್ಞಾನ ಭಂಡಾರವ ಹೆಚ್ಚಿಸಲು ಇದೊಂದು ಸದವಕಾಶ.

------------- ಲಾವಣ್ಯ ಶಯನ್.

# ರಸ ಪ್ರಶ್ನೆ

1. ಗ್ರಥಿತ – ಈ ಪದದ ಅರ್ಥ
   - ಅ) ಗಂಟಲಿನಲ್ಲಿರುವ.
   - ಇ) ಗ್ರಂಥದಲ್ಲಿ ಹೇಳಿರುವ.
   - ಆ) ಗ್ರಹಣಿ.
   - ಈ) ಗಟ್ಟಿಯಾದ ಮಲ.

2. ನಿಜ ವ್ರಣ ಎಂದರೆ –
   - ಅ) ಕಣ್ಣಿಗೆ ಕಾಣುವಂತಹ ಗಾಯ.
   - ಆ) ಚುಚ್ಚಿದ ಗಾಯ.
   - ಇ) ಸುಲಭವಾಗಿ ವಾಸಿಯಾಗುವ ಗಾಯ.
   - ಈ) ದೋಷ ದೂಷ್ಯಗಳಿಂದಾದ ಗಾಯ.

3. ಜಲೋದರದಲ್ಲಿ ಈ ಕ್ರಿಯೆಯನ್ನು ನಡೆಸಬೇಕು. –
   - ಅ) ಪಾಟನ
   - ಆ) ವ್ಯಧನ
   - ಇ) ಭೇದನ
   - ಈ) ಲೇಖನ

4. ದ್ವಿರುತ್ತರ ಹಿಂಗ್ವಾದಿ ಚೂರ್ಣದಲ್ಲಿನ ಘಟಕಗಳು ಈ ಪ್ರಮಾಣದಲ್ಲಿರುತ್ತವೆ–
   - ಅ) 1:2:3:4:__________
   - ಆ) 1:2:4:8__________
   - ಇ) 1:1:1:1__________
   - ಈ) 1:3:6:9__________

5. ಅಸ್ಥಿ ಸಂಧಾನೀಯ ಗುಣವಿರುವ ಯೋಗ –
   - ಅ) ತ್ರಿಫಲ ಗುಗ್ಗುಳು
   - ಆ) ಲಾಕ್ಷಾದಿ ಗುಗ್ಗುಳು
   - ಇ) ಕಾಂಚನಾರ ಗುಗ್ಗುಳು
   - ಈ) ಅಮೃತಾದಿ ಗುಗ್ಗುಳು

6. ಉಂದುರು ತೈಲ– ಇದರ ಉಪಯೋಗ
   - ಅ) ಸಂಧಿ ವಾತ
   - ಆ) ಶಿರಃಶೂಲ
   - ಇ) ಗುಧಭ್ರಂಶ
   - ಈ) ಕರ್ಣಶೂಲ

7. ಕ್ಷಣೇ ದಾಹ ಕ್ಷಣೇ ಶೀತ ಅಸ್ಥಿ ಸಂಧಿ ಶಿರೋರುಜಃ– ಈ ಲಕ್ಷಣ ಕಂಡು ಬರುವುದು –
   - ಅ) ಹೃದ್ರೋಗ
   - ಆ) ಸನ್ನಿಪಾತ ಜ್ವರ
   - ಇ) ಪಾಂಡು
   - ಈ) ಹಲೀಮಕ

8. ಅಭ್ರಕ ಭಸ್ಮ ಈ ಯೋಗದಲ್ಲಿ ಇಲ್ಲ –
   - ಅ) ಸುವರ್ಣ ಮಾಲಿನಿ ವಸಂತ
   - ಆ) ವಸಂತ ಕುಸುಮಾಕರ
   - ಇ) ಬೃಹತ್ ವಾತ ಚಿಂತಾಮಣಿ
   - ಈ) ಚತುರ್ಮುಖ ರಸ

9. ವಾಸಾ –
   - ಅ) ಒಂದು ಬಳ್ಳಿ
   - ಆ) ಸಾಧಾರಣ ಗಿಡ
   - ಇ) ಗಡ್ಡೆ
   - ಈ) ದೊಡ್ಡ ಮರ

10. ಶ್ವಾಸ ರೋಗ ಉದ್ಭವ ಸ್ಥಾನ
    - ಅ) ಪಿತ್ತಾಶಯ
    - ಆ) ಕಂಠ
    - ಇ) ಪ್ರಾಣವಹಾ ಸ್ರೋತಸ್
    - ಈ) ಹೃದಯ

*ಉತ್ತರಗಳು – ಮುಂದಿನ ಸಂಚಿಕೆಯಲ್ಲಿ*

**ರಸಪ್ರಶ್ನೆ ಮತ್ತು ಪದಬಂಧ**

ಸರಿಯಾದ ಉತ್ತರಗಳನ್ನು ಕಳುಹಿಸಿದವರ ಹೆಸರುಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು

– *ಸಂಪಾದಕ*

# ಗಜ್ಜುಗದ ಮರ ಲತಾಕರಂಜ

ಡಾ|| ರಾಮದಾಸ್
ದೂ: 26756032, ಮೊ: 9900490932

ಈ ಸಸ್ಯವು ಬಳ್ಳಿಯ ರೀತಿಯಲ್ಲಿ ಸರ್ವಾಂಗ ಮುಳ್ಳುಗಳಿಂದ ಪೊದೆಯಾಗಿ ಬೆಳೆಯುತ್ತದೆ. ಇದು ಭಾರತದಲ್ಲಿ ಸಮುದ್ರ ತೀರ ಪ್ರದೇಶಗಳಲ್ಲಿ ಬೊಂಬಾಯಿ, ಬಂಗಾಳ, ದಕ್ಷಿಣ ಭಾರತ ಬಯಲು ಪ್ರದೇಶಗಳಲ್ಲಿ ಬೆಳೆಯುತ್ತದೆ. ಆಧುನಿಕ ಕಾಲದಲ್ಲಿ ಈ ಸಸ್ಯವನ್ನು ತೋಟಗಳಿಗೆ ಬೇಲಿಯಾಗಿ ಹಾಕುತಾರೆ. ಉಪಯುಕ್ತ ಔಷಧಿ ಸಸ್ಯವನ್ನಾಗಿ ಬೆಳೆಸುತ್ತಾರೆ. ಇದರ ಎಲೆಗಳು ಎದುರು-ಬದುರು ಬೆಳೆದಿರುತ್ತದೆ. ಇದರ ಕಾಯಿ ಅಂಟುವಾಳ (ರೀಠಾ) ಕಾಯಿಯ ಗಾತ್ರದಲ್ಲಿರುತ್ತದೆ. ಮೇಲಿನ ತೊಗಟೆ ತೆಗೆದರೆ ಒಳಗಡೆ ನಯವಾದ ಬೀಜ ದೊರೆಯುತ್ತದೆ. ಈ ಬಳ್ಳಿಯು ಮೇ ತಿಂಗಳಲ್ಲಿ ಹೂವು ಬಿಟ್ಟು ಆಗಸ್ಟ್-ನವೆಂಬರ್ ತಿಂಗಳಿನಲ್ಲಿ ಕಾಯಿ ಸಿಗುತ್ತದೆ. ಹೆಸರುಗಳು : - ಸಂ-ಪೂತಿಕರಂಜ, ಲತಾಕರಂಜ, ಕುಭೇರಾಕ್ಷ-ನಾರುವ ಹುಲಿಗಲು ಹಿಂ-ಕಂಟಕರೇಜ್ ತೆ-ಗಾಚಚಾಕಕಾಯಿ, ತ-ಗಾಚಚಾಕಕಾಯಾ, ಇ-ಫೀವರನಟ್.

ಗುಣ: - ಪೂತಿಕರಂಜಜಂಪತ್ರಂ ಲಘು ವಾತಕಫಾ ಪಹಮ್ ।ಭೇದವಂ ಕಟುಕಂ ಪಾಕೇ ವೀರ್ಯೋಷ್ಣಂ ಶೋಫನಾಶನಮ್ ।
(ನಿ.ಸಾ.ಸಂ)

ಶೋಥಘ್ನು ಮುಷ್ಣ ವಿರ್ಯಂಚಪತ್ರಂ ಪೂತಿಕರಂಜಮಮ್
(ಸು.ಸೂ.ಅ-46)

ಪ್ರಮೇಹ-ಕುಷ್ಠ ಮೂಲವ್ಯಾಧಿ, ವ್ರಣ, ವಾತ, ಕ್ರಿಮಿನಾಶಕವಾದದ್ದು. ವಿಪಾಕದಲ್ಲಿ ಕಟುವಾಗಿರುತ್ತದೆ. ದೀಪಕವೂ, ಆಗಿದೆ. ಶ್ವಾಸಕಾಸಗಳ ತೊಂದರೆ ಪರಿಹರಿಸಿ ಗರ್ಭಾಶಯಕ್ಕೆ ಚೈತನ್ಯ ಉಂಟುಮಾಡುತ್ತದೆ. ಎಲೆ, ಹೂವು, ಕಾಯಿ, ಬೇರು ಎಲ್ಲವು ವಿಶಿಷ್ಟ ರೀತಿಯಲ್ಲಿ ರೋಗ ನಿವಾರಕ ಔಷಧ ದ್ರವ್ಯಗಳಾಗಿರುತ್ತದೆ. ಪೊಪ್ಪು- ಬಲಕಾರಿಯು, ಜ್ವರ, ನಿತ್ರಾಣ, ಶಿರಃಶೂಲ, ಕೀಲುವಾತ ಮೊದಲಾದವುಗಳಿಗೆ ಸಿದ್ಧಔಷಧಿಯಾಗಿದೆ.

**ಸರಳ ಚಿಕಿತ್ಸೆಗಳು :**

ಜ್ವರದಲ್ಲಿ:- ಪೊಪ್ಪನ್ನು ಕುಟ್ಟಿ ಪುಡಿ ಮಾಡಿ ಕಷಾಯ ತಯಾರಿಸಿ ವೇಳೆಗೆ ಅರ್ಧ ಟೀ ಚಮಚ ಕಷಾಯವನ್ನು ಜೇನುತುಪ್ಪದಲ್ಲಿ ಸೇರಿಸಿ ದಿನಕ್ಕೆರಡು ಬಾರಿ ಸೇವನೆ ಮಾಡಿದರೆ ಜ್ವರ ಗುಣವಾಗುತ್ತದೆ.

ವೃಷಣ ಊತ ಮತ್ತು ನೋವು:- ಗಜ್ಜುಗದ ಸೊಪ್ಪನ್ನು ನೀರಿನಲ್ಲಿ ನುಣ್ಣಗೆ ಅರೆದು ಸ್ವಲ್ಪ ಬಿಸಿಮಾಡಿ ಅಂಡಗಳಿಗೆ (TESTIS) ಲೇಪನ ಮಾಡಿ ಅದರ ಮೇಲೆ ಹರಳು ಎಲೆಗಳನ್ನಿಟ್ಟು ಸುತ್ತುವುದು ಕಾಲಕ್ರಮೇಣ ಊತ, ನೋವು ನಿವಾರಣೆ ಆಗುತ್ತೆದೆ.

ಋತು ಶೂಲಹರ ಚೂರ್ಣ:- ಪೊಪ್ಪಿನ ಚೂರ್ಣ ಕಾಲು ಭಾಗ ಶಂಖಭಸ್ಮ ಕಾಲುಭಾಗ, ಹಿಂಗಾಷ್ಟಕ ಚೂರ್ಣ ಅರ್ಧಭಾಗ ಎಲ್ಲವನ್ನು ಸೇರಿಸಿ ಇದಕ್ಕೆ ಎರಡು ಅಥವಾ ಮೂರು ವೇಳೆ ಅರ್ಧ ಗ್ರಾಂ, ಅಥವಾ ಒಂದು ಗ್ರಾಂ, ಪ್ರಮಾಣದಲ್ಲಿ ಅನುಪಾನಗಳಿಂದ ಸೇವಿಸಿದರೆ ಗುಣವಾಗುತ್ತದೆ.

ಗೂರಲು ವ್ಯಾಧಿಗಳಿಗೆ : - ನಾಲ್ಕು ಗಜ್ಜುಗದ ಕಾಯಿಗಳನ್ನು ತೆಗೆದುಕೊಂಡು ಕಾಯಿಯ ಮೇಲಿನ ತೊಗಟೆಯನ್ನು ಸುಟ್ಟು ತಣ್ಣಗೆ ಆದ ನಂತರ ಒಳಗಿನ ಪೊಪ್ಪನ್ನು ನಯವಾಗಿ ಚೂರ್ಣಿಸಿ ಶುದ್ಧವಾದ ಬಾಟಲಿನಲ್ಲಿಟ್ಟು ವೇಳೆಗೆ ಒಂದು ಚಿಟಿಕೆ ಅಂದರೆ ಐದು ಗುಂಜಿಯಿಂದ ಹತ್ತು ಗುಂಜಿಯವರೆಗೆ ನೀರಿನಲ್ಲಿ ಕಲಸಿ ಸೇವನೆ ಮಾಡುತ್ತಾ ಬಂದರೆ ಗುಣವಾಗುತ್ತದೆ.

ರಕ್ತ ಶುದ್ಧಿಗೆ ಮತ್ತು ಕರುಳಿನ ಕ್ರಿಮಿನಾಶಕ್ಕೆ :- ಆಗ ತಾನೆ ಕಿತ್ತು ತಂದ ಒಂದು ಹಿಡಿ (ಮುಷ್ಟಿ) ತಾಜಾ ಎಲೆಗಳನ್ನು ನೀರಿನಲ್ಲಿ ನುಣ್ಣಗೆ ಅರೆದು ಬಟ್ಟೆಯಿಂದ ಸೋಸಿಕೊಂಡು ದಿನಕ್ಕೆ ಒಂದು ವೇಳೆಗೆ ಅರ್ಧ ಅಥವಾ ಒಂದು ಟೀ ಚಮಚ ಪ್ರಮಾಣದಲ್ಲಿ ರಸದ ಸೇವನೆಯಿಂದ ಕ್ರಿಮಿಗಳು ನಾಶವಾಗಿ ರಕ್ತ ಶುದ್ಧಿಯಾಗುತ್ತದೆ.

**With Best Compliments From :**

**ಬಸವನಗುಡಿ ಆಯುರ್ವೇದ ಭವನ**

**BASAVANAGUDI AYURVED BHAVAN**

**BUSINESS HOURS : 9-00 a.m. to 9-30 p.m.**
**OPEN ON SUNDAYS ALSO**

All Reputed Company Ayurvedic Medicines Available
ಎಲ್ಲಾ ಪ್ರಸಿದ್ಧ ಕಂಪನಿಗಳ ಆಯುರ್ವೇದ ಔಷಧಿಗಳು ದೊರೆಯುತ್ತವೆ.

# 102, Gandhi Bazar, Main Road, (Opp. Band Box)
Basavanagudi, Bangalore - 560 004
Ph : 69597924, 26916616

# ಆಧುನಿಕ ಸಮಾಜದಲ್ಲಿ ರಸಾಯನ ಚಿಕಿತ್ಸೆಯ ಮಹತ್ವ

स्वस्त्यस्य स्वास्थ्य रक्षणं ।
आतुरस्य विकार प्रशमन ॥

ಆಯುರ್ವೇದದ ಮೂಲ ಸಿದ್ಧಾಂತವೇ ಇದಾಗಿದ್ದು ಮೊದಲು ಸ್ವಸ್ಥ ವ್ಯಕ್ತಿಯ ಆರೋಗ್ಯ ರಕ್ಷಣೆಗೆ ಗಮನ ಕೊಟ್ಟಿದ್ದಾರೆ. ಹಾಗಾಗಿ ಆರೋಗ್ಯವಂತ ಸಮಾಜದ ಸೃಷ್ಟಿ ಸ್ವಸ್ಥ ವ್ಯಕ್ತಿಗಳಿಂದ ಮಾತ್ರ ಸಾಧ್ಯ.

ಸ್ವಾಸ್ಥ್ಯದ ನಿರೂಪಣೆ ಸುಶ್ರುತಾಚಾರ್ಯರು ಹೇಳಿರುವಂತೆ

समदोष समाग्निश्च समधातु मलक्रियाः ।
प्रसन्नात्मेन्द्रिय मनः स्वस्थ इत्यभिदीयते ॥

ಇದನ್ನೇ ಅನುಕರಿಸಿದ WHO - HEALTH IS A STATE OF COMPLETE PHYSICAL MENTAL, SPIRITUAL AND SOCIAL WELL BEING AND NOT MERELY THE ABSENCE OF DISEASE. ಹೀಗೆ ಗಾಢವಾದ ಅರ್ಥಕೊಡುವ ಸ್ವಾಸ್ಥ್ಯವನ್ನು ಹೊಂದುವುದು ರಸಾಯನ ಚಿಕಿತ್ಸೆ ಮತ್ತು ಆಚಾರ ರಸಾಯನದಿಂದ ಮಾತ್ರ ಸಾಧ್ಯ. ರಸಾಯನವೆಂದರೆ: **लाभोपायोहि शस्त्रानां रसादीनां रसायनम् । च. चि.**

ರಸಾಯನದಿಂದ ಆಗುವ ಫಲವನ್ನು ಈ ರೀತಿಯಾಗಿ ವರ್ಣಿಸಿದ್ದಾರೆ

रसायनं च तज्ञेयं यज्जरा व्याधि नाशनम् ।
दीर्घमायुः स्मृतिं मेधामारोग्यं तरूणं वयः ।
प्रभा वर्ण स्वरौदार्यं देहेन्द्रिय बलं परं ॥
वाक् सिद्धिं प्रणतिं कालि लभते वा रसायनम् ॥

**ಇವು ರಸಾಯನ ಚಿಕಿತ್ಸೆಯಿಂದಾಗುವ ಉಪಯೋಗಗಳು.**

ಈಗಿನ ಚಿಕಿತ್ಸಾ ಪದ್ಧತಿಗನುಸಾರವಾಗಿ ರಸಾಯನ ಚಿಕಿತ್ಸೆಯನ್ನು ಈ ರೀತಿ ವಿಂಗಡಿಸಿಕೊಳ್ಳಬಹುದು.

1. ದೈಹಿಕ ಚಿಕಿತ್ಸೆಗೆ ರಸಾಯನ
2. ಮೇಧ್ಯ ರಸಾಯನ
3. ಕುಮಾರ ರಸಾಯನ
4. ಓಜೋವರ್ಧಕ ರಸಾಯನ - ಕ್ಯಾನ್ಸರ್‌ನಂತಹ ಮಾರಣಾಂತಿಕ ಚಿಕಿತ್ಸೆಯ ಅಡ್ಡ ಪರಿಣಾಮ ತಡೆಲು ನೀಡುವ ರಸೌಷಧ.

ಮೊದಲಿಗೆ ದೇಹವನ್ನು ರೋಗಗಳಿಂದ ರಕ್ಷಣೆಗಾಗಿ ಬಳಸುವ ರಸಾಯನ ದ್ರವ್ಯಗಳು - ಇವುಗಳಲ್ಲಿ ಚರಕೋಕ್ತ, ಬಲ್ಯ, ಬೃಂಹಣೀಯ, ಜೀವನೀಯ, ಸ್ತನ್ಯಜನಕ ಮುಂತಾದವುಗಳನ್ನು ಸೇರಿಸಿಕೊಳ್ಳಬಹುದು ಇವುಗಳೆಂದರೆ - ಅಶ್ವಗಂಧ, ಶತಾವರಿ, ಗುಡೂಚಿ, ಮಧುಯಷ್ಠಿ, ಆಮಲಕಿ, ಹರೀತಕಿ, ವಿಭೀತಕಿ, ಶಿಲಾಜಿತು, ಘೃತ, ಕ್ಷೀರ ಇವು ಹೆಚ್ಚಾಗಿ ಬಳಕೆಯಲ್ಲಿರುವ ದ್ರವ್ಯಗಳು ಹಾಗೆಯೇ ಇವುಗಳಿಂದ ತಯಾರಿಸಿದ ಔಷಧಗಳಾದ ಚ್ಯವನಪ್ರಾಶ, ಬ್ರಹ್ಮರಸಾಯನ, ಅಜಮಾಂಸ ರಸಾಯನ, ಅಮೃತ ಪ್ರಾಶ, ಕೂಷ್ಮಾಂಡ ರಸಾಯನ, ನರಸಿಂಹ ರಸಾಯನ, ಶತಾವರಿ ಲೇಹ್ಯ, ಆಮಲಕಿ ರಸಾಯನ ಇತ್ಯಾದಿಗಳನ್ನು ದೇಹ ಪರೀಕ್ಷೆಯ ನಂತರ ಯಾವುದು ಯಾವ ಪ್ರಮಾಣದಲ್ಲಿ ಯಾರಿಗೆ ಸೂಕ್ತವೆಂದು ವೈದ್ಯರು ನಿರ್ಧರಿಸಬಹುದು. ನಂತರ ಮೇಧ್ಯರಸಾಯನ - ಚರಕಾಚಾರ್ಯರು 4 ವಿಧವೆಂದು ವಿಂಗಡಿಸಿದ್ದಾರೆ ಅವುಗಳು :

1. ಮಂಡೂಕ ಪರ್ಣಿಸ್ವರಸ
2. ಹಾಲಿನೊಂದಿಗೆ ಯಷ್ಠಿಮಧುಚೂರ್ಣ
3. ಗುಡೂಚಿ ಸ್ವರಸ (ಮೂಲ, ಪುಷ್ಪಗಳ ಸಹಿತ)
4. ಶಂಖಪುಷ್ಪಿ ಕಲ್ಕ

ಇವುಗಳನ್ನು ಮಾನಸಿಕ ದೋಷಗಳಾದ ಉನ್ಮಾದ, ಅಪಸ್ಮಾರ, ನಿದ್ರಾಹೀನತೆ, ರಕ್ತದೊತ್ತಡ, ಮನೋದೌರ್ಬಲ್ಯ, ಮರೆಗುಳಿತನ, ಭಯ ಮುಂತಾದ ಕಡೆ ಅಲ್ಲದೆ ದೈಹಿಕ ವ್ಯಾಧಿಗಳಲ್ಲೂ; ಈಗಿನ ಒತ್ತಡಯುಕ್ತ ಜೀವನ ಶೈಲಿಯಲ್ಲಿ ಮೇಧ್ಯ ರಸಾಯನದ ಉಪಯೋಗ ಬಹಳಷ್ಟಿದೆ. ಹಾಗಾಗಿ ಶ್ವಾಸ, ಕಾಸ ವಾತವ್ಯಾಧಿ, ಶಿರಶೂಲ, ಸ್ತ್ರೀರೋಗ (ಕೃಚ್ಛ್ರಾರ್ತವ, ರಕ್ತಪ್ರದರ, ಶ್ವೇತಪ್ರದರ, ಮುಟ್ಟು ನಿಲ್ಲುವ ಸಮಯ) ರೋಗದ ಮೂಲವನ್ನು ಸರಿಯಾಗಿ ತಿಳಿದುಕೊಂಡು ಮೇಧ್ಯರಸಾಯನ ಪ್ರಯೋಗಿಸಬಹುದು. ಮೇಧ್ಯ ರಸಾಯನದಲ್ಲಿ ಉಪಯೋಗಿಸುವ ಮೂಲಿಕೆಗಳು ಬ್ರಾಹ್ಮಿ, ಶಂಖಪುಷ್ಪಿ, ಜಟಮಾಂಸಿ, ಸರ್ಪಗಂಧ, ಮಧುಯಷ್ಠಿ ಹಾಗೆ ಔಷಧಗಳೆಂದರೆ ಸಾರಸ್ವತಾರಿಷ್ಟ, ಸಾರಸ್ವತ ಘೃತ ಮತ್ತು ಚೂರ್ಣ, ಮಾನಸಮಿತ್ರವಟಿ, ಕಲ್ಯಾಣಕ ಘೃತ, ಬ್ರಾಹ್ಮೀ ಘೃತ, ಸ್ಮೃತಿಸಾಗರ ರಸ ಇತ್ಯಾದಿ. ಬಾಹ್ಯ ಪ್ರಯೋಗದಲ್ಲಿ (ನಸ್ಯ, ಅಭ್ಯಂಗ, ಧಾರಾ) ಬ್ರಾಹ್ಮೀ ತೈಲ, ತುಂಗದ್ರುಮತೈಲ, ಮಂಜಿಷ್ಠಾದಿ ತೈಲ ಇತ್ಯಾದಿಗಳು.

**ಕುಮಾರ ರಸಾಯನ**-ಹುಟ್ಟಿದ ಮಗುವಿನ 13ನೇ ದಿನದಿಂದಲೆ ಸಾಮಾನ್ಯವಾಗಿ ವಚಾ (ಸ್ವರ್ಣಯುಕ್ತ), ಯಷ್ಠಿಮಧು, ಪಿಪ್ಪಲಿ, ಮರೀಚ ಮುಂತಾದವುಗಳನ್ನು ತಾಯಿಯ ಹಾಲಿನಲ್ಲಿ ತೇಯ್ದು ನೆಕ್ಕಿಸುವುದು ರೂಢಿ. ಅಲ್ಲದೆ ವೈದ್ಯರು ಸಾಮಾನ್ಯ ರಸಾಯನ ದ್ರವ್ಯಗಳನ್ನು ಕಡಿಮೆ ಮಾತ್ರೆಯಲ್ಲಿ ನೀಡಬಹುದು. ಹಾಗೆಯೆ ಬೆರಳು ಚೀಪುವುದು, ಶಯ್ಯಾಮೂತ್ರತಾ, ನಿದ್ರೆಯಲ್ಲಿ ಓಡಾಡುವುದು,

ಕಿರಿಚಾಡುವುದು ಇತ್ಯಾದಿ ಮಾಡುವಾಗ ಮೇಧ್ಯರಸಾಯನಗಳ ಪ್ರಯೋಗದಿಂದ ಬಹಳ ಉತ್ತಮ ಫಲಿತಾಂಶ ಕಂಡುಬಂದಿದೆ.

ಕುಮಾರ ರಸಾಯನದಲ್ಲಿ ಸಾಮಾನ್ಯವಾಗಿ ಅರವಿಂದಾಸವ, ಗುಡಪಿಪ್ಪಲಿ, ಬಾಲವಟಿ, ಕುಮಾರ ಕಲ್ಯಾಣರಸ ಮುಂತಾದವುಗಳನ್ನು ದೇಹಬಲ, ಪ್ರಕೃತಿ ಮುಂತಾದವುಗಳ ಪ್ರಕಾರ ನೀಡಬಹುದಾಗಿದೆ.

ದೀರ್ಘಕಾಲಿಕ ರೋಗ ಚಿಕಿತ್ಸೆಯಲ್ಲಿ (Aids, cancer) ಅವುಗಳ ದುಷ್ಪರಿಣಾಮ ತಡೆಯಲು ಮೇಲೆ ಹೇಳಲ್ಪಟ್ಟ ರಸಾಯನೌಷಧಗಳನ್ನು ರೋಗಬಲ ನಿರ್ಣಯಿಸಿಕೊಂಡು ಉಪಯೋಗಿಸುವುದರಿಂದ ಅಂತಹ ವ್ಯಕ್ತಿಗಳಿಗೆ ದೈಹಿಕ ಹಾಗೂ ಮಾನಸಿಕ ಬಲವರ್ಧನೆಯಾಗುತ್ತದೆ.

ಆಧುನಿಕ ವಿಜ್ಞಾನದಲ್ಲೂ ಅನೇಕ ಪ್ರಯೋಗ ಪರೀಕ್ಷೆ ನಡೆಸಿ ನಮ್ಮ ರಸಾಯನ ದ್ರವ್ಯಗಳ ಮಹತ್ವವನ್ನು ಒಪ್ಪಿಕೊಂಡಿದ್ದಾರೆ. ಇಂತಹ ಸಮಯದಲ್ಲಿ ನಾವು ರಸಾಯನೌಷಧಿಗಳ ಮಹತ್ವವನ್ನು ಸರಿಯಾಗಿ ಜನರಿಗೆ ಮನದಟ್ಟು ಮಾಡಿಸಿದರೆ ಆಯುರ್ವೇದದ ಮಹತ್ವ ಹೆಚ್ಚು ಜನರಿಗೆ ತಿಳಿಯುತ್ತದೆ. ಸ್ವಸ್ಥ ಸಮಾಜದ ನಿರ್ಮಾಣಕ್ಕೆ ನಮ್ಮ ರಸಾಯನ ಚಿಕಿತ್ಸೆ ಹಾಗೂ ಆಚಾರ ರಸಾಯನಗಳನ್ನು ಕೊಡುಗೆ ನೀಡೋಣ.

ಸರ್ವೇ ಭವಂತು ಸುಖಿನಃ ।
ಸರ್ವೇ ಸಂತು ನಿರಾಮಯಾಃ ॥

– ಡಾ॥ ಶುಭಮಂಗಳ ಆಚಾರ್ಯ
ಮೊಬೈಲ್ – 9880831742

*With best compliments from*

**GURU AYURVEDA BHANDAR**

**Pro:** *Ganesha*



*Ph: 22424981*
*2590 5269*

No. 1. S.N. Complex, 3rd Main, Near Canara Bank
Hanumanthanagar, Bangalore - 560 019

**Working Hours :**

9.30 am. to 2.30 p.m.

4.30 p.m. to 9.30 p.m

Sunday 9.30 a.m. to 1.30 p.m.


CHOLAYIL
ಒತ್ತಿ ಹೇಳಿ ಇಂದಿನ
ಪೀಳಿಗೆಗೆ ಮೆಡಿಮಿಕ್ಸ್‌ನ ಗುಣಶ್ರೇಷ್ಠತೆಯನ್ನು
MEDIMIX
HAND MADE
AYURVEDIC SOAP WITH 18 HERBS
effective for skin problems
ಅಮ್ಮ ಹೇಳ್ದೆ
ಬೇರೆ ಯಾರು ಹೇಳ್ತಾರೆ!
ಶುದ್ಧ ಕೊಬ್ಬರಿ ಎಣ್ಣೆಯ ಗುಣಗಳೊಂದಿಗೆ
18 ಗಿಡ ಮೂಲಿಕೆಗಳ ಅಪೂರ್ವ ಸಂಗಮ ಮೆಡಿಮಿಕ್ಸ್ ಆಯುರ್ವೇದಿಕ್ ಸೋಪ್

*With best compliments from*

*B.S. Rajesh*

# HILLGREEN HERBALS PVT. LTD.

No. 13th Cross, Vasanthanagar East
Bangalore - 560 052 (India)

Ph : 91-80-41235313, 22250717, 22352654.
Fax : 91-80-22251307

E-mail : hillin@vsnl.com
Website : www.hillgreen.com

# ಚಂದಾ ದರ

| | |
|---|---|
| ಬಿಡಿ ಪ್ರತಿ | ರೂ. 30/- |
| ವಾರ್ಷಿಕ-ನಾಲ್ಕು ಸಂಚಿಕೆಗಳು | ರೂ. 100/- |
| ವಿದ್ಯಾರ್ಥಿಗಳಿಗೆ ವಾರ್ಷಿಕ | ರೂ. 80/- |

# ಜಾಹಿರಾತು ದರ

| | | ಒಂದು ಸಂಚಿಕೆ | ವಾರ್ಷಿಕ |
|---|---|---|---|
| I | ಒಳ ಪುಟಗಳು | | |
| | ಅರ್ಧಪುಟ | ರೂ. 1000/- | ರೂ. 3000/- |
| | ಪೂರ್ಣ ಪುಟ | ರೂ. 1500/- | ರೂ. 4500/- |
| II | ಒಳ ರಕ್ಷಾ ಪುಟ | ರೂ. 3000/- | ರೂ. 9000/- |
| III | ಹಿಂಬದಿ ರಕ್ಷಾ ಪುಟ | ರೂ. 5000/- | ರೂ. 15,000/- |

# ವಿಶೇಷ - ಪ್ಯಾಕೇಜ್

| | | | |
|---|---|---|---|
| 1. | ಎರಡು ಪೂರ್ಣ ಒಳ ಪುಟ | ರೂ. 4500 (100 ಪ್ರತಿಗಳು ಉಚಿತ) | ರೂ. 15,550+ಪ್ರತಿ ಬಾರಿ (100 ಪ್ರತಿಗಳು ಉಚಿತ) |
| 2. | ಒಂದು ಒಳರಕ್ಷಾ ಪುಟ + ಒಂದು ಒಳಪೂರ್ಣ ಪುಟ | ರೂ. 6000 (100 ಪ್ರತಿಗಳು ಉಚಿತ) | ರೂ. 26,000 ಪ್ರತಿಬಾರಿ (100 ಪ್ರತಿಗಳು ಉಚಿತ) |

ಹೆಚ್ಚುವರಿ ನೂರು ಪ್ರತಿಗಳಿಗೆ - ರೂ. 2000- ಅಧಿಕಸ

ಇತರ ವಿಶೇಷ ಪ್ಯಾಕೇಜ್‌ಗಳಿಗೆ ಸಂಪರ್ಕಿಸಿ :

ಚಂದಾ ಮತ್ತು ಜಾಹೀರಾತುಗಳಿಗೆ ಚೆಕ್/ ಡಿ.ಡಿ.ಗಳನ್ನು ಅಗ್ನಿವೇಶ ಆಯುರ್ವೇದ ಅನುಷ್ಠಾನ ಹೆಸರಿಗೆ ಕಳುಹಿಸಿರಿ.

(ಮೇಲ್ಕಂಡ ಜಾಹೀರಾತು ದರ ಮುಂದೆ ಬರುವ ಸಂಚಿಕೆಗಳಿಗೆ ಅನ್ವಯಿಸುತ್ತದೆ)

ವಿಳಾಸ : ಸಂಪಾದಕರು, ಅಗ್ನಿವೇಶ ಆಯುರ್ವೇದ ಅನುಷ್ಠಾನ, ರಾಷ್ಟ್ರೋತ್ಥಾನ ಪರಿಷತ್, ಕೇಶವ ಶಿಲ್ಪ,
ಕೆಂಪೇಗೌಡ ನಗರ, ಬೆಂಗಳೂರು - 560 019

# ಅಭ್ರಕಃ

"ದೇವ್ಯಾ ರಜೋಭವೇದ್ಗಂಧೋ ಧಾತುಃ ಶುಕ್ರಂ ತಥಾಭ್ರಕಂ ॥"

"ಪಾರ್ವತೀ ದೇವಿಯ ಶೋಣಿತ ಗಂಧಕವು ಮತ್ತು ಶುಕ್ರವು ಅಭ್ರಕವು"

ಮೈಕಾ ಎಂದು ಲ್ಯಾಟೀನ್ ಭಾಷೆಯಲ್ಲೂ, ಟಾಲ್ಕ್ ಅಥವಾ ಗ್ಲಿಮ್ಮರ್ ಎಂದು ಆಂಗ್ಲದಲ್ಲೂ ಕರೆಯುತ್ತಾರೆ.

ದೊರೆಯುವ ಸ್ಥಳ: ಬಿಹಾರ್‌ನ ಹಜಾರಿಭಾಗ್, ಬಂಗಾಳದ ರಾಣೀಗಂಜ್, ಆಂಧ್ರದ ನೆಲ್ಲೂರು, ಕರ್ನಾಟಕದ ಧಾರವಾಡ, ಪಂಜಾಬ್‌ನ ನೂರ್‌ಪುರದಲ್ಲಿ ಭಸ್ಮ ಯೋಗ್ಯವಾದ ಅಭ್ರಕ ದೊರೆಯುತ್ತದೆ.

**ಪ್ರಭೇದ:** "ಪಿನಾಕಂ ನಾಗ ಮಂಡೂಕಂ ವಜ್ರಮಿತ್ಯಾಭ್ರಕಂ ಮತಂ।
ಶ್ವೇತಾದಿ ವರ್ಣಭೇದೇನ ಪ್ರತ್ಯೇಕಂ ತಚ್ಚತುರ್ವಿಧಂ ॥"

ಪಿನಾಕ, ನಾಗ, ಮಂಡೂಕ, ವಜ್ರ ಎಂದು ನಾಲ್ಕು ಪ್ರಭೇದ ಹಾಗೂ ಪ್ರತಿಯೊಂದು ಪ್ರಭೇದದಲ್ಲೂ ಶ್ವೇತ, ಅರುಣ, ಶ್ಯಾಮ, ಪೀತ ಎಂಬ ನಾಲ್ಕು ನಾಲ್ಕು ಉಪಭೇದಗಳಿವೆ.

**ಗುಣಗಳು:**

ರಸ : ಕಷಾಯ ಮಧುರ
ಗುಣ : ಸ್ನಿಗ್ಧ ಶೀತ, ಯೋಗವಾಹಿ
ವೀರ್ಯ : ಶೀತ
ವಿಪಾಕ : ಮಧುರ

ಇದು ವಾತ, ಪಿತ್ತ ಮತ್ತು ಕ್ಷಯವನ್ನು ನಾಶಮಾಡುತ್ತದೆ. ಬುದ್ಧಿಯನ್ನು ಬೆಳೆಸುತ್ತದೆ. ಸಕಲ ವ್ಯಾಧಿಗಳನ್ನು ನಾಶಮಾಡುವಂತಹದ್ದು (ವಿವಿಧ ಅನುಪಾನಗಳೊಂದಿಗೆ ಸೇವಿಸಿದಾಗ) ಅಮೃತ ಸಮಾನ ಗುಣವುಳ್ಳದ್ದು, ವೃಷ್ಯ, ಆಯಸ್ಸಿಗೆ ಹಿತಕಾರಿ, ಬಲದಾಯಕ, ರುಚಿವರ್ಧಕ ಪಾಚಕಾಗ್ನಿಯನ್ನು ಉತ್ತೇಜಿಸುವಂತಹದ್ದು, ಕಫಹರ.

## ಅಭ್ರಕ ಭಸ್ಮವಿಧಿ.

(Ref: ರಸತಂತ್ರ ಸಾರ ಅಥವಾ ಸಿದ್ಧಪ್ರಯೋಗ ಸಂಗ್ರಹ)

**ವಿಧಿ 1 : ಸಹಸ್ರ ಪುಟ**

ಭಾವನಾದ್ರವ್ಯಗಳು: ಅರ್ಕಕ್ಷೀರ, ಸ್ನೂಹಿಕ್ಷೀರ, ಕುಮಾರಿ ಸ್ವರಸ, ಎರಂಡ ಪತ್ರ ಸ್ವರಸ, ನಾಗರಮೋಥ ಕ್ವಾಥ, ಗೋಕ್ಷುರ ಕ್ವಾಥ, ಸಹದೇವಿಕ್ವಾಥ, ನಾಗಬಲಾ ಕ್ವಾಥ, ಅತಿಬಲಾ ಕ್ವಾಥ ಮುಂತಾದ 72 ಔಷಧ ದ್ರವ್ಯಗಳಲ್ಲಿ ಯಾವ ಯಾವ ದ್ರವ್ಯವನ್ನು ಸೇರಿಸಲಾಗುತ್ತದೋ ಅದರಲ್ಲಿ ಪ್ರತಿ ಪುಟಕ್ಕೂ ಭಾವನೆಯನ್ನು ಕೊಡಬೇಕು.

ಗಜಪುಟದಲ್ಲಿ ಬೆರಣಿಯನ್ನು ಕಡಿಮೆ ಹಾಕುವುದರಿಂದ ಕಾವು ಕಡಿಮೆ ಆಗಿ 300–400 ಪುಟ ಆದಾಗ್ಯೂ ಅಭ್ರಕದ ಹೊಳಪು ಹೋಗುವುದಿಲ್ಲ. ಆದರೆ, ಕಾವು ಚೆನ್ನಾಗಿ ಕೊಟ್ಟಾಗ ಕೆಲವೊಮ್ಮೆ 7–8 ಪುಟದಲ್ಲೇ ಅಭ್ರಕವು ನಿಶ್ಚಂದ್ರವಾಗುತ್ತದೆ.

ಯಾವ ಯಾವ ರೋಗಕ್ಕೆ ಅಭ್ರಕವು ಬೇಕೋ ಅದಕ್ಕೆ ತಕ್ಕ ಭಾವನಾ ದ್ರವ್ಯವನ್ನು ಕೊಟ್ಟು ಭಸ್ಮೀಕರಣ ಮಾಡಬಹುದು.

**ವಿಧಿ 2: 100 ಪುಟ : ಅಭ್ರಕ ಭಸ್ಮ**

ಶುದ್ಧ ಧಾನ್ಯಾಭ್ರಕಕ್ಕೆ, ಅರ್ಕಕ್ಷೀರ, ಸ್ನುಹೀಕ್ಷೀರ, ಧತ್ತೂರ ಪತ್ರರಸ ಕದಳೀಕಂದ ರಸ, ಚಿತ್ರಕ ಮೂಲಕ್ವಾಥ, ನಾಗರಮೋಥಕ್ವಾಥ ಶತಾವರೀಕ್ವಾಥ ಗೋಕ್ಷುರಕ್ವಾಥ, ಅಮೃತಸ್ವರಸ, ನಾಗರವೇಲ್ಲಿಕ ಪತ್ರ ಸ್ವರಸ, ಗೋದುಗ್ಧ, ಗೋಮೂತ್ರ, ಕುಮಾರಿ ಸ್ವರಸ ಮುಂತಾದವುಗಳಲ್ಲಿ 12–12 ಗಂಟೆ ಭಾವನೆ ಕೊಡಬೇಕು. ಬಳಿಕ ಸೂರ್ಯನ ಬಿಸಿಲಿಗೆ ಒಣಗಿಸಿ, ಸಂಪುಟ ಮಾಡಿ ಗಜಪುಟ ಕೊಡಬೇಕು. ಹೀಗೆ ಪ್ರತಿಯೊಂದು ದ್ರವ್ಯದಲ್ಲೂ ಏಳು ಏಳು ಬಾರಿ ಪುಟಕೊಟ್ಟರೆ ಒಟ್ಟು 105 ಪುಟದ ಭಸ್ಮ ತಯಾರಾಗುತ್ತದೆ. ಸಹಸ್ರ ಪುಟಿಯ ಅಭಾವದಲ್ಲಿ ಈ ಭಸ್ಮ ಉಪಯೋಗಿಸಬಹುದು.

**ವಿಧಿ 3 – 50 ಪುಟ ಅಭ್ರಕ ಭಸ್ಮ**

ಶುದ್ಧಧಾನ್ಯಾಭ್ರಕಕ್ಕೆ, ನಾಗರಮೋಥಕ್ವಾಥ, ಪುನರ್ನವಾ, ಕಾಸಮರ್ದ, ವಿಳ್ಳೆದೆಲೆ ಸ್ವರಸ, ಅರ್ಕಕ್ಷೀರ, ಗೋಮೂತ್ರ, ಲೋಧ್ರ, ಸಫೇದ್ ಮುಸಲಿಕ್ವಾಥ, ಗೋಕ್ಷುರ, ಗುಲಗಂಜಿಕ್ವಾಥ, ಕದಳೀಕಂದ ಸ್ವರಸ, ನೈದಿಲೆಯರಸ, ಕುಮಾರಿರಸ.

ಈ 15 ದ್ರವ್ಯಗಳಿಂದ ಕ್ರಮವಾಗಿ 4–4 ಭಾವನಾ ಕೊಡಬೇಕು ಪ್ರತಿ ಬಾರಿಯೂ ಗುಳಿಗೆ ಮಾಡಿ, ಸೂರ್ಯನ ತಾಪಕ್ಕೆ ಒಣಗಿಸಿ, ಸಂಪುಟ ಮಾಡಿ ಗಜಪುಟಕ್ಕೆ ಹಾಕಬೇಕು.

**4ನೇ ವಿಧಿ:**

ಧಾನ್ಯಾಭ್ರಕವನ್ನು ಕುಕ್ರೋಂಧಾದ ಸ್ವರಸದಲ್ಲಿ ಅರೆದು ಚಿಕ್ಕ ಚಿಕ್ಕ ಗುಳಿಗೆಯನ್ನೂ ಮಾಡಿ, ಒಳ್ಳೆ ಬಿಸಿಲಿನಲ್ಲಿ ಒಣಗಿಸಬೇಕು. ಒಂದು ಹಂಡೆಯಲ್ಲಿ ಅದನ್ನು ಕಟ್ಟಿ, ಗಜಪುಟಿಯಲ್ಲಿ ಶಾಖಕೊಡಬೇಕು. ಈ ರೀತಿ 10 ಗಜಪುಟ ಕೊಟ್ಟ ನಂತರ, ಅರ್ಕಪತ್ರದ ರಸದ ಏಳು ಮತ್ತು ಮನ್ನಾಡಿಕಾಯಿಯ ಚಿಗುರಿನ ಕ್ವಾಥದ 3 ಗಜಪುಟ ಕೊಡುವುದರಿಂದ ನುಣ್ಣನೆಯ 20 ಪುಟಗಳ ಅಭ್ರಕ ಭಸ್ಮ ಸಿಗುತ್ತದೆ.

**5ನೇ ವಿಧಿ :**

"ಔಷಧಿ ಕೃತಿ"ಯಲ್ಲಿ ಹೇಳಿದಂತೆ, ಅಭ್ರಕವನ್ನು ನಿಶ್ಚಂದ್ರವಾಗಿ ಮಾಡಲು, ಅರ್ಕಕ್ಷೀರದಲ್ಲಿ 12 ಘಂಟೆ ಅರೆದು ಚಿಕ್ಕ ಚಿಕ್ಕ ಗುಳಿಗೆ

ಮಾಡಿ ಸೂರ್ಯನ ತಾಪಕ್ಕೆ ಒಣಗಿಸಿ, ಸಂಪುಟದಲ್ಲಿ ಒಂದು ಗಜಪುಟ ಕೊಡುವುದರಿಂದ ಕೆಂಪು ಬಣ್ಣದ ದೋಷಮುಕ್ತ ಭಸ್ಮ ಸಿಗುತ್ತದೆ.

**ವಿಶೇಷ ಸೂಚನೆ:**

ಎಲ್ಲಿಯವರೆಗೂ ಅಭ್ರಕದ ಹೊಳಪು ಇರುತ್ತದೋ ಅಲ್ಲಿಯವರೆಗೆ ಅದನ್ನು ಉಪಯೋಗಿಸಬಾರದು. ಇಲ್ಲದಿದ್ದರೆ ಅದರಿಂದ ಹಾನಿಯುಂಟಾಗುತ್ತದೆ.

**ಉತ್ತಮ ಅಭ್ರಕದ ಲಕ್ಷಣ:**

ನಿಶ್ಚಂದ್ರ, ಅರುಣವರ್ಣ, ಮೃದು, ಸೂಕ್ಷ್ಮ ಹಾಗೂ ಚುಂಬಕ (magnate) ದಲ್ಲಿ ಅದು ಪ್ರವರ್ತಿಸುತ್ತದೆ. ಇದು ಉತ್ತಮ ಅಭ್ರಕದ ಲಕ್ಷಣ.

**ಅಭ್ರಕ ಸತ್ವಪಾತನ ವಿಧಿ**

**ಬೇಕಾಗುವ ದ್ರವ್ಯಗಳು:** ಧಾನ್ಯಾಭ್ರಕ 40 ತೊಲ, ಟಂಕಣ, ಗುಗ್ಗುಳ, ತುಪ್ಪ, ಕಿರುನೆಲ್ಲಿ – ಎಲ್ಲಾ 10–10 ತೊಲ.

ವಿಧಿವಿಧಾನ – ಎಲ್ಲಾ ದ್ರವ್ಯವನ್ನೂ ಚೆನ್ನಾಗಿ ಕುಟ್ಟಿ ಬೆರೆಸಬೇಕು. ಬೆಣ್ಣೆ ತೆಗೆದ ಮಜ್ಜಿಗೆ, ಗಂಜಿ ಅಥವಾ ಹುಣಸೇನೀರನ್ನು 10 ತೊಲ ಹಾಕಿ ಕಲೆಸಿ. ಚಿಕ್ಕ ಚಿಕ್ಕ ಗುಳಿಗೆಗಳನ್ನು ಮಾಡಿ ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಬೇಕು. ಆಮೇಲೆ ಹಂಡೆಯಲ್ಲಿ ಹಾಕಿ ಭಟ್ಟಿ ಯಂತ್ರದಲ್ಲಿಟ್ಟು ಇದ್ದಲಿನ ಪ್ರಖರವಾದ ಅಗ್ನಿಯನ್ನು ಕೊಟ್ಟು ದ್ರವೀಕರಿಸಬೇಕು. ನಂತರ ಅದನ್ನು ಸಮತಟ್ಟಾದ ನೆಲದ ಮೇಲೆ ಹರಡಿ, ಇದು ತಣ್ಣಗಾದ ಮೇಲೆ ಚಿಕ್ಕ ಚಿಕ್ಕದಾದ, ಬೇರೆ ಬೇರೆ ಆಕಾರದ, ಕೊಂಚ ಹೊಳಪಿನಿಂದ ಕೂಡಿದ್ದಾಗಿರುತ್ತದೆ. ಮಿಕ್ಕ ಕರೀಬಣ್ಣದ ಕಿಟ್ಟ ಭಾಗ ಅಧಿಕವಾಗಿರುತ್ತದೆ ಅದನ್ನು ಬಿಟ್ಟು ಬಿಡಬೇಕು.

ಒಂದು ಗಟ್ಟಿಯಾದ ಕಬ್ಬಿಣದ ಚುಂಬಕದಿಂದ ಆ ಮಿಶ್ರಣದಲ್ಲಿ (ಕಿಟ್ಟದಲ್ಲಿ) ಆಡಿಸಿ ಅದರಲ್ಲಿ ಚುಂಬಕದಲ್ಲಿ ಅಂಟಿಕೊಳ್ಳುವುದನ್ನು ಸಂಗ್ರಹಿಸಿಕೊಳ್ಳಬೇಕು; ಅವಶ್ಯವಿದ್ದಲ್ಲಿ, ಆ ಸಂಗ್ರಹವಾದ ಕಣಗಳನ್ನು ಮತ್ತೊಮ್ಮೆ ಮೂಷದಲ್ಲಿ ಹಾಕಿ ತೀವ್ರಾಗ್ನಿಯಿಂದ ಪುಟ ನೀಡಬೇಕು ಚಿಕ್ಕ ಕಣಗಳು ವಿಶೇಷ ಕಾಂತಿಯಿಂದ ಹೊಳೆಯುತ್ತದೆ. ಇದು ಅಸಲೀ ಸತ್ವ ಇದರಲ್ಲಿ ವಿಶೇಷವಾಗಿ ಲೋಹ ಇರುತ್ತದೆ. ಇದಕ್ಕೆ ಜಂಗು ಹತ್ತುವುದಿಲ್ಲ ಮತ್ತು ಹಾರೆಯಿಂದ ಹೊಡೆದರೆ ಪುಡಿಪುಡಿಯಾಗುತ್ತದೆ. ಇದನ್ನೇ ಉತ್ತಮ ಸತ್ವವೆಂದು ತಿಳಿಯಬೇಕು.

**ಕೋಷ್ಠಕ ಯಂತ್ರ:**

16 ಅಂಗುಲ ಎತ್ತರ, ಒಂದೊಂದು ಮೊಳ ಉದ್ದ ಮತ್ತು ಅಗಲದ ಒಂದು ಗೂಡು ಕಟ್ಟಬೇಕು. ಎರಡು ಗೋಡೆಯ ಬದಿಗೆ ಸತ್ವ ಶೇಖರಿಸುವ ಸಲುವಾಗಿ 2 ಸಾಧಾರಣ ತೂತುಗಳನ್ನು ಮಾಡಬೇಕು. ಅದರ ಮೇಲಿನ ಭಾಗದಲ್ಲಿ ಒಂದು ತಟ್ಟಾದ ನೆಲ ಹಾಸನ್ನು ಹಾಕಬೇಕು. ಈ ಸಮತಟ್ಟಾದ ಜಾಗದ ಮಧ್ಯಭಾಗದಲ್ಲಿ ಸತ್ವಪಾತನ ಯೋಗ್ಯವಾದ ಧಾತುಪೂರ್ಣ ಮೂಷವನ್ನು ಹಾಕಿ. ಗೋಡೆಯ ನಾಲ್ಕೂ ಬದಿ ಕಲ್ಲಿದ್ದಲನ್ನು ತುಂಬಿ ಉರಿಹಾಕಬೇಕು– ಹಾಗಾದಾಗ ತೂತಿನ ಕೆಳಗಿಟ್ಟ ತಟ್ಟೆಯಲ್ಲಿ ಸತ್ವಯುಕ್ತ ಅಭ್ರಕ ಸಂಗ್ರಹವಾಗುತ್ತದೆ.

**ಸತ್ವವನ್ನು ಭಸ್ಮ ಮಾಡುವ ವಿಧಾನ:**

ಮೇಲ್ಕಂಡ ರೀತಿಯಲ್ಲಿ ದೊರೆತ ಸತ್ವವನ್ನು ಚೆನ್ನಾಗಿ ಕುಟ್ಟಿ, ವಸ್ತ್ರಗಾಳಿತ ಮಾಡಿ ಅದರ 1ನೇ ಹತ್ತರಷ್ಟು ಹಿಂಗುಳ ಮತ್ತು ಕುಮಾರಿ ರಸದಲ್ಲಿ 12ಗಂಟೆ ಅರೆದು ಗುಳಿಗೆ ಮಾಡಿ ಬಿಸಿಲಿನಲ್ಲಿ ಒಣಗಿಸಿ, ಗಟ್ಟಿ ಶರಾವ ಸಂಪುಟದಲ್ಲಿ, 5 ಸೇರು ಬೆರಣಿಯ ಕಾವು ಕೊಡಬೇಕು 'ಸಿಂಗರಫ್'ನ್ನು ಪ್ರತಿ ಪುಟದಲ್ಲೂ ಸೇರಿಸಬೇಕು ಈ ರೀತಿ 100 ಅಥವಾ ಅದಕ್ಕೂ ಹೆಚ್ಚು ಪುಟವನ್ನೂ ಕೊಡಬೇಕು. ಕೊನೆಯ ಒಂದೆರಡು ಪುಟಕ್ಕೆ ಅಜರಕ್ತದಲ್ಲಿ ಬೆರೆಸಬೇಕು. (ಇದರಲ್ಲಿ ವಿಶೇಷವಾಗಿ ಕ್ಷಯನಾಶಕ ಗುಣ ಇದೆ).

**ಅಭ್ರಕ ಭಸ್ಮದ ಅಮೃತೀಕರಣ**

ವಿಧಾನ: ತ್ರಿಫಲಾ ಕ್ವಾಥ 16 ಭಾಗ, ಗೋಘೃತ 6 ಭಾಗ ಮತ್ತು ಅಭ್ರಕ ಭಸ್ಮ 10 ಭಾಗ ಮೂರನ್ನು ಕಬ್ಬಿಣದ ಬಾಣಲೆಯಲ್ಲಿ ಹಾಕಿ ಮಂದಾಗ್ನಿಯಲ್ಲಿ ಬೇಯಿಸಬೇಕು. ಈ ರೀತಿ ಮಾಡುವಾಗ ಘೃತದ ಪಾಕದಲ್ಲಿ ಅಥವಾ ಪೂರ್ಣ ಒಣಗುವವರೆಗೂ ಕಾಯಿಸಿದರೆ, ಅಮೃತೀಕರಣವಾಗುತದೆ.

ಅಮೃತೀಕರಣ ಮಾಡುವುದರಿಂದ ಭಸ್ಮದ ಸೌಂದರ್ಯ ಹೊರಟು ಹೋಗುತ್ತದೆಯಾದರೂ ಅಭ್ರಕದ ಗುಣದಲ್ಲಿ ಉತ್ತಮತರ ವೃದ್ಧಿಯಾಗುತ್ತದೆ ಇದರಿಂದ, ಮುಪ್ಪು ಮೃತ್ಯು ಮತ್ತು ಅನೇಕ ರೋಗ ಸಮೂಹವನ್ನು ಶೀಘ್ರದಲ್ಲಿ ವಾಸಿಯಾಗುತ್ತದೆ.

**ಮಾತ್ರಾ:** 1 ರಿಂದ 2ರತ್ತಿ ದಿನದಲ್ಲಿ 2 ಬಾರಿ

**ಆಮಯಿಕ ಪ್ರಯೋಗ:**

| | |
|---|---|
| 1. ಪ್ರದರದಲ್ಲಿ | ಗೈರಿಕಾ2ರತ್ತಿ, ಅಮೃತಸತ್ವ4 ರತ್ತಿ+ಅಕ್ಕಿ ತೊಳೆದ ನೀರು |
| 2. ಪಿತ್ತಪ್ರಕೋಪದಲ್ಲಿ | ಗೈರಿಕಾ+ಅಮೃತಸತ್ವ+ಸಕ್ಕರೆ, (ಕಲ್ಲುಸಕ್ಕರೆ–ಹಾಲು)ಪ್ರವಾಳ ಪಿಷ್ಟ+ಅಮೃತಸತ್ವ |
| 3. ಪಿತ್ತ ಪ್ರಮೇಹದಲ್ಲಿ | ಗೈರಿಕಾ+ಅಮೃತಸತ್ವ+ಹಿಪ್ಪಲಿ+ ಜೇನು+ಕಲ್ಲು ಸಕ್ಕರೆ |
| 4. ಕಣ್ಣಿನ ದೌರ್ಬಲ್ಯ | ತ್ರಿಫಲಾ ಚೂರ್ಣ + ಜೇನು |
| 5. ಶ್ವಾಸಕಾಸ, ಕಫವೃದ್ಧಿ, ಜೀರ್ಣಜ್ವರ, ಭ್ರಮಾ, ಪ್ರಮೇಹ, ಸಂಗ್ರಹಣೀ, ಪಾಂಡು, ಕ್ಷಯ, ವಿಷವಿಕಾರ, ಕಾಮಲಾ, ಗುಲ್ಮ | ಹಿಪ್ಪಲಿ + ಜೇನು |

6. ಕ್ಷಯ, ಪಾಂಡು ಸಂಗ್ರಹಣಿ, ಶೂಲ, ಆಮ, ಕುಷ್ಠ, ಶ್ವಾಸ, ಪ್ರಮೇಹ, ಕಾಸ ಮಂದಾಗ್ನಿ, ಹಾಗೂ ಹೊಟ್ಟೆನೋವು — ವಾಯುವಿಡಂಗ + ತ್ರಿಕಟು

7. 20 ಬಗೆಯ ಪ್ರಮೇಹದಲ್ಲಿ–ಶಿಲಾಜಿತು ಹಾಗೂ ಜೇನಿನ ಜೊತೆ, ಹಿಪ್ಪಲಿ ಅಥವಾ ಅರಿಶಿನ, ಪಿಪ್ಪಲಿ ಮತ್ತು ಜೇನಿನೊಡನೆ.

8. ಕ್ಷಯದಲ್ಲಿ — ಅರ್ಧರತ್ತಿ ಸುವರ್ಣದ 'ವರ್ಕ್'+ ಸಿತೋಪಲಾದಿ ಚೂರ್ಣ ಅಥವಾ ಚ್ಯವನ ಪ್ರಾಶಾವಲೇಹ ಅಥವಾ ಸಿತೋಪಲಾದಿ ಚೂರ್ಣ+ಜೇನು

9. ಧಾತುವೃದ್ಧಿಗೆ — ಸುವರ್ಣ ಭಸ್ಮ ಅಥವಾ ರಜತಭಸ್ಮ+ನೆಲ್ಲಿ ಮುರಬ್ಬ ಅಥವಾ ಲವಂಗ+ಜೇನು

10. ರಕ್ತಪಿತ್ತಕ್ಕೆ — ಅಳಲೇಕಾಯಿ+ಸಕ್ಕರೆ ಅಥವಾ ಏಲಕ್ಕಿ+ಕಲ್ಲುಸಕ್ಕರೆ

11. ಕ್ಷಯ, ಪಾಂಡು ಮತ್ತು ಅರ್ಶ–ತ್ರಿಕಟು, ತ್ರಿಫಲಾ, ಚತುರ್ಜಾತ, ಕಲ್ಲುಸಕ್ಕರೆ ಮತ್ತು ಜೇನು

12. ಪ್ರಮೇಹ ಮತ್ತು ಮೂತ್ರಕೃಚ್ಛ್ರ — ಏಲಕ್ಕಿ ಗೋಕ್ಷುರ, ಭೂಮ್ಯಾಮಲಕಿ ಮತ್ತು ಕಲ್ಲುಸಕ್ಕರೆ ಜೊತೆ ಕೊಟ್ಟು ಮೇಲೆ ಹಸುವಿನ ಹಾಲು ಕುಡಿಯಬೇಕು.

13. ಜೀರ್ಣಜ್ವರದಲ್ಲಿ — ಅಮೃತಸತ್ವ+ಕಲ್ಲುಸಕ್ಕರೆ ಅಥವಾ ಹಿಪ್ಪಲಿ + ಜೇನು

14. ಅರ್ಶದಲ್ಲಿ — ವಿಳ್ಳೆದೆಲೆಯಲ್ಲಿ ಗೇರುಕಾಯಿ ಮತ್ತು ಅಭ್ರಕ ಭಸ್ಮ ಹಾಕಿ ತಿನ್ನಿಸಬೇಕು.

15. ವಾತರೋಗದಲ್ಲಿ — ಶುಂಠಿ, ಪುಷ್ಕರಮೂಲ, ಭಾರಂಗಿ ಮೂಲ, ಅಶ್ವಥ್ಥ ಚೂರ್ಣ ಮತ್ತು ಜೇನು

16. ಪಿತ್ತರೋಗದಲ್ಲಿ — ಹಸುವಿನ ಹಾಲು+ಕಲ್ಲು ಸಕ್ಕರೆ ಅಥವಾ ಚತುರ್ಜಾತ+ ಕಲ್ಲುಸಕ್ಕರೆ

17. ಕಫರೋಗದಲ್ಲಿ — ಕಟ್‌ಫಲಾ, ಪಿಪ್ಪಲಿ ಮತ್ತು ಜೇನಿನ ಜೊತೆ

18. ಶುಕ್ರಸ್ಥಂಭನಕ್ಕೆ — ಅಫೀಮಿನೊಡನೆ

19. ರಕ್ತ ಮಾಂಸ ಮುಂತಾದ ಧಾತುಗಳ ನಿರ್ಬಲತೆಗೆಃ– ಲೋಹಭಸ್ಮ ಜೇನು ಮತ್ತು ಹಿಪ್ಪಲಿಯೊಡನೆ

20. ಸಂಗ್ರಹಣಿಯಲ್ಲಿ — ದಾಳಿಂಬೆ ರಸ (ಪಾನಕ) ಅಥವಾ ಕುಟಜಾದ್ಯವಲೇಹ

21. ಕಫಜ್ವರ ಹಾಗೂ ಕಾಸದಲ್ಲಿ — ಅಭ್ರಕ ಭಸ್ಮ, ಶೃಂಗಭಸ್ಮ ಯಷ್ಟೀ ಮತ್ತು ಸಿತೋಪಲಾದಿ ಸೇರಿಸಿ ಜೇನಿನಲ್ಲಿ ತಿನ್ನಬೇಕು.

22. ನೂತನ ಕಫಕಾಸ — ಅಭ್ರಕ ಭಸ್ಮ, ಶೃಂಗ ಭಸ್ಮ ಮತ್ತು ಲವಂಗಾದಿ ಚೂರ್ಣದಲ್ಲಿ ಕೊಡಬೇಕು.

ಅಭ್ರಕವು ಷಡ್ರಸಯುಕ್ತವಾದುದರಿಂದ ಇದು ಸರ್ವ ರೋಗಹರವಾಗಿದೆ. ತ್ರಿದೋಷ ಶಾಮಕವಾದ ಶ್ರೇಷ್ಠ ಔಷಧಿಯಾಗಿದೆ. ವೀರ್ಯ, ಆಯು, ಬಲ, ಪ್ರಜ್ಞೆ, ಕಾಂತಿ ಮತ್ತು ರೂಪವನ್ನು ಹೆಚ್ಚಿಸುತ್ತದೆ. ಇದು ದೇಹವನ್ನು ದೃಢಗೊಳಿಸಿ ಸುಸ್ಥಿರಗೊಳಿಸಿ, ರೋಗ, ಮೃತ್ಯುನಾಶ ಮಾಡುತ್ತದೆ.

ಅಭ್ರಕವು ರುಚಿವರ್ಧಕವೂ, ವೃಷ್ಯ, ಲಘು, ಶೀತ, ಮೇಧಾಪ್ರದ, ಸ್ನಿಗ್ಧ ರಸಾಯನ, ದೀಪಕ, ಗ್ರಾಹಿ ಹಾಗೂ ಶ್ರೇಷ್ಠ ಪಾರದಬಂಧಕವಾಗಿದೆ.

**ಅಭ್ರಕ ಸತ್ವದ ಭಸ್ಮ ದೇಹವನ್ನು ದೃಢವಾಗಿಸುತ್ತದೆ.**

ಗರ್ಭಿಣಿ ಸ್ತ್ರೀಯರಲ್ಲಿ ಪ್ರವಾಳ ಮತ್ತು ಸಿತೋಪಲಾದಿ ಚೂರ್ಣದ ಜೊತೆ ಅಭ್ರಕ ಭಸ್ಮ– 3–4 ತಿಂಗಳವರೆಗೆ ಸೇವಿಸಿದಲ್ಲಿ, ಗರ್ಭಕ್ಕೆ ಬಲ ಬರುತ್ತದೆ ಹಾಗೂ ನಿರೋಗಿ(ಯಾಗಿರುತ್ತದೆ. ಸಂಪೂರ್ಣ ನಿಸ್ತೇಜನಾದ ಕ್ಷಯ ರೋಗಿಯಲ್ಲೂ ಸಹಸ್ರಪುಟಿ ಅಭ್ರಕ, ಸುವರ್ಣ ಭಸ್ಮ ಹಾಗೂ ಚ್ಯವನ ಪಾಶದಿಂದ ಪುನಃ ಸುದೃಢರಾಗುತ್ತಾರೆ.

**ಅಭ್ರಕ ಭಸ್ಮದ ಮುಖ್ಯಕಾರ್ಯ:** ಪಂಚತನ್ಮಾತ್ರೆಯಲ್ಲಿ ಹಗುರತೆಯನ್ನು ಕೊಟ್ಟು ಅದರ ಸಂಚಾಲಕ ಇಂದ್ರಿಯಗಳಿಗೆ ಶಕ್ತಿಯನ್ನು ಕೊಡುತ್ತದೆ. ಅದರ ಪೋಷಕ ದ್ರವ್ಯವನ್ನು ಪೂರ್ಣಗೊಳಿಸಿ ವಾತವಾಹಿನಿ ನರಗಳ ಕ್ಷೋಭೆಯನ್ನು ದೂರಮಾಡುತ್ತದೆ.

ಅಭ್ರಕ ಭಸ್ಮವು ಉತ್ತಮ ಯೋಗವಾಹಿ, ಅಂದರೆ

1. ಬೇರೆ ಔಷಧಿಗಳ ಗುಣವನ್ನು ವೃದ್ಧಿಸುತ್ತದೆ.
2. ಮಿಕ್ಕ ಔಷಧಿಗಳ ದೋಷಗಳನ್ನು ದೂರಮಾಡುತ್ತದೆ.
3. ಮಿಕ್ಕ ಔಷಧಿಗಳ ದೋಷಗಳನ್ನು ದೂರಮಾಡಿ ಗುಣವನ್ನು ಹೆಚ್ಚಿಸುತ್ತದೆ.

ಈ ಗುಣಗಳಿಂದ ಬೇರೆ ಬೇರೆ ಗುಣಗಳಿರುವ ಭಿನ್ನವಾದ ಔಷಧಿಗಳ ಜೊತೆ ಸೇರಿಸಿದರೂ, ಅಭ್ರಕ ಮಿಶ್ರಿತ ಇತರ ಔಷಧಿಗಳು– ವೀರ್ಯವತ್ತಾಗಿರುತ್ತದೆ.

ಅಭ್ರಕ ಭಸ್ಮ ಸೇವನೆಯಿಂದ ಸ್ವಲ್ಪ ದಿನದಲ್ಲೇ ಶರೀರದ ಸೂಕ್ಷ್ಮ ಕಣಗಳಲ್ಲಿ ಓಜಸ್ ಪ್ರಾಪ್ತಿಯಾಗಿ, ಕ್ಷೀಣಿಸಿದ ಸ್ಮೃತಿ ಕೇಂದ್ರವನ್ನು ಪೂರ್ವಸ್ಥಿತಿಗೆ ಅಂದರೆ, ದೃಢತೆ ಪ್ರಾಪ್ತವಾಗುತ್ತದೆ.

ಅಭ್ರಕ ಭಸ್ಮದ ಸೇವನೆಯಿಂದ ನಿಶ್ಶಕ್ತ ಮನಸ್ಸಿನ ಹಗುರತೆ, ಸ್ವಲ್ಪ ಸ್ವಲ್ಪವಾಗಿ ಬಲಗೊಂಡು ಸಂಜ್ಞಾವಾಹಿನಿ ಹಾಗೂ ಆಜ್ಞಾವಾಹಿನಿಗಳಲ್ಲಿ ಕ್ಷೀಣತೆ ಕಡಿಮೆಯಾಗಿ ಅಪಸ್ಮಾರಾದಿ ಕ್ಷೋಭೆಗಳು ನಾಶವಾಗುತ್ತವೆ.

ಅರ್ಧಾಂಗವಾತದ ಜೀರ್ಣಾವಸ್ಥೆಯಲ್ಲಿ ರಕ್ತವಾಹಿನಿಯ ವಿಕೃತಿ ಹಾಗೂ ಮಾನಸಿಕ ಕ್ಷೋಭೆಯುಂಟಾಗುತ್ತದೆ ಆಗ ರೋಗ ಶಾಮಕ ಔಷಧಿಯ ಜೊತೆ ಅಭ್ರಕ ಭಸ್ಮ ಬಹು ಉಪಕಾರಿಯಾಗುತ್ತದೆ.

1. ಶೃಂಗಾರಾಭ್ರ ರಸ
2. ಶಂಖಚೂಡ ರಸ
3. ನಾಗಾರ್ಜುನಾಭ್ರ ರಸ
4. ಬೃಹತ್ ಶೃಂಗಾರಾಭ್ರ ರಸ: ಇದು ವಿಶೇಷತಃ ಕಾಸರೋಗ, ತ್ರಿದೋಷಜಕಾಸ, ಹೃದಯರೋಗ, ಹೃದಯ ಶೂಲ, ಪಾರ್ಶ್ವಶೂಲ, ಸ್ವರಭಂಗ, ಕಫಪ್ರಕೋಪ ರೋಗಗಳಲ್ಲಿ ಉಪಯುಕ್ತ 1–2 ರತ್ತಿ ದಿನಕ್ಕೆ 2–3 ಬಾರಿ.

ಇವು ಅಭ್ರಕಭಸ್ಮ ಒಳಗೊಂಡ, ಶ್ವಾಸಕಾಸದಲ್ಲಿ ಉಪಯೋಗಿಸುವ ಕೆಲವು ವಿಶೇಷ ಯೋಗಗಳು.

ವೈದ್ಯ ಎಂ.ಬಿ. ಪ್ರಕಾಶ್,
ದೂ: 9449850502

With Best Compliments From



Himalaya®
HERBAL HEALTHCARE
Researching Nature • Enriching Life • Since 1930
® Regd. Trademark
The Himalaya Drug Company
Makali, Bangalore 562 123, India
www.himalayahealthcare.com
E-mail: write.to.us@himalayahealthcare.com

# MARMA VIJNANA

**Marma Vijnana is one of the least explored and under estimated subject of Ayurveda. Though Sushrutha explains about marmas in detail, not enough follow up has been done on that.** The protection of human life by protecting its vital organs is the essence of marma shastra. This inturn, becomes the basis for further anatomical knowledge. In other words, marmavijnana can be considered the building block and a prerequisite for Shareera Rachana Shastra.

'Marma' is defined as that part of the body where two or more bodily structures like mamsa, sira, snayu, asthi, sandhi meet and where pranashakthi is especially concentrated. Sushruta says,

मर्माणि नाम मांस सिरासाखस्थि सान्धि सान्निपाता :
तेषु स्वभावन एव विशेषेण प्राणस्तिष्टन्ति ॥

Further goes on to comment on sushruta observations and adds,

मारयन्तीति मर्म

That is, they are vital spots which can cause marana (when injured) and hence called a weak spot.

It is also said,

जीवनाधराणि प्रयेण मुनयो : जगु: ।

That these are the spots where exactly life is situated. Sushruta further explains that entities like agni, soma, vayu, satwa, rajas, tamas, panchendriyas, bhutatma together constitute a marma. in other words "extremely sensitized spot is called marma."

**Historical review**

Though, it was Sushruta who explained about the marmas in detail, we can see the concept of the same even in Vedas and Upanishads. Rigveda and its Upaveda – Dhanurveda (science of war, dealing with the usage of bow, arrow, swords etc) mentions about the important points on the body of a warrior that has to be protected from enemies. Atharvanaveda uses the word marma for the first time mentions its importance. It also talks about the designs for armours keeping the marma sthanas in mind. In 1800 BC, Yogi Yajnavalkya explained marmashastra and established it as a tool for healing and enhancing consciousness.

**Number & Classification of marmas.**

Sushruta about 107 marmas in all. These marmas are distributed all over the body for the purpose of convenience and easy understanding, they are classified as

| | | |
|---|---|---|
| Shakhagata marma | - | 44 |
| Uras, Udaragata marmas | – | 12 |
| Prustha bhaga gata marma | - | 14 |
| Greeva, Jatroordwagata | - | 37 |

Further, depending on the predominant anatomical structure involved, in the marma, it is of 5 types

| | | |
|---|---|---|
| Mamasa Marma | - | 11 in number |
| Sira marma | - | 41 |
| Snayu Marma | - | 27 |
| Asthi Marma | - | 8 |
| Sandhi marma | - | 20 |

(Vagbhata adds another category and calls it Dhamani marma)

Depending on the panchabhautikata, marma is classified as,

| | | | |
|---|---|---|---|
| Sadyopranahara | – | Agneya | 19 |
| Kalantara pranahara | – | Jala + Agni | 33 |
| विशल्यध्नकर | – | Vata | 3 |
| Vaikalyakara | – | Jala | 44 |
| Rajakara | – | Agni + Vayu | 8 |

Sushruta has assigned a mortality rate to each type of marmabhighata. In case of injury to a Sadyopranaharamarma – Kills a person in a week Kalantarapranahara – In a paksha or masa. Vishalyaghna – As soon as the impacted shalya is removed

Vaikalyakara – Causes anga Vikalata
Rujakara – Causes ateeva Vedana

| Name | Number | Size in Angula | Effect | Structure | Pathology / Injury causes |
|---|---|---|---|---|---|
| Kshipra | 4 | ½ Angula | K.P.Hara | Snayumarma | Akshepaka, Marana |
| Talahridaya | 4 | 4 | K.P. | Mamsamarma | Vedana, Marana |
| Kurcha | 4 | 4 | Vaikalyakara | Snayumarma | Angamarda, bhramana, vepana |
| Kurcha Shira | 4 | 1 | Rujakara | Snayumarma | Vedana, Shotha |
| Gulpha | 4 | 2 | Rujakara | Sandhi | Vedana, Stabdata, Khanjata |
| Indrabasti | 4 | ½ | K.P. | Mamsamarma | Raktakhsaya, Marana |
| Janu | 4 | 3 | Vaikalyakara | Sandhimarma | Stabdata, Khanjata |
| Ani | 4 | 1 | Vaikalyakara | Snayumarma | Shopha, Stabdata |
| Urvi | 4 | 1 | Vaikalyakara | Siramarma | Raktakshaya, Shosha |
| Lohitaksha | 4 | ½ | Vaikalyakara | Siramarma | Raktakshaya, Pakshaghata |
| A | 4 | 1 | Vaikalyakara | Snayumarma | Shandata, Alpashukrata |
| Guda | 1 | 1 | S.P. | Mamsamarma | Death |
| Basti | 1 | 4 | S.P. | Snayumarma | Ashmari, marana |
| Nabhi | 1 | 4 | S.P. | Siramarma | Marana |
| Hridaya | 1 | 4 | S.P. | Sira | Marana |
| Stanamula | 1 | 2 | K.P. | Sira | Kaphapurna Kosta, marana |
| Stanarohita | 2 | ½ | K.P. | Mamsa | Raktapurna Kosta, marana |
| Apalapa | 2 | ½ | K.P. | Sira | Puyarakta, marana |
| Apastamba | 2 | ½ | K.P. | Sira | Vatapurna Kosta, marana |
| Katikataruna | 2 | ½ | K.P. | Asthi | Raktakshaya, Pandu, Vivarna, marana |
| Kukundara | 2 | ½ | Vaikalyakara | Sandhi | Adahkaya chestahani sparshajnana |
| Nitamba | 2 | ½ | K.P. | Asthi | Daurblaya, marana |
| Pashvasandhi | 2 | ½ | K.P. | Sira | Raktakosta, marana |
| Brinati | 2 | ½ | K.P. | Sira | Ratkasrava, marana |
| Amsaphalaka | 2 | ½ | Vaikalyakara | Asthi | Bahuswapa, Shosha |
| Amsa | 2 | ½ | Vaikalyakara | Snayu | Stabdabahuta |
